Digitized by Arya Samaj Foundation Chennai and eGangotri

ಕಾಶೀ ಶಾಸ್ತ್ರಾರ್ಥ

(ಸಂಸ್ಕೃತ ಮತ್ತು ಕನ್ನಡ)

ಮೂರ್ತಿಪೂಜಾವಿಧಾನವು ವೇದದಲ್ಲಿದೆಯೋ,
ಇಲ್ಲವೋ, ಎಂಬ ವಿಷಯದ ಬಗ್ಗೆ ಕಾಶಿಯ ಪಂಡಿತರುಗಳ ಮತ್ತು
ಸ್ವಾಮೀ ದಯಾನಂದ ಸರಸ್ವತಿಯವರ ನಡುವೆ ನಡೆದ ಶಾಸ್ತ್ರಾರ್ಥದ ವರದಿ

ಆರ್ಯ ಸಮಾಜ ಶ್ರದ್ಧಾನಂದ ಭವನ
ವಜ್ರಮಹೋತ್ಸವ ಸಂಸ್ಕರಣ
ವಿಶ್ವೇಶ್ವರಪುರಂ, ಬೆಂಗಳೂರು–560 004

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

7773

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರ್ಯ ಸಮಾಜ ಶ್ರದ್ಧಾನಂದ ಭವನ ವಜ್ರಮಹೋತ್ಸವ ಸಂಸ್ಕರಣ

7773

ಕಾಶೀ ಶಾಸ್ತ್ರಾರ್ಥ

DONATION

(ಸಂಸ್ಕೃತ ಮತ್ತು ಕನ್ನಡ)

ದಿ. 1869ನೆಯ ನವೆಂಬರ್ 16 ರಂದು
ಮೂರ್ತಿಪೂಜಾವಿಧಾನವು ವೇದದಲ್ಲಿದೆಯೋ, ಇಲ್ಲವೋ,
ಎಂಬ ವಿಷಯದ ಬಗ್ಗೆ ಕಾಶಿಯ ಪಂಡಿತರುಗಳ ಮತ್ತು
ಸ್ವಾಮೀ ದಯಾನಂದ ಸರಸ್ವತಿಯವರ ನಡುವೆ ನಡೆದ ಶಾಸ್ತ್ರಾರ್ಥದ ವರದಿ.

ಪ್ರಕಾಶಕರು :
ಆರ್ಯ ಸಮಾಜ, ಶ್ರದ್ಧಾನಂದ ಭವನ, ವಿಶ್ವೇಶ್ವರಪುರಂ
ಬೆಂಗಳೂರು–560 004 (ದೂರವಾಣಿ: 626380)

1990

ಪ್ರಥಮ ಸಂಸ್ಕರಣ
1000 ಪ್ರತಿಗಳು ಬೆಲೆ : 10 ರೂಪಾಯಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

KĀSHI SHĀSTRĀRTHA (Sanskrit & Kannada)

—A Report on the Question and Answer Session held in Sanskrit at Benares, on 16th November 1869, between Swami Dayananda Saraswati and the Pundits of Kashi, about the admissibility of Idol-worship in the Vedas.

(Arya Samaj Shraddhananda Bhavan Diamond Jubilee Edition)

First Published in Sanskrit & Hindi by : Vedic Yantralaya, Kashi, 1880

Translated by : B. V. Yatiraj

Edited by : Upendra Bhoopala

First Edition in Kannada : 11th March 1990

Copies : 1000

Pages : 44 + xxxii

Published by: (with the Financial Assistance from Devanga Dharma Prasara and Sanshodhana Mandali, Bangalore)

Arya Samaj, Shraddhananda Bhavan,
Visveswàrapuram, Bangalore–560 004
(Phone : 626380)

Price : Rs. 10-00

Printed at : Praja Printers Private Ltd.
(National Award Winners)
Praja Bhavan,
53/2, Bull Temple Road,
Bangalore–560 019

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರ ನುಡಿ

ಹತ್ತೊಂಬತ್ತನೆಯ ಶತಮಾನದಲ್ಲಿ ಇವು ಸಂಸ್ಕೃತ ಮತ್ತು ಹಿಂದೀ ಭಾಷೆಯಲ್ಲಿ ವೇದ ಭಾಷ್ಯ ಮೊದಲಾದ ಆರ್ಷಪರಂಪರೆಯ ವಿವಿಧ ಪ್ರಾಮಾಣಿಕ ಗ್ರಂಥಗಳ* ಪ್ರಣೇತರಾದ ಮಹರ್ಷಿ ದಯಾನಂದ ಸರಸ್ವತಿಯವರ ಮೂಲ ಕೃತಿಗಳನ್ನು ಕನ್ನಡೀಕರಿಸಿ, ಪ್ರಕಟಿಸುವುದು ನಮ್ಮ ಆದ್ಯ ಕರ್ತವ್ಯವೆಂದು ಸಂಕಲ್ಪಿಸಿದ ಮೇಲೆ, 'ಸಂಸ್ಕಾರವಿಧಿ'ಯ ಕನ್ನಡ ಸಂಸ್ಕರಣವನ್ನು (400 ಪುಟ)† ದಿನಾಂಕ 7-4-1989 ರಂದು ಪ್ರಕಟಿಸಿ, ಬಿಡುಗಡೆ ಮಾಡಿದೆವು. ಅದರೊಡನೆಯೇ, 'ಸತ್ಯಾರ್ಥಪ್ರಕಾಶ'ದ ಪರಿಷ್ಕೃತ ಪಂಚಮ ಸಂಸ್ಕರಣದ ಸಂಪಾದನೆಯನ್ನು ಕೈಗೊಂಡು‡ ಆ ಬೃಹದ್ ಗ್ರಂಥದ (ಎರಡು ಖಂಡಗಳು- 1400 ಪುಟ) ಮುದ್ರಣಕಾರ್ಯವನ್ನು ಮುಗಿಸಿ, ಪ್ರಕಟಿಸುವ ಸಿದ್ಧತೆ ಮಾಡುತ್ತಿದ್ದಾಗಲೇ, ವೈದಿಕ ಧರ್ಮಾವಲಂಬಿಗಳೂ, ಹಾಗೂ ನಮೆ ಲ್ಲರಿಗೂ ಹಿರಿಯರೂ ಆದ ಶ್ರೀಯುತ ವೈ.ವಿ. ತಿಮ್ಮಯ್ಯ (ಅಪ್ಪಾಜೀ) ಅವರ ಪ್ರೇರಣೆಯಿಂದ **ದೇವಾಂಗ ಧರ್ಮ ಪ್ರಸಾರ ಮತ್ತು ಸಂಶೋಧನ ಮಂಡಲಿ,** ಪ್ಯಾಲೇಸ್ ರೋಡ್, ಬೆಂಗಳೂರು ಇವರ ಧನ ಸಹಾಯ ದೊರಕಿ, ಐತಿಹಾಸಿಕ ಮಹತ್ವವನ್ನುಳ್ಳ ಈ **'ಕಾಶೀ ಶಾಸ್ತ್ರಾರ್ಥ'**ವು ಈಗ ಮುದ್ರಿತವಾಗಿ ಪ್ರಕಟಿಸ ಲಾಗುತ್ತಿದೆ.$

---

*ಇವು ಸುಮಾರು 20,000 ಕ್ಕಿಂತಲೂ ಹೆಚ್ಚು ಪುಟಗಳಿಂದ ಕೂಡಿವೆ. ಇದು ಸಂಸ್ಕೃತ ಮತ್ತು ಹಿಂದೀ ಗ್ರಂಥಗಳ ಪುಟಗಳ ಎಣಿಕೆ. ಕನ್ನಡದಲ್ಲಿ ಇದು 40,000 ಪುಟಗಳಷ್ಟಾಗಬಹುದು.

†ಅನುವಾದಕರು : ಪಂ. ಉಪೇಂದ್ರ ಭೂಪಾಲ

‡ಸಂಪಾದಕರು : ಪಂ. ಉಪೇಂದ್ರ ಭೂಪಾಲ

$ಇಷ್ಟೇ ಅಲ್ಲದೇ—

'ಪೂನಾಪ್ರವಚನ' (ಪುಟ 400)ದ ಭಾಷಾಂತರ ಮುಗಿದು, ಹಸ್ತಪ್ರತಿ ಮುದ್ರಣ ಕ್ಕಾಗಿ ಕಾಯುತ್ತಿದೆ. (ಅನುವಾದಕರು : ಪಂ. ಉಪೇಂದ್ರ ಭೂಪಾಲ) →

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕೃತ ಮತ್ತು ಹಿಂದೀ ಭಾಷೆಯಲ್ಲಿ ಬರೆದ ಈ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಿಕೊಟ್ಟ ಶ್ರೀ ಬಿ. ವಿ. ಯತಿರಾಜ್ ಅವರಿಗೂ, ಹಾಗೂ ಇತರ ಆವಶ್ಯಕ ಸೂಚನಾ-ಸಾಮಗ್ರಿಗಳನ್ನು ಈ ಗ್ರಂಥದಲ್ಲಿ ಅಳವಡಿಸಿ, ಇದರ ಸಂಪಾದಕತ್ವದ ಭಾರವನ್ನು ನಿರ್ವಹಿಸಿದ ಪಂ. ಉಪೇಂದ್ರ ಭೂಪಾಲ ಅವರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಈ ಗ್ರಂಥದ ಪ್ರಕಾಶನಕ್ಕೆ ಪ್ರೇರಕರಾದ ಶ್ರೀಯುತ ವೈ. ವಿ. ತಿಮ್ಮಯ್ಯ (ಅಪ್ಪಾಜೀ), ಹಾಗೂ ಧನಸಹಾಯ ಮಾಡಿದ ದೇವಾಂಗ ಧರ್ಮ ಪ್ರಸಾರ ಮತ್ತು ಸಂಶೋಧನ ಮಂಡಲಿಯವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಈ ಗ್ರಂಥವನ್ನು ಅಂದವಾಗಿ ಕೇವಲ ಹತ್ತು ದಿನಗಳಲ್ಲೇ ಮುದ್ರಿಸಿ ಕೊಟ್ಟ ಪ್ರಜಾ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಬಸವನಗುಡಿ, ಬೆಂಗಳೂರು ಅವರಿಗೂ, ಹಾಗೂ ಇದನ್ನು ಹೊರತರಲು ಕಾರಣರಾದ ಇತರ ಕಾರ್ಯಕರ್ತರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಈ **'ಕಾಶೀ ಶಾಸ್ತ್ರಾರ್ಥ'**ವನ್ನು ಭಾಷಾಂತರ ಮಾಡುವ ಸಲುವಾಗಿ ರಾಮಲಾಲ್ ಕಪೂರ್ ಟ್ರಸ್ಟ್, ಪೋ. ಬಹಾಲ್‌ಗಢ್ (131021), ಜಿಲ್ಲಾ ಸೋನೀಪತ್ (ಹರಯಾಣಾ) ಅವರಿಂದ ಪ್ರಕಾಶಿತವಾದ **"ಋಷಿ ದಯಾನಂದ ಕೇ ಶಾಸ್ತ್ರಾರ್ಥ ಔರ್ ಪ್ರವಚನ"**, ಎಂಬ ಗ್ರಂಥವನ್ನು ಆಧಾರವನ್ನಾಗಿಟ್ಟು ಕೊಳ್ಳಲಾಗಿದೆ. ಆದ್ದರಿಂದ, ಟ್ರಸ್ಟಿನ ಅಧ್ಯಕ್ಷರಾದ ಮಹಾಮಹೋಪಾಧ್ಯಾಯ ಪಂ. ಯುಧಿಷ್ಠಿರ ಮೀಮಾಂಸಕ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

→ **'ಋಗ್ವೇದಾದಿಭಾಷ್ಯಭೂಮಿಕಾ'** (ಪುಟ 800)ದ ಭಾಷಾಂತರ-ಕಾರ್ಯ ಪ್ರಾರಂಭವಾಗಿದೆ. (ಅನುವಾದಕರು : ಪಂ. ಉಪೇಂದ್ರ ಭೂಪಾಲ)

ಇವಲ್ಲದೇ, **'ಹುಗಲೀ ಶಾಸ್ತ್ರಾರ್ಥ'** (ಪುಟ 100) ಮತ್ತು **'ಪಂಚಮಹಾಯಜ್ಞವಿಧಿ'** (ಪುಟ 100) ಗಳನ್ನು ಕನ್ನಡೀಕರಿಸುವ ಯೋಜನೆ ಶೀಘ್ರದಲ್ಲಿಯೇ ಕಾರ್ಯಗತವಾಗಲಿದೆ. (ಅನುವಾದಕರು : ಶ್ರೀ ಬಿ. ವಿ. ಯತಿರಾಜ್)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಓದುಗರು ಈ 'ಕಾಶೀ ಶಾಸ್ತ್ರಾರ್ಥ'ವನ್ನು ಪೂರ್ವಾಗ್ರಹಪೀಡಿತ ರಾಗದೇ, ವೈಜ್ಞಾನಿಕ ಮನೋಭಾವದಿಂದ ಓದಿದರೆ, ಸತ್ಯಾಸತ್ಯತೆಯು ಅರಿವಾಗುವುದರಲ್ಲಿ ಸಂಶಯವಿಲ್ಲ.

ಆರ್ಯ ಸಮಾಜ,
ಸ್ವಾಮೀ ಶ್ರದ್ಧಾನಂದ ಭವನ,
ವಿಶ್ವೇಶ್ವರಪುರಂ, ಬೆಂಗಳೂರು
ದಿನಾಂಕ: 11-3-1990
(ಫಾಲ್ಗುಣ ಪೂರ್ಣಿಮಾ: ಶಾ. ಶ. 1911)

ಡಾ॥ ಆರ್. ರಾಧಾಕಿಶನ್ ವರ್ಮಾ
ಅಧ್ಯಕ್ಷ
ಸತ್ಯವ್ರತ
ಕಾರ್ಯದರ್ಶಿ
ಸುಧಾಮ
ಕೋಶಾಧ್ಯಕ್ಷ

ooo

ಪರೋಪಕಾರಕ್ಕಾಗಿಯೇ ಶರೀರದ ರಕ್ಷಣೆ

"ಶಾಸ್ತ್ರಾರ್ಥಕ್ಕಾಗಿ ನಾನು ಪ್ರತ್ಯೇಕ ಸಮಯ ತಯಾರಿರುತ್ತೇನೆ. ಆದರೆ, ಅದರ ರೀತಿ ಹೇಗಿರಬೇಕೆಂದರೆ—

"ಶಾಸ್ತ್ರಾರ್ಥದ ಪ್ರಬಂಧಕರ್ತನು ಒಬ್ಬ ಮ್ಯಾಜಿಸ್ಟ್ರೇಟ್ ಆಗಿರಬೇಕು. ಅದರಲ್ಲಿ ಪಂಡಿತರ ಹೊರತು, ಅವಿದ್ವಾಂಸನಾವನೂ ಇರಬಾರದು. ಶಾಸ್ತ್ರಾರ್ಥದ ಸ್ಥಾನವು ನಿಮ್ಮದೂ ಆಗಬಾರದು; ನನ್ನದೂ ಆಗ ಬಾರದು. ನಿಮ್ಮ 'ಜೂನಾ ಅಖಾಡಾ', ಎಂಬ ಸ್ಥಾನಕ್ಕೆ ಬರುವುದರಿಂದ, ನನ್ನ ಜೀವನಕ್ಕೆ ಆಪಾಯು ತಗಲುವ ಸಂಭವವಿದೆ. ನನ್ನ ಶರೀರಪಾತದ ದುಃಖ ನನಗಿಲ್ಲವಾದರೂ ಕೂಡ, ಯಾವ ಪರೋಪಕಾರಕ್ಕಾಗಿ, ಈ ಶರೀರವನ್ನು ನಾನು ರಕ್ಷಿಸಿಕೊಂಡು ಬಂದಿದ್ದೇನೋ, ಆ ಉಪಕಾರವು ನಿಂತು ಹೋಗಬಹುದು! ನನಗಿದರ ಶೋಕವಿಷ್ಟೇ ಇದೆ."

—ಸ್ವಾಮೀ ದಯಾನಂದ ಸರಸ್ವತೀ
['ಮಹರ್ಷಿ ದಯಾನಂದ ಸರಸ್ವತೀ ಕಾ ಜೀವನಚರಿತ್ರ'
—ಪಂ. ಲೇಖರಾಮ್; ಪುಟ 663]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಮ್ಮ ಉಪದೇಶವು ವಿರೇಚಕವಾಗಿದ್ದರೂ, ಆರೋಗ್ಯಪ್ರದ !

"ಆರ್ಯಜನರಲ್ಲಿ ಅನೇಕ ಕುರೀತಿಗಳ ದೋಷಗಳೂ, ಮತ್ತು ಮಿಥ್ಯಾಮಂತವ್ಯಗಳ ಮಲವೂ ಹೆಚ್ಚಾಗಿ ಬಿಟ್ಟಿವೆ. ಇವುಗಳ ಕಾರಣದಿಂದ, ಈ ಜನಾಂಗ ಎಷ್ಟು ರೋಗಿಯಾಗಿದೆಯೆಂದರೆ, ಇದರ ಹಿತಚಿಂತಕರಿಗೆ ಇದರ ಆಯುಸ್ಸಿನ ಬಗೆಗೇ ಸಂಶಯ ಉಂಟಾಗಿಬಿಟ್ಟಿದೆ. ಇದರ ಆಯುಸ್ಸನ್ನು ಈಗ ಜನರು ಉಂಗುಲಿಗಳ ಮೇಲೆ ಎಣಿಸಲಾರಂಭಿಸಿದ್ದಾರೆ.

"ನಮ್ಮ ಉಪದೇಶವು ಇಂದು ವಿರೇಚಕ ಔಷಧಿಯಂತೆ, ಅವಶ್ಯವಾಗಿ ಗಾಬರಿಯನ್ನುಂಟುಮಾಡುವುದಾಗಿದೆ. ಆದರೆ, ಅದು ಜನಾಂಗದ ಶರೀರದ ಮಲಸಂಶೋಧಕವೂ, ಆರೋಗ್ಯಪ್ರದವೂ ಆಗಿದೆ. ವರ್ತಮಾನ ಆರ್ಯಸಂತತಿಯು ನಮ್ಮನ್ನು, ಪೇಗೆ ಬೇಕಾದರೂ ಕರೆಯಲೀ; ಆದರೆ, ಭಾರತದ ಭಾವೀ ಸಂತತಿಯು ನಮ್ಮ ಧರ್ಮಸುಧಾರಣೆಯನ್ನು, ಹಾಗೂ ನಮ್ಮ ಜನಾಂಗದ ಸಂಸ್ಕಾರವಾಗಿರುವುದನ್ನು ಮಹತ್ವದ ದೃಷ್ಟಿಯಿಂದ ಅವಶ್ಯವಾಗಿ ನೋಡುವುದು. ಜನರ ಆತ್ಮಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ನಾವು ಯಾವ ಕುರೀತಿಗಳ ವಿಂಡನೆ ಮಾಡುತ್ತಿದ್ದೇವೋ, ಅದೆಲ್ಲವನ್ನೂ ಹಿತದ ಭಾವನೆಯಿಂದ ಮಾಡುತ್ತಿದ್ದೇವೆ."

—ಸ್ವಾಮೀ ದಯಾನಂದ ಸರಸ್ವತೀ

['ಶ್ರೀಮದ್ದಯಾನಂದ ಪ್ರಕಾಶ'—ಸ್ವಾಮೀ ಸತ್ಯಾನಂದ, ಸಂಗತನ ಕಾಂಡ, ಪುಟ 332]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯಾನುಕ್ರಮಣಿಕೆ

ಪ್ರಕಾಶಕರ ನುಡಿ	(i)
ಸಂಪಾದಕನ ನುಡಿ	(vii)
ಶಾಸ್ತ್ರಾರ್ಥಯುಗದ ಪುನರ್ಜನ್ಮ	(xiii)
ಅಥ ಕಾಶೀ-ಶಾಸ್ತ್ರಾರ್ಥಃ	1
ಪರಿಶಿಷ್ಟ–1 ವಿದ್ವಾಂಸರ, ಗಣ್ಯರ ಸೂಚೀ	35
ಪರಿಶಿಷ್ಟ–2 ಹಲವು ಪ್ರಸಿದ್ಧ ಶಾಸ್ತ್ರಾರ್ಥಗಳು	39

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಕ್ತಿಯ ಮಾರ್ಗ ಸುಲಭ; ಆದುದರಿಂದ, ಜನರಿಗೆ ಬೇಡ!

"'ಬಿಡುಗಡೆ' ಹೊಂದುವುದಕ್ಕೆ 'ಮುಕ್ತಿ', ಎಂದು ಹೆಸರು. ಎಂದರೆ, ದುಃಖಿಗಳಿಂದ ಬಿಡುಗಡೆ ಹೊಂದಿ, ಸಚ್ಚಿದಾನಂದರೂಪ ಪರಮೇಶ್ವರನನ್ನು, ಪ್ರಾಪ್ತಮಾಡಿಕೊಂಡು, ಸದಾ ಆನಂದದಲ್ಲಿರುವುದು, ಮತ್ತು ಮತ್ತೆ, ಜನ್ಮ-ಮರಣವೆಂಬ ದುಃಖಿಸಾಗರದಲ್ಲಿ ಬೀಳದಿರುವುದು! ಇದರ ಮೊದಲನೆಯ ಸಾಧನವೆಂದರೆ, 'ಸತ್ಯದ ಆಚರಣೆ'. ಆತ್ಮನ ಮತ್ತು ಪರಮಾತ್ಮನ ಸಾಕ್ಷಿಯಿಂದ ಸತ್ಯದ ನಿಶ್ಚಯವನ್ನು ಮಾಡಬೇಕು. ಎಂದರೆ, ಯಾವುದರಲ್ಲಿ ಆತ್ಮನ ಮತ್ತು ಪರಮಾತ್ಮನ ಸಾಕ್ಷಿ ಇಲ್ಲವೋ, ಅದು ಅಸತ್ಯವಾಗಿರುತ್ತದೆ.

ಉದಾಹರಣೆಗಾಗಿ—ಯಾವನೋ ಕಳ್ಳತನವನ್ನು ಮಾಡಿದನು. ಅವನು ಸಿಕ್ಕಿಹಾಕಿಕೊಂಡಾಗ, ನ್ಯಾಯಾಧೀಶನು ಅವನನ್ನು—"ನೀನು ಕಳ್ಳತನ ಮಾಡಿದೆಯೋ, ಅಥವಾ ಇಲ್ಲವೋ?", ಎಂದು ಕೇಳಿದನು. ಆಗ ಅವನು—"ನಾನು ಕಳ್ಳತನ ಮಾಡಲಿಲ್ಲ", ಎಂದು ಹೇಳುತ್ತಾ ಹೋಗುತ್ತಾನೆ. ಆದರೆ, ಅವನ ಆತ್ಮನು ಒಳಗೆ, 'ನಾನು ಕಳ್ಳತನ ಮಾಡಿದ್ದೇನೆ'. ಎಂದು ಹೇಳುತ್ತಿರುತ್ತದೆ!

ಹೀಗೆಯೇ, ಯಾವನಾದರೂ ಯಾವಾಗ ಸುಳ್ಳನ್ನು ಹೇಳಲಿಚ್ಛಿಸುತ್ತಾನೋ, ಆಗ ಅಂತರ್ಯಾಮೀ ಪರಮೇಶ್ವರನು—"ಇದು ತಪ್ಪು ಮಾತು. ಹೀಗೆ ಮಾಡಬೇಡ" ಎಂದು ತಿಳಿಸಿ, ಲಜ್ಜೆ, ಶಂಕೆ ಮತ್ತು ಭಯ ಮೊದಲಾದುವನ್ನು ಅವನ ಆತ್ಮನಲ್ಲಿ ಉತ್ಪನ್ನ ಮಾಡಿಬಿಡುತ್ತಾನೆ. ನಮ್ಮ ಆತ್ಮವು ಸತ್ಯದ ಆಚರಣೆ ಮಾಡುವುದರಲ್ಲಿ ಹೇಗೆ ನಿರ್ಭಯವೂ, ಪ್ರಸನ್ನವೂ ಆಗುತ್ತದೋ, ಹಾಗೆ ಮಿಥ್ಯೆಯ ಆಚರಣೆಯಲ್ಲಿ ಆಗುವುದಿಲ್ಲ. ಮಾನವನು ಪರಮಾತ್ಮನ ಆಜ್ಞೆಯನ್ನು ಮೀರಿದು, ಕೆಟ್ಟ ಕೆಲಸವನ್ನು ಮಾಡಿಬಿಟ್ಟಾಗ, ಅವನಿಗೆ 'ಮುಕ್ತಿ' ಯಾವ ರೀತಿಯಿಂದಲೂ ದೊರೆಯುವುದಿಲ್ಲ!".

—ಸ್ವಾಮೀ ದಯಾನಂದ ಸರಸ್ವತೀ; "ಮೇಲಾ ಚಾಂದಾಪುರ ಶಾಸ್ತ್ರಾರ್ಥ—'ಸತ್ಯಧರ್ಮವಿಚಾರ'ದಲ್ಲಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪಾದಕನ ನುಡಿ

ಆದಿ ಶಂಕರಾಚಾರ್ಯರ ನಂತರ, ಶಾಸ್ತ್ರಾರ್ಥದ ಯುಗವನ್ನು ಪುನರುಜ್ಜೀವಿತ ಗೊಳಿಸಿದ ಶ್ರೇಯಸ್ಸು, ಆರ್ಯ ಸಮಾಜದ ಪ್ರವರ್ತಕರಾದ ಸ್ವಾಮೀ ದಯಾನಂದ ಸರಸ್ವತಿಯವರಿಗೆ ಸಲ್ಲಬೇಕು.* ಅವರು ಆರ್ಯ ಸಮಾಜವನ್ನು ಸ್ಥಾಪಿಸುವುದಕ್ಕೆ ಮೊದಲೇ (1875 ನೆಯ ಇಸವಿ) ಅದೆಷ್ಟೋ ಶಾಸ್ತ್ರಾರ್ಥಗಳನ್ನು ನಡೆಸಿ, ಎಲ್ಲದರಲ್ಲೂ ಯಶಸ್ವಿಗಳಾಗಿದ್ದರು. ಅವುಗಳಲ್ಲಿ 1869 ನೆಯ ಇಸವಿಯಲ್ಲಿ ನಡೆದ ಕಾಶೀ ಶಾಸ್ತ್ರಾರ್ಥವು ಅತ್ಯಂತ ಮಹತ್ವಪೂರ್ಣವಾದದ್ದು. ಏಕೆಂದರೆ, ಬೇರೆಡೆಗಳಲ್ಲಿ ನಡೆದ ಶಾಸ್ತ್ರಾರ್ಥಗಳ ಬಗ್ಗೆ ನಿರ್ಣಯವು ಇತರ್ಥ್ಯವಾಗದಿದ್ದರೆ, ಕಾಶಿಯ ಪಂಡಿತ ಮಂಡಲಿಯ ವಿದ್ವಾಂಸರ ಕಡೆಯಿಂದ ನಿರ್ಣಾಯಕರೂಪದಲ್ಲಿ ವ್ಯವಸ್ಥೆ ಪಡೆಯುವುದು ಆಗಿನ ಕಾಲದಲ್ಲಿ ವಿದ್ವಾಂಸರ ಪರಂಪರೆಯಾಗಿತ್ತು. ಎಂದರೆ, ಕಾಶಿಯ ಪಂಡಿತರ ಅಭಿಪ್ರಾಯಕ್ಕೆ ಸರ್ವೋಚ್ಚ ಸ್ಥಾನ ದೊರಕಿತ್ತು. ಕಾಶಿಯ ಪಂಡಿತರ ಎದುರಿಗೆ ಚಕಾರವನ್ನೂ ಎತ್ತುವ ಸಾಹಸವನ್ನು ಯಾವ ವಿದ್ವಾಂಸನೂ ತೋರಿಸುವಂತಿರಲಿಲ್ಲ; ತೋರಿಸಿಯೂ ಇರಲಿಲ್ಲ!†

ಅಂತಹ ಪರಿಸ್ಥಿತಿಯಲ್ಲಿ ಈ ಅಲಂಘ್ಯ ಶಿಖಿರವನ್ನು, ಅಭೇದ್ಯ ದುರ್ಗವನ್ನು ಕಾಶಿಯಲ್ಲೇ ಒಡೆದು, ಮುರಿದುಹಾಕಿ, ನೆಲಸಮಮಾಡಿದರು ಸ್ವಾಮೀ ದಯಾನಂದ ಸರಸ್ವತಿಗಳು. ಇದು ಹೇಗೆ ಸಾಧ್ಯವಾಯಿತು?

---

*ಏಕೆಂದರೆ, ಇವರ ನಂತರ, ಬಂದ ಆರ್ಯ ಸಮಾಜದ ವಿದ್ವಾಂಸರು ಪೌರಾಣಿಕ-ಜೈನ-ಕ್ರೈಸ್ತ-ಮುಸಲ್ಮಾನ ವಿದ್ವಾಂಸರೊಡನೆ ನೂರಾರು ಶಾಸ್ತ್ರಗಳನ್ನು ಮಾಡಿದರು. ಈಗಲೂ ಮಾಡುತ್ತಲೂ ಇದ್ದಾರೆ!

†ಸ್ವಾಮೀ ದಯಾನಂದ ಸರಸ್ವತಿಗಳ ಗುರುಗಳಾದ ಸ್ವಾಮೀ ವಿರಜಾನಂದರನ್ನು ಬಿಟ್ಟು!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗಿನ ಕಾಲದಲ್ಲಿ ಶಾಸ್ತ್ರಾರ್ಥ ನಡೆಯುತ್ತಿದ್ದುದು ಒಣ ಹರಟೆಗಳಲ್ಲಿ, ಒಣ ಜಗಳಗಳಲ್ಲಿ! ವಿಶೇಷವಾಗಿ, ವ್ಯಾಕರಣದ ಸಂಬಂಧದಲ್ಲಿ!! ಇಂತಹ ಸಮಾಸವು ಷಷ್ಠೀತತ್ಪುರುಷವೋ? ಸಪ್ತಮೀ ತತ್ಪುರುಷವೋ?, ಎಂದು ನಿರ್ಧರಿಸುವುದರಲ್ಲೇ ವಿದ್ವಾಂಸರು ತಮ್ಮ ಹೆಚ್ಚುಗಾರಿಕೆಯನ್ನು ತೋರಿಸುತ್ತಿದ್ದರು. ಶಾಸ್ತ್ರಾರ್ಥಗಳ ಉಭಯ ಪಕ್ಷಗಳ ವಿದ್ವಾಂಸರು ಪೌರಾಣಿಕರೂ, ಮೂರ್ತಿ ಪೂಜಕರೂ ಆಗಿರುತ್ತಿದ್ದರು. ಅನೇಕ ಅಂಧವಿಶ್ವಾಸಗಳಲ್ಲಿ ಸಿಕ್ಕಿಕೊಂಡಿರುತ್ತಿದ್ದರು. ಪ್ರತಿಯೊಂದು ಬಣಕ್ಕೂ ಒಬ್ಬ ಗುರು ಇರುತ್ತಿದ್ದನು. ಆ ಗುರುವೇ ಅವರಿಗೆ ಸರ್ವಾಧಿಕಾರಿ!* ಇಷ್ಟೇ ಅಲ್ಲದೇ, ಎಲ್ಲ ವಿದ್ವಾಂಸರೂ ಆಚಾರ್ಯತ್ರಯರಲ್ಲೊಬ್ಬರ ಅನುಯಾಯಿಗಳಾಗಿರುತ್ತಿದ್ದರು.

'ದ್ವೈತ-ಅದ್ವೈತ'ದ ಕಲಹ ಒಮ್ಮೊಮ್ಮೆ ಉಂಟಾಗುತ್ತಿತ್ತು. ಆದರೆ, ಅದ್ವೈತವಾದಿಗಳು ದ್ವೈತವಾದಿಗಳನ್ನು ಎದುರಿಸುವ ಸಾಹಸ ಮಾಡುತ್ತಿರಲಿಲ್ಲ. ಏಕೆಂದರೆ, ಅದ್ವೈತವಾದಿಗಳ ಆಚಾರ್ಯರಾದ ಆದಿಶಂಕರಾಚಾರ್ಯರು ಜೈನ-ಬೌದ್ಧಮತಗಳನ್ನು ಖಂಡಿಸಿದ್ದರಿಂದ, ತದ್ವಿಷಯಕ ಯುಕ್ತಿಗಳೇ ಅವರ ಅನುಯಾಯಿಗಳ ಬಳಿ ಇದ್ದುವು. ದ್ವೈತಮತವನ್ನು ಖಂಡಿಸುವ ಯುಕ್ತಿಗಳು ಅವರಲ್ಲಿರಲಿಲ್ಲ. ಈ ಕಡೆ, ಅದ್ವೈತಮತವನ್ನು ಖಂಡಿಸುವ ಸೂರಾರು ಯುಕ್ತಿಗಳನ್ನು ದ್ವೈತಮತಪ್ರತಿಷ್ಠಾಪನಾಚಾರ್ಯರಾದ ಮಧ್ವಾಚಾರ್ಯರು ತಮ್ಮ ಅನುಯಾಯಿಗಳಿಗೆ ಕೊಟ್ಟು ಹೋಗಿದ್ದರು. ಅವರ ಪ್ರಸಿದ್ಧ ಶಿಷ್ಯರು ಇವುಗಳನ್ನು ಇನ್ನಷ್ಟು ಬೆಳೆಸಿಕೊಂಡಿದ್ದರು.†

ಅದ್ವೈತವಾದಿಗಳು ಆಚಾರ್ಯ ಶಂಕರರ **'ಅದ್ವೈತವಾದ'**ವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಿದ್ದರೆ, ಸಂಪ್ರದಾಯನಿಷ್ಠರೂ, ಪುರಾಣಮತಾನುಯಾಯಿಗಳೂ, ಅತ್ಯಂತ ಮೂರ್ತಿಪೂಜಕರೂ, ಅವತಾರವಾದಿಗಳೂ

---

*ಗುರುರ್ಬ್ರಹ್ಮಾ ಗುರುರ್ವಿಷ್ಣುಃ.

†ಇಷ್ಟೇ ಅಲ್ಲದೇ, ಮತ್ತೆಷ್ಟೋ ಯುಕ್ತಿಗಳನ್ನು ಸ್ವಾಮೀ ದಯಾನಂದರು ಬರೆದ **'ಸತ್ಯಾರ್ಥಪ್ರಕಾಶ'**ದಿಂದ ಗ್ರಹಿಸಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದ ಮಾಧ್ವವಿದ್ವಾಂಸರನ್ನು ಈ ವಿಷಯಗಳಲ್ಲಿ ಸುಲಭವಾಗಿ ಸೋಲಿಸ ಬಹುದಾಗಿತ್ತು! ಆದರೆ, ಸ್ವತಃ ತಾವೇ ಈ ಕೆಸರಿನಲ್ಲಿ ಸಿಕ್ಕಿಹಾಕಿ ಕೊಂಡಿದ್ದರಿಂದ, ಬಾಯಿ ಬಿಚ್ಚುವಂತಿರಲಿಲ್ಲ! ಹೀಗಾಗಿ, ಎಲ್ಲ ಪೌರಾಣಿಕ ವಿದ್ವಾಂಸರೂ ಒಂದೇ ದೋಣಿಯಲ್ಲಿ ಯಾತ್ರೆ ಮಾಡುತ್ತಿದ್ದರು. ವಿಪಕ್ಷಿಗಳ ದೋಣಿಯನ್ನು ಮುಳುಗಿಸಲು ಯತ್ನಿಸುವ ಪ್ರಶ್ನೆಯೇ ಏಳುತ್ತಿರಲಿಲ್ಲ.

ಇವರು ಚಾರವಾಕ-ಜೈನ-ಬೌದ್ಧ-ಕ್ರೈಸ್ತ-ಮುಸಲ್ಮಾನರ ಮತಗಳನ್ನು ಖಂಡಿಸುವ ಮಾತೇ ಕಲ್ಪನೆಗೆ ಹೊರಗಾದ ವಿಷಯ! ಏಕೆಂದರೆ, 'ಅವರ' ಗ್ರಂಥಗಳನ್ನು ಅಧ್ಯಯನಕ್ಕಾಗಿ ಮುಟ್ಟಿದರೆ, ಅವರೆದುರಿಗೆ ಕುಳಿತು ಸಂವಾದ ಮಾಡಿದರೆ, 'ಇವರ' ಧರ್ಮವು ಭ್ರಷ್ಟವಾಗಿ ಇವರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತಿತ್ತಲ್ಲ!

ಈ ಪರಿಸ್ಥಿತಿಯಲ್ಲಿ ಸ್ವಾಮೀ ದಯಾನಂದ ಸರಸ್ವತಿಗಳು ಯಾವ ಸಂಪ್ರದಾಯದ ಕಟ್ಟಳೆಗೂ ಒಳಗಾಗದೇ, ಯಾವ ಅಂಧವಿಶ್ವಾಸಕ್ಕೂ ಎಡೆ ಗೊಡದೇ, ಕೇವಲ ವೇದಕ್ಕೆ ಮನ್ನಣೆ ಕೊಟ್ಟು, ವೇದಕ್ಕೆ ವಿರುದ್ಧವಾದ ವಾದಗಳನ್ನೆಲ್ಲಾ ಸದೆ ಬಡೆಯಲು ಹೊರಟಾಗ, ಅವರಿಗೆ ಯಾರು ಎದುರಾಗ ಬಲ್ಲರಾಗಿದ್ದರು? ಇಂತಹ ಸಂದರ್ಭದಲ್ಲಿ ಸ್ವಾಮೀ ದಯಾನಂದರೆದುರಿಗೆ ನಿಂತ ವಿಪಕ್ಷೀಯ ವಿದ್ವಾಂಸರು **'ಶಾಸ್ತ್ರಾರ್ಥ'**ಕ್ಕೆ ಸಜ್ಜಾಗಿದ್ದರೋ, ಅಥವಾ **'ಶಸ್ತ್ರಾರ್ಥ'**ಕ್ಕೋ?

ಈ ಪ್ರಶ್ನೆಗೇ ಉತ್ತರ ಕೊಡುತ್ತದೆ, ಈ **'ಕಾಶೀ (ಶ) ಶಾಸ್ತ್ರಾರ್ಥ!'**

ಮೂರ್ತಿಪೂಜೆಯ ವಿಧಾನವು ವೇದದಲ್ಲಿದೆಯೋ? ಅಥವಾ ಇಲ್ಲವೋ?, ಎಂಬ ನಿರ್ಣಯವನ್ನು ಮಾಡುವುದಕ್ಕಾಗಿ ಆಯೋಜಿತವಾಯಿತು ಈ ಶಾಸ್ತ್ರಾರ್ಥ!

'ಇದೆ', ಎಂಬುದು ಪೌರಾಣಿಕರ ವಾದ!

'ಇಲ್ಲ', ಎಂಬುದು ಸ್ವಾಮೀ ದಯಾನಂದರ ಘೋಷಣೆ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ತಾವು ವೇದಗಳ ಪುಸ್ತಕಗಳನ್ನು ತಂದಿದ್ದೀರೋ? ಅಥವಾ ಇಲ್ಲವೋ?', ಎಂದು ಸ್ವಾಮೀ ದಯಾನಂದರು ಶಾಸ್ತ್ರಾರ್ಥಕ್ಕೆ ಮೊದಲೇ ಪೌರಾಣಿಕ ವಿಪಕ್ಷಕ್ಕೆ ಪ್ರಶ್ನೆ ಹಾಕಿದರು.

ಇದಕ್ಕೆ ಪಂಡಿತರುಗಳ ಉತ್ತರ ಏನಾಗಿರಬೇಕಿತ್ತು?

'ವೇದಗಳು ಸಂಪೂರ್ಣವಾಗಿ ಪಂಡಿತರುಗಳಿಗೆ ಕಂಠಸ್ಥವಾಗಿವೆ. ಪುಸ್ತಕಗಳಿಂದ ಪ್ರಯೋಜನವೇನು?'. ಇದು ವಿಪಕ್ಷದ ಕಡೆಯಿಂದ ಬಂದ ಉತ್ತರ!

ವೇದಾಧಾರಿತವಾದ ಶಾಸ್ತ್ರಾರ್ಥಕ್ಕೆ ಇದು, ಪಂಡಿತರುಗಳ ಸಿದ್ಧತೆ! ಇನ್ನು, ಶಾಸ್ತ್ರಾರ್ಥ ಹೇಗೆ ನಡೆದಿರಬಹುದು, ಮತ್ತು ಹೇಗೆ ಪರಿಣತಿಗೊಂಡಿರಬಹುದು, ಎಂಬುದನ್ನು ಬುದ್ಧಿವಂತರೆಲ್ಲಾ ಸುಲಭವಾಗಿ ಊಹಿಸಿಕೊಳ್ಳಬಲ್ಲರು!

"ವೇದಗಳಲ್ಲಿ ಮೂರ್ತಿಪೂಜೆಯ ಪ್ರಮಾಣವಿದ್ದರೆ, ಅದನ್ನು ತೋರಿಸಿ; ಇಲ್ಲದಿದ್ದರೆ, 'ಇಲ್ಲ', ಎಂದು ಹೇಳಿ", ಎಂದು ಸ್ವಾಮೀ ದಯಾನಂದರು ನೀಡಿದ ಪ್ರಥಮ ಆಹ್ವಾನಕ್ಕೆ ಪಂಡಿತರುಗಳು, ಪ್ರಸ್ತುತ ವಿಷಯವನ್ನು ಮುಟ್ಟುವ ಗೋಜಿಗೆ ಹೋಗದೇ, ಅದರಿಂದ ತಪ್ಪಿಸಿಕೊಳ್ಳುತ್ತಾ, ತೋರಿಸಿದ ವರಸೆಗಳನ್ನು ನೋಡಿ:—

'ಯಾವನು ಕೇವಲ ವೇದಪ್ರಮಾಣವನ್ನು ಅಂಗೀಕರಿಸುತ್ತಾನೋ, ಅವನ ಬಗ್ಗೆ ಏನು ಹೇಳಬೇಕು?'

'ಮನುಸ್ಮೃತಿಯ ಮೂಲವು ವೇದಗಳಲ್ಲೆಲ್ಲಿದೆ?'

'ರಚನಾನುಪಪತ್ತೇಶ್ಚ' ಎಂಬ ವ್ಯಾಸಸೂತ್ರಕ್ಕೆ ವೇದಗಳಲ್ಲಿ ಮೂಲವಾವುದು?'

'ವೇದಗಳಲ್ಲಿ 'ಪ್ರತಿಮಾ'ಶಬ್ದ ಇದೆಯೋ, ಅಥವಾ ಇಲ್ಲವೋ?'

'ವೇದಗಳು ಯಾರಿಂದ ಉತ್ಪನ್ನವಾಗಿವೆ?'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಈಶ್ವರ ಮತ್ತು ವೇದಗಳ ಸಂಬಂಧವೇನು?' ಇತ್ಯಾದಿ.

ಈ ರೀತಿಯಲ್ಲಿ 'ಶಾಸ್ತ್ರಾರ್ಥ'ವನ್ನು ಆರಂಭಿಸಿದ ಪೌರಾಣಿಕ ವಿದ್ವಾಂಸರು, ನಂತರ, ಛಲ-ಕಪಟಗಳ ಆಶ್ರಯವನ್ನು ತೆಗೆದುಕೊಂಡು, ಕೊನೆಗೆ 'ಶಸ್ತ್ರಾರ್ಥ'ವನ್ನು ಮಾಡಿಯೇ 'ಗೆಲ್ಲ'ಬೇಕಾಯಿತಲ್ಲ? ಹೀಗೆ, 'ಗೆದ್ದ'ರಂತೂ ಬಿಡಿ! ಆದರೆ, ಅವರು, "ಯಾವ ರೀತಿಯಿಂದಲಾದರೂ, ಸರಿ, 'ಗೆದ್ದೆವು', ಎಂದು ತೋರಿಸುವುದೇ ತಮ್ಮ ಉದ್ದೇಶ", ಎಂದು ಜಗತ್ತಿಗೆ ಸಾರಿ, ತಮ್ಮ ಶಾಸ್ತ್ರಾರ್ಥದ 'ಸರಣಿ'ಯನ್ನು, 'ವೈಖರಿ'ಯನ್ನು ತೋರಿಸಿ, ಉಪಕಾರ ಮಾಡಿದರು, ಎಂಬುದು 'ಪ್ರಶಂಸಾರ್ಹ'ವಾದ ವಿಷಯ!

ಈ ಕಾಶೀ ಶಾಸ್ತ್ರಾರ್ಥವು ಆ ಸಮಯದಲ್ಲೇ ಅನೇಕ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟು, ಚರ್ಚೆಗೆ ಒಳಗಾಗಿತ್ತು. ಅವುಗಳಲ್ಲಿ ಮುಖ್ಯವಾದುವೆಂದರೆ—

1) 'ಆರ್ಯದರ್ಪಣ' 2) 'ಪ್ರಶ್ನಕಮ್ಯುನಂದಿನೀ' ('The Hindu Commentator') 3) 'The Pioneer' 4) 'The Christian Intelligencer' 5) 'The Hindoo Patriot', 6) 'ತತ್ತ್ವಬೋಧಿನೀ' 7) 'ರುಹೇಲಖಂಡ ಸಮಾಚಾರ' 8) 'ಜ್ಞಾನಪ್ರದಾಯಿನೀ ಪತ್ರಿಕಾ' ಇತ್ಯಾದಿ.

ಈ ಕಾಶೀ ಶಾಸ್ತ್ರಾರ್ಥವು ಸಂಸ್ಕೃತ ಭಾಷೆಯಲ್ಲಿ ನಡೆಯಿತು. ಅದರ ವರದಿಯನ್ನು ಹಿಂದೀ ಅನುವಾದದೊಂದಿಗೆ **'ವೈದಿಕ ಯಂತ್ರಾಲಯ'**, ಕಾಶಿಯಿಂದ 1869 ನೆಯ ಇಸವಿಯಲ್ಲಿ ಪ್ರಕಟಿಸಲಾಯಿತು.* ಮತ್ತೆ ಇದು ಡಾ. ಭವಾನೀ ಲಾಲ್ ಭಾರತೀಯ ಅವರಿಂದ ಸಂಪಾದಿಸಲ್ಪಟ್ಟು, ರಾಮಲಾಲ್ ಕಪೂರ್ ಟ್ರಸ್ಟ್, ಪೋ. ಬಹಾಲ್‌ಗಢ್, 131021 (ಜಿಲ್ಲಾ ಸೋನೀಪತ್, ಹರಯಾಣಾ) ಅವರಿಂದ ; **'ಋಷಿ ದಯಾನಂದ ಸರಸ್ವತೀ ಕೇ ಶಾಸ್ತ್ರಾರ್ಥ ಔರ್ ಪ್ರವಚನ'** ಎಂಬ ಗ್ರಂಥದಲ್ಲಿ 1988 ನೆಯ ಇಸವಿಯಲ್ಲಿ ಪ್ರಕಟಿತವಾಯಿತು.

---

*ಈ ವರೆಗೆ 20 ಸಂಸ್ಕರಣಗಳು ಪ್ರಕಾಶಿಸಲ್ಪಟ್ಟಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನ್ನಡದ ಈ ಅನುವಾದದಲ್ಲಿ ಮೇಲಿನ ಸಂಸ್ಕರಣವನ್ನು ಆಧಾರವನ್ನಾಗಿಟ್ಟು ಕೊಳ್ಳಲಾಗಿದೆ. ಈ ಅನುವಾದದಲ್ಲಿ ಸಂಸ್ಕೃತದ ಭಾಗವನ್ನು ಹಾಗೆಯೇ ಉದ್ಧರಿಸಿ, ಹಿಂದೀ ಭಾಗವನ್ನು ಮಾತ್ರ ಕನ್ನಡದಲ್ಲಿ ಭಾಷಾಂತರ ಮಾಡಲಾಗಿದೆ.

ಮೂಲ ಸಂಸ್ಕರಣದಲ್ಲಿ ಕೊಟ್ಟಿರುವ ಪಾದಟಿಪ್ಪಣಿಗಳನ್ನು ಕನ್ನಡದಲ್ಲಿ ಭಾಷಾಂತರಿಸಿ, ಯಾವ ಸಂಕೇತವೂ ಇಲ್ಲದೇ ಉದ್ಧರಿಸಲಾಗಿದೆ. ಪಂ. ಯುಧಿಷ್ಠಿರ ಮೀಮಾಂಸಕರ ಟಿಪ್ಪಣಿಗಳಿಗೆ '—**ಯು.ಮೀ.**'; ಕನ್ನಡದ ಅನುವಾದಕರ ಟಿಪ್ಪಣಿಗಳಿಗೆ '—**ಅನು**', ಮತ್ತು ಈ ಕನ್ನಡ ಸಂಸ್ಕರಣದ ಸಂಪಾದಕರ ಟಿಪ್ಪಣಿಗಳಿಗೆ '—**ಸಂ.**', ಎಂಬ ಸಂಕೇತವನ್ನೂ ತೋರಿಸಲಾಗಿದೆ.

ಈ ಕಾಶೀ ಶಾಸ್ತ್ರಾರ್ಥದ ಐತಿಹಾಸಿಕ ಘಟನೆಯ ರಕ್ಷಣೆಗಾಗಿ—'**ರಾಷ್ಟ್ರ ಪುರುಷ ಯೋಗಿರಾಜ ಮಹರ್ಷಿ ದಯಾನಂದ ಸರಸ್ವತಿ**'*, ಎಂಬ ಗ್ರಂಥದಿಂದ ತತ್ಸಂಬಂಧಿತ ಘಟನೆಯನ್ನು (ಪುಟ 107–116), ಆವಶ್ಯಕ ಸಂಶೋಧನೆಯೊಡನೆ, ಈ ಪುಸ್ತಿಕೆಯಲ್ಲಿ ಉದ್ಧರಿಸಲಾಗಿದೆ.

ಇದಲ್ಲದೇ, ಈ ಕಾಶೀ ಶಾಸ್ತ್ರಾರ್ಥದಲ್ಲಿ ಉಪಸ್ಥಿತರಿದ್ದ ಪ್ರಮುಖ ವಿದ್ವಾಂಸರ ಮತ್ತು ಗಣ್ಯಮಾನ್ಯರ ಸೂಚಿಯನ್ನು **ಪರಿಶಿಷ್ಟ–1** ರಲ್ಲೂ; ಮತ್ತು ಮಹರ್ಷಿ ದಯಾನಂದರ ಹಲವು ಪ್ರಸಿದ್ಧ ಶಾಸ್ತ್ರಾರ್ಥಗಳ ಸಂಕೇತವನ್ನು **ಪರಿಶಿಷ್ಟ–2** ರಲ್ಲೂ ಕೊಡಲಾಗಿದೆ.

—**ಉಪೇಂದ್ರ ಭೂಪಾಲ**

---

*ಲೇಖಿಕರು : **ಪಂ. ಸುಧಾಕರ ಚತುರ್ವೇದಿ**; ಪ್ರಕಾಶಕರು: ವೈದಿಕ ಸಾಹಿತ್ಯ ಪ್ರಕಾಶನ ಸಮಿತಿ, ಕುಂಜಿಬೆಟ್ಟು, ಉಡುಪಿ (ದ.ಕ.), ಕರ್ನಾಟಕ. ದ್ವಿತೀಯ ಸಂಸ್ಕರಣ, 1977.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಐತಿಹಾಸಿಕ ಘಟನೆಯೊಂದಿಗೆ ಶಾಸ್ತ್ರಾರ್ಥಯುಗದ ಪುನರ್ಜನ್ಮ

1869 ನೆಯ ಇಸವಿಯ ಆಶ್ವಯುಜಮಾಸದ ಒಂದು ಪ್ರಾತಃಕಾಲ ಸ್ವಾಮೀ ದಯಾನಂದರು ರಾಮನಗರದಲ್ಲಿ, ಕಾಶೀರಾಜನ ಅರಮನೆಯ ಪಕ್ಕದ ಒಂದು ಮರದ ಕೆಳಗೆ ಕುಳಿತಿದ್ದುದನ್ನು ನೋಡಿ, ಜನರು ಸ್ತಬ್ಧರಾದರು. 'ವೇದಗಳಲ್ಲಿ ವಿಗ್ರಹಾರಾಧನೆಗೆ ಆಧಾರವಿಲ್ಲ, ಎಂದು ವಾದಿಸುವ ಸಂನ್ಯಾಸಿಯೊಬ್ಬನು ಬಂದಿದ್ದಾನೆ', ಎಂಬ ಸಂಗತಿಯನ್ನು ಕೇಳಿ, ರಾಮನಗರದ, ಹಾಗೂ ಕಾಶೀನಗರಿಯ ನಾಗರಿಕರಲ್ಲಿ ಎಂದೂ ಕೇಳದ, ಎಂದೂ ಕಾಣದ ಕುತೂಹಲ ಕಂಡುಬಂದಿತು. ಕಾಶೀರಾಜನಾದ ಈಶ್ವರೀ ನಾರಾಯಣಸಿಂಹನು ದಯಾನಂದರ ಆಗಮನದ ವಾರ್ತೆ ಕೇಳಿ, ಅವರ ಭೋಜನಾದಿಗಳಿಗೆ ಉಚಿತ ವ್ಯವಸ್ಥೆ ಮಾಡಿದನು.

ದಯಾನಂದರು ಒಂದು ತಿಂಗಳ ಕಾಲ ವಿಗ್ರಹಾರಾಧನೆ, ಜಾತಿಪದ್ಧತಿ, ದುಷ್ಟ ರೂಢಿಗಳು—ಇವನ್ನೆಲ್ಲಾ ಖಂಡಿಸಿ, ವೇದಧರ್ಮದ ಪ್ರಚಾರ ಮಾಡುತ್ತಿದ್ದರು. ರಾಮನಗರದ, ಹಾಗೂ ಕಾಶೀನಗರಿಯ ಜನಸಾಧಾರಣರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರಿ, ಸ್ವಾಮೀ ದಯಾನಂದರ ಸಾರಗರ್ಭಿತ ಸರಸ ಭಾಷಣಗಳನ್ನು ಶ್ರವಣ ಮಾಡುತ್ತಿದ್ದರು. ಉಭಯ ನಗರಗಳ ವಿದ್ವಜ್ಜನರೂ ಮೂಗಿನ ತುದಿಗೆ ಬೆರಳಿಟ್ಟುಕೊಂಡು—"ಏನೀ ಗಂಡು ಸಂನ್ಯಾಸಿಯ ಮೊಂಡು ಸಾಹಸ? ಪೌರಾಣಿಕ ಧರ್ಮದ ಉದ್ಗಮ ಸ್ಥಾನವಾದ, ವಿಗ್ರಹಾರಾಧನೆಯ ಅಭೇದ್ಯದುರ್ಗವಾದ ಕಾಶೀಪುರಿಯ ಮೇಲೆಯೇ ನೇರವಾಗಿ ಧಾಳಿಮಾಡುತ್ತಿದ್ದಾನಲ್ಲ!", ಎಂದುಕೊಳ್ಳುತ್ತಿದ್ದರು.

ಕಾಶೀನರೇಶ ಈಶ್ವರೀನಾರಾಯಣಸಿಂಹನು ನಿಷ್ಠಾವಂತ ವಿಗ್ರಹಾರಾಧಕನಾಗಿದ್ದನು. ದಯಾನಂದರ ಪ್ರಚಂಡ ಪ್ರಚಾರದ ಪ್ರಭಾವ ಪ್ರಜೆಗಳ ಮೇಲೆ ಪ್ರತಿದಿನವೂ ಅಧಿಕಾಧಿಕವಾಗಿ ಬೀಳುತ್ತಿದ್ದುದನ್ನು ಕಂಡು, ಅವನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿಂತಾಕ್ರಾಂತನಾದನು. ಇಲ್ಲಿನ ಪಂಡಿತರು ದಯಾನಂದರನ್ನು ಶಾಸ್ತ್ರಾರ್ಥದಲ್ಲಿ ಸೋಲಿಸದೇ ಹೋದ ಪಕ್ಷದಲ್ಲಿ, ಪೌರಾಣಿಕ ಪರಂಪರೆಗೆ ವರ್ಣನಾತೀತವಾದ ಆಘಾತ ಉಂಟಾಗದಿರದು, ಎಂದವನಿಗೆ ತೋರಿತು. ಸಾಲದುದಕ್ಕೆ, ಆತನ ಧರ್ಮಗುರುಗಳಾಗಿದ್ದ ಸ್ವಾಮೀ ನಿರಂಜನಾನಂದರೂ ಕೂಡ—"ಏನೋ, ಪ್ರಾಚೀನಪರಂಪರೆ ನಾಶವಾಗುತ್ತದಲ್ಲಾ, ಎಂದು ಗುದ್ದಾಡಬೇಕು, ಅಷ್ಟೇ! ಸ್ವಾಮೀ ದಯಾನಂದರು ಹೇಳುವುದು ಸತ್ಯ. ವೇದಗಳಲ್ಲಿ ಮೂರ್ತಿಪೂಜಾ ವಿಧಾನವಿಲ್ಲ," ಎಂದು ಬಿಟ್ಟಿದ್ದರು.

ರಾಮನಗರದಿಂದ ದಯಾನಂದರು ಕಾಶೀನಗರಕ್ಕೆ ನಡೆದರು. 'ಪ್ರಾಚೀನ ಕಾಲದಿಂದ ಆರ್ಯಾವರ್ತೀಯ ಧಾರ್ಮಿಕ ಪ್ರವೃತ್ತಿಗಳೆಲ್ಲವಕ್ಕೂ ಮೂಲಸ್ಥಾನವಾಗಿದೆ ಈ ಕಾಶಿ! ಇದನ್ನು ಪ್ರಮಾದದ ನಿದ್ರೆಯಿಂದೆಬ್ಬಿಸಿ, ಜಾಗೃತಗೊಳಿಸಿದಲ್ಲಿ, ನನ್ನ ಕಾರ್ಯ ಸುಲಭವಾದೀತು! ಜಗ್ಗಿಸಿ, ಕದಲಿಸಿ, ನೋಡುವೆನು', ಎಂಬ ಸಂಕಲ್ಪ ಹೊತ್ತೇ ಕಾಶೀನಗರಿಯಲ್ಲಡಿಯಿಟ್ಟರು. 1869 ನೆಯ ಇಸವಿ, ಅಕ್ಟೋಬರ್ 23 ನೆಯ ತಾರೀಖು ದುರ್ಗಾಕುಂಡದ ಬಳಿ ಆನಂದ ಬಾಗಿನಲ್ಲಿ ಬಿಡಾರ ಮಾಡಿದರು.

ಆನಂದಬಾಗಿನ ಮಹತ್ತ್ವ ವಿಶ್ವನಾಥ ದೇವಾಲಯಕ್ಕಿಂತ ಎಳ್ಳಿನಷ್ಟೂ ಕಡಿಮೆಯಾಗಿರಲಿಲ್ಲ. ಮುಂಜಾನೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಸಾವಿರಾರು ಜನರು ಕಿಕ್ಕಿರಿದು ನೆರೆದಿದ್ದರು. ದಯಾನಂದರು ತೆರೆನುಡಿಗಳಲ್ಲಿ ಸಾಕಾರೇಶ್ವರವಾದ, ಅವತಾರವಾದ, ಮೂರ್ತಿಪೂಜೆ, ತೀರ್ಥಯಾತ್ರಾ ಮಹತ್ವ, ಮೊದಲಾದುವನ್ನೆಲ್ಲಾ ಉಗ್ರವಾಗಿ ಖಂಡಿಸಿ—

"ಕಾಶೀಪುರಿಯಲ್ಲಿ ಕೆಚ್ಚುಳ್ಳ ವಿದ್ವಾಂಸರಾರಾದರೂ ಶಾಸ್ತ್ರಾರ್ಥಕ್ಕೆ ಬರಲಿ! ಎಲ್ಲರೂ ಒಟ್ಟಾಗಿಯೇ ಬೇಕಾದರೂ ಬರಲಿ! ಈ ಪೌರಾಣಿಕಲೀಲೆಗಳೆಲ್ಲಾ ವೇದೋಕ್ತವೆಂದು ತೋರಿಸುವುದಕ್ಕೆ ಸಿದ್ಧರಾಗಿ ಬರಲಿ!", ಎಂದು ಗರ್ಜಿಸುತ್ತಿದ್ದರು. ಜನರೆದುರಿಗೆ ಗರ್ಜಿಸುತ್ತಿದ್ದುದು ಮಾತ್ರವಲ್ಲ; ಕಾಶೀನರೇಶನಿಗೆ ಒಂದು ಪತ್ರ ಬರೆದು—"ನಿಮ್ಮ ಆಸ್ಥಾನದ ವಿದ್ವಾಂಸರೊಂದಿಗೆ ನನ್ನ ಶಾಸ್ತ್ರಾರ್ಥವನ್ನು ಏರ್ಪಡಿಸಿರಿ. ಸತ್ಯಾಸತ್ಯ ನಿರ್ಣಯವಾಗಿ ಹೋಗಲಿ!", ಎಂದೂ ತಿಳಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂತಹ ಪರಿಸ್ಥಿತಿಯಲ್ಲಿ ಕಾಶೀಪಂಡಿತರು ಬಹು ಕಾಲ ಕಿವಿಗಳಲ್ಲಿ ಹತ್ತಿ ತುಂಬಿಕೊಂಡು ಕುಳಿತಿರುವ ಹಾಗಿರಲಿಲ್ಲ. ಅವರು ತಮ್ಮ ನಂಬಿಕೆಗಳ ರಕ್ಷಣೆಗಾಗಿ ಏನಾದರೂ ಮಾಡಲೇ ಬೇಕಾಗಿತ್ತು! ಅಲ್ಲದೇ, ಈ ಮೊಂಡು ಸಂನ್ಯಾಸಿಯ ಒತ್ತಡದಿಂದ ಕಾಶೀನರೇಶನು ತಮಗೆಲ್ಲಾ ಶಾಸ್ತ್ರಾರ್ಥ ಮಾಡಲು ಆಜ್ಞೆ ಮಾಡುವ ದಿನವೂ ದೂರವಿಲ್ಲ, ಎಂಬುದನ್ನವರು ಸಹಜವಾಗಿಯೇ ಊಹಿಸಿ ಕೊಂಡರು. ಎಂದಾದರೂ ಎದುರಿಸಲೇ ಬೇಕಾದ ಆ ವಾದಿಭಯಂಕರನ ವಿದ್ವತ್ತ್ವದ ಆಳ, ತರ್ಕಚಾತುರ್ಯ, ವಾಗ್ಬಲ ಹಾಗೂ ಯುಕ್ತಿ-ಪ್ರಯುಕ್ತಿಗಳ ಪರಿಚಯ ಮಾಡಿಕೊಳ್ಳುವುದಕ್ಕಾಗಿ ಕಾಶೀನಗರಿಯ ಹೆಸರೆತ್ತಿದ ಪಂಡಿತರನೇಕರು ತಮ್ಮ ಶಿಷ್ಯರನ್ನೋ, ಮಕ್ಕಳನ್ನೋ ದಯಾನಂದರ ಪ್ರವಚನ-ಕೂಟಗಳಿಗೆ ಕಳುಹಿಸುತ್ತಿದ್ದರು. ಮತ್ತೆ ಕೆಲವರು ತಾವೇ ವೇಷ ಮರೆಸಿಕೊಂಡು ಹೋಗಿ ಕುಳಿತಿರುತ್ತಿದ್ದರು.

"ಪುರಾಣಗಳ ಶ್ಲೋಕಗಳನ್ನುಚ್ಚರಿಸಿ, 'ನಂಬದಿದ್ದರೆ ನರಕದ ನಾಯಿಯಾಗುವೆ', ಎಂದು ಹೆದರಿಸಿ, ಈ ಪ್ರಚಂಡನ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ನಮ್ಮೆಲ್ಲರಿಗಿಂತಧಿಕ ಶಾಸ್ತ್ರಪಾರಂಗತನಿವನು! ಇನ್ನೇನು ಗತಿ?", ಎಂದು ಕೊಂಡೇ ಹಿಂದಿರುಗುತ್ತಿದ್ದರು.

ಕಾಶಿಯ ಪಂಡಿತರ ನಿರೀಕ್ಷಣೆಯಂತೆ, ಕಾಶೀರಾಜನ ಆಜ್ಞೆಯೂ ಬಂದುಬಿಟ್ಟಿತು. 'ಸನಾತನಧರ್ಮದ ರಕ್ಷಣೆಗಾಗಿ, ಸ್ವಾಮೀ ದಯಾನಂದರೊಂದಿಗೆ ನೀವು ಶಾಸ್ತ್ರಾರ್ಥ ಮಾಡಲೇ ಬೇಕು', ಎಂದಿತ್ತು ರಾಜನ ನಿರೂಪ! ಮಾತ್ರವಲ್ಲದೇ, ಪಂಡಿತ ಜ್ಯೋತಿಃಸ್ವರೂಪ, ಜವಾಹರದಾಸ-ಪರಮಹಂಸರಂತಹ ವಿಖ್ಯಾತ ವಿದ್ವಾಂಸರೂ ಕೂಡ, ದಯಾನಂದರ ಪ್ರಭಾವಕ್ಕೆ ಸಿಕ್ಕಿದ್ದುದನ್ನು ಕಂಡು, ಕಾಶೀರಾಜನಂತೆಯೇ, ಪಂಡಿತರುಗಳೂ ಕೂಡ, ಬಹಳ ಚಿಂತೆಗೆ ಒಳಗಾದರು. ಸಾಲದುದಕ್ಕೆ ಸ್ವಾಮೀ ದಯಾನಂದರ ಪ್ರವಚನದ ಪ್ರಭಾವದಿಂದಲೂ, ಮತ್ತು ಅವರೊಡನೆ ಶಾಸ್ತ್ರಾರ್ಥಗಳಲ್ಲಿ ಪರಾಭವ ಹೊಂದಿದ ವಿದ್ವಾಂಸರುಗಳು ಅತಿ ವೈಭವದಿಂದ, ವಾದ್ಯವಾದನದ ವೈಖರಿಯೊಂದಿಗೆ, ವಿಶಾಲ ಜನಸಮೂಹದ ಮೆರವಣಿಗೆಗಳಲ್ಲಿ ರಾಜಮಾರ್ಗಗಳ ಮೂಲಕ ಗಂಗಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಳದಲ್ಲಿ ಸಮಾಧಿ ಹೊಂದಲು ಕಳುಹಿಸುತ್ತಿದ್ದ ದೇವಮೂರ್ತಿಗಳು ಬೇರೆ ಆವರ ಗಾಯದ ಮೇಲೆ ಉಪ್ಪನ್ನೆರಚುತ್ತಿದ್ದವು.

ಕಾಶೀರಾಜನ ಹತ್ತಿರ ಹೋಗಿ ಮುಖ್ಯಪಂಡಿತರುಗಳು—

"ರಾಜನ್! ಶಾಸ್ತ್ರಾರ್ಥ ಮಾಡಲೇಬೇಕಾದೀತು! ಬೇರೆ ಮಾರ್ಗವಿಲ್ಲ. ಆದರೆ, ದಯಾನಂದ ಸರಸ್ವತೀ ಮಾತು ಮಾತಿಗೂ **'ವೇದ ಪ್ರಮಾಣ'** ಕೇಳುತ್ತಾರೆ. ಬೇರೆ ಶಾಸ್ತ್ರಗಳಲ್ಲಿ ನಾವು ಆಜೇಯರೇ ಆದರೂ, ನಮ್ಮ ವೇದಜ್ಞಾನ ಆಷ್ಟಕ್ಕಷ್ಟೇ! ಆದುದರಿಂದ, ವೇದಾನುಸಂಧಾನಕ್ಕೆ ನಮಗೆ ಸ್ವಲ್ಪ ಕಾಲಾವಕಾಶ ಬೇಕು", ಎಂದು ಕೇಳಿಕೊಂಡರು.

ಯಾವ ಕಾಶೀನಗರಿಯ ಪಂಡಿತರ ವ್ಯವಸ್ಥಾಪತ್ರಗಳ ಆಧಾರದ ಮೇಲೆ ಸಮಸ್ತ ಭಾರತೀಯ ಧರ್ಮವಿವಾದಗಳ ಪರಿಹಾರವಾಗುತ್ತಿತ್ತೋ, ಆ ಪಂಡಿತರಿಗೆ, ಧರ್ಮದ ಆದಿಸ್ರೋತಸ್ಸಾದ ವೇದಗಳ ಮೇಲಿರುವ ಅಧಿಕಾರ ಇಷ್ಟುಮಾತ್ರ! ರಾಜನೂ ಸ್ತಬ್ಧನಾದನು! ಆದರೆ, ಕಾಲಾವಕಾಶ ನೀಡದೇ ಬೇರಾವ ಮಾರ್ಗವಿತ್ತು? ಶಾಸ್ತ್ರಾರ್ಥದ ದಿನವೂ ಗೊತ್ತಾಯಿತು.

ಸ್ವಾಮೀ ದಯಾನಂದರು—'ನಾಲ್ಕು ವೇದಗಳು, ನಾಲ್ಕು ಉಪವೇದಗಳು, ಆರು ವೇದಾಂಗಗಳು, ಆರು ಉಪಾಂಗಗಳು ಮತ್ತು ಪ್ರಕ್ಷೇಪರಹಿತವಾದ ಮನುಸ್ಮೃತಿ'—ಇವನ್ನು ಶಾಸ್ತ್ರಾರ್ಥದಲ್ಲಿ ಪ್ರಮಾಣವೆಂದು ಅಂಗೀಕರಿಸುವುದಾಗಿ ಘೋಷಿಸಿದರು. ಈ ಗ್ರಂಥಗಳ ಪಟ್ಟಿಯೇ ಪಂಡಿತರಿಗೆ ತಲೆನೋವು ತರಲು ಸಾಕಾಗಿದ್ದಿತು!

ಶಾಸ್ತ್ರಾರ್ಥದ ದಿನಕ್ಕಿಂತ ಎರಡು-ಮೂರು ವಾರ ಮುಂಚಿನಿಂದಲೇ ಕಾಶೀ ಪಂಡಿತರು ಕಂಕುಳಲ್ಲಿ ಶಾಸ್ತ್ರಗಳನ್ನಿರುಕಿಕೊಂಡು, ಒಬ್ಬರ ಮನೆಗೊಬ್ಬರು ಓಡಾಡುತ್ತಿದ್ದರು. ಅನಂತಚಿಂತಾಂಬುಧಿಯಲ್ಲಿ ಮುಳುಗೇಳುತ್ತಿದ್ದರು. ವೇದಪ್ರಮಾಣಗಳನ್ನು ಕೂಡಿಹಾಕಲು ಯತ್ನಿಸುತ್ತಿದ್ದರು. ಪಂಡಿತ ರಾಮಶಾಸ್ತ್ರೀ, ಪಂ॥ ಬಾಲಶಾಸ್ತ್ರೀ, ಪಂ॥ ರಾಜಾರಾಮಶಾಸ್ತ್ರೀ, ಪಂ॥ ದಾಮೋದರ ಶಾಸ್ತ್ರೀ, ಪಂ॥ ತಾರಾಚರಣ, ಪಂ॥ ಮಾಧವಾಚಾರ್ಯ ಮೊದಲಾದ ವಿದ್ವಚ್ಚಿರೋಮಣಿಗಳು, ಅಟ್ಟಗಳ ಮೇಲೆ ಹಾಕಿದ್ದ ಓಲೆಗರಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಟ್ಟುಗಳನ್ನು ಬಿಚ್ಚಿ ಬಿಚ್ಚಿ ಶಾಸ್ತ್ರಾನುಶೀಲನ ಮಾಡುತ್ತಿದ್ದುದನ್ನು ಕಂಡ ಕಾಶಿಯ ಜನ—

"ಆಬ್ಬ! ಇವನಾರೀ ಗುಜರಾತೀ ಸಂನ್ಯಾಸೀ? ಕಾಶಿಗೆ ವಾದಕ್ಕೆ ಬಂದವರೆಷ್ಟೋ, ಹೋದವರೆಷ್ಟೋ? ಎಂದೂ ಶಾಸ್ತ್ರಗಳ ಸುರಳಿ ಬಿಚ್ಚಿದವರಲ್ಲ ನಮ್ಮ ಪಂಡಿತರು! ನಿಂತ ನಿಂತಂತೆಯೇ ಶಾಸ್ತ್ರ ಪ್ರಮಾಣವಿತ್ತು ಪ್ರತಿವಾದಿಗಳ ಬಾಯಿ ಮುಚ್ಚಿಸುತ್ತಿದ್ದರು. ಆದರೆ, ಈ ದಯಾನಂದ ಸರಸ್ವತೀ ಇವರಿಗೇಕೋ ಇಷ್ಟು ತ್ರಾಸದಾಯಕನಾಗಿದ್ದಾನಲ್ಲ! ಯಾರೋ ದೈವೀ ಪುರುಷನೇ ಇರಬೇಕು, ಈ ಸಂನ್ಯಾಸೀ!", ಎಂದು ಹೇಳಿಕೊಳ್ಳುತ್ತಿದ್ದರು.

ಒಂದು ಕಡೆ ಪಂಡಿತರು ಶಾಸ್ತ್ರವಾಕ್ಯಗಳ ಅಸ್ತ್ರ-ಶಸ್ತ್ರಗಳನ್ನು ಸಂಚಯಿಸುತ್ತಿದ್ದರೆ, ಇನ್ನೊಂದೆಡೆ ಉದ್ದಂಡರಾದ ಧೂರ್ತರು, ದಯಾನಂದರನ್ನು 'ಇಲ್ಲ' ದಂತೆಯೇ ಮಾಡಿಬಿಡಲು ಬೇಕಾದ ಶಸ್ತ್ರಗಳ ಸಂಗ್ರಹಕಾರ್ಯದಲ್ಲೂ ತೊಡಗಿದ್ದರು.

ಕಾಶಿಗೆ ಕಾಶಿಯೇ ಕ್ಷುಬ್ಧವಾಗಿತ್ತು. ಆದರೆ, ಆನಂದಬಾಗಿನಲ್ಲಿ ವಿರಾಜಮಾನರಾಗಿದ್ದ ದಯಾನಂದ ಸರಸ್ವತೀ ಮಾತ್ರ ಪೂರ್ಣ ನಿಶ್ಚಿಂತರಾಗಿ, ನಿರ್ಭಯರಾಗಿ, ಮಂದಹಾಸಯುಕ್ತರಾಗಿ ತಮ್ಮ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ದಿನ ದಿನಕ್ಕೆ ಆವರ ಅನುಯಾಯಿಗಳ ಸಂಖ್ಯೆ ಬೆಳೆಯುತ್ತಾ ಹೋಯಿತು.

ಅಂದು 1869 ನೆಯ ಇಸವಿ ನವೆಂಬರ್ 16 ನೆಯ ತಾರೀಖು ಮಂಗಳವಾರ. ಅಂದೇ ಶಾಸ್ತ್ರಾರ್ಥ ನಡೆಯಬೇಕಾಗಿದ್ದಿತು. ಮಧ್ಯಾಹ್ನ ನಾಲ್ಕು ಗಂಟೆಗೆ ಆರಂಭವಾಗಬೇಕಾದ ಶಾಸ್ತ್ರಾರ್ಥಕ್ಕೆ ಬೆಳಗಿನಿಂದಲೇ ಸನ್ನಾಹಗಳು ಆರಂಭವಾಗಿದ್ದುವು. ಶೈವ, ವೈಷ್ಣವ, ಶಾಕ್ತ ಮೊದಲಾದ ಸಮಸ್ತ ಸಂಪ್ರದಾಯಗಳ ವಿದ್ವಾಂಸರೂ ತಮ್ಮ ತಮ್ಮ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ, ವಿಜಯ ಕರುಣೆಸೆಂದು ಬೇಡಿಕೊಂಡರು. ಪರೀಕ್ಷೆಯ ದಿನ ಲಗುಬಗೆಯಿಂದ ಓಡಾಡುವ ವಿದ್ಯಾರ್ಥಿಗಳಂತೆ ಕಾಶೀ ಪಂಡಿತರು ಅತ್ಯಂತ ಕಳವಳದಿಂದ ಒಬ್ಬರ ಮನೆಗೊಬ್ಬರು ಓಡಾಡುತ್ತಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಈ ಪಂಡಿತರು ಇಷ್ಟೇಕೆ ಒದ್ದಾಡಬೇಕು? 'ಆ ತಿರಿದುಣ್ಣುವ ಹಾರುವಯ್ಯನ ಬುರುಡೆಯ ಮೇಲೊಂದು ದೊಣ್ಣೆಯ ಪೆಟ್ಟು ಹಾಕಿ', ಎಂದು ನಮ್ಮಲ್ಲಿ ಯಾರಿಗಾದರೂ ಹೇಳಬಾರದೇ? ಕ್ಷಣಕಾಲದಲ್ಲಿ ಆತನೇ 'ಇಲ್ಲ'ದಂತೆ ಮಾಡಿದರೆ, ಕಾಶೀವಿಶ್ವನಾಥಪ್ಪ, ಗಂಗಮ್ಮ ಎಲ್ಲರೂ ಕ್ಷೇಮವಾಗಿರುತ್ತಾರೆ", ಎಂದು ಜಟ್ಟಿಗಳ ತಂಡವೊಂದು ಆಲೋಚಿಸುತ್ತಿತ್ತು.

ಆದರೆ, ದಯಾನಂದರಿಗೆ ಯಾವ ಕಳವಳವೂ ಇರಲಿಲ್ಲ. ಅವರು ಬೆಳಿಗ್ಗೆ ಕ್ಷೌರ ಮಾಡಿಸಿಕೊಂಡು, ಸ್ನಾನಮಾಡಿ, ತಮ್ಮ ಪ್ರವಚನಾಸನದಲ್ಲಿ ಮಂಡಿಸಿದರು. ಎಂದಿನಂತೆ, ಬಳಿ ಬಂದವರಿಗೆ ಅಂದೂ ಧರ್ಮಭೋದನ ಮಾಡಿದರು ಸುಮಾರು 10 ಗಂಟೆಗೆ, ನಗರ ಸಂಚಾರಕ್ಕೆ ಹೋಗಿದ್ದ ಭಕ್ತ ಬಲದೇವ ಪ್ರಸಾದನು ಬಹಳ ಗಾಬರಿಯಿಂದ ಬಂದು—

"ಗುರುದೇವ! ಈ ನಗರದ ಪರಿಸ್ಥಿತಿ ಏಕೋ ಅತಿಕ್ಷುಬ್ಧವಾಗಿದೆ. ತಮ್ಮ ಪಾದಕ್ಕೆ ಕೇಡೆಣಿಸುವ ಬಗೆಯಿಂದಲೇ ನೂರಾರು ಜನ ಪುಂಡರು ಇಂದಿನ ಸಭೆಗೆ ಬರುವಂತಿದೆ. ಏನಾದರೂ ಆಗಬಾರದುದು ಆಗಿಹೋದರೇನು ಗತಿ?", ಎಂದು ಹೇಳಿದನು.

ದಯಾನಂದರಿಗೆ ಭಕ್ತನ ಭಯವನ್ನು ಕಂಡು ನಗೆಬಂದಿತು. ಅವರು ನಸುನಗುತ್ತಾ—

"ಸತ್ಯಭಾಸ್ಕರನು ಅಸತ್ಯ ತಿಮಿರವನ್ನು ಛಿನ್ನ–ಭಿನ್ನ ಮಾಡಿಯೇ ತೀರುವನೆಂದು ಯೋಗಿಗಳ ನಿಶ್ಚಯ. ನಿಷ್ಪಕ್ಷಪಾತರಾಗಿ ಈಶ್ವರಾಜ್ಞಾಪರಿಪಾಲನೆ ಮಾಡುವ ಸಾಧು–ಸಂನ್ಯಾಸಿಗಳಿಗೆ, ಯೋಗನಿಷ್ಠರಿಗೆ ಭಯವೆತ್ತದು? ಹೆದರಿಕೆಯಿಂದ ಸತ್ಯವನ್ನು ಸತ್ಪುರುಷರೆಂದೂ ಬಚ್ಚಿಡುವುದಿಲ್ಲ. ಚಿಂತೆ ಏಕೆ, ಬಲದೇವಪ್ರಸಾದ! ದೇವರೊಬ್ಬನನ್ನುಳಿದರೆ, ಇನ್ನುಳಿದವರೆಲ್ಲಾ ನನ್ನಂತಹ ಜೀವಾತ್ಮರೇ ತಾನೇ? ನನ್ನ ಪ್ರಾಣ ಹೋದರೆ, ಹೊರಟು ಹೋಗಲಿ! ಸತ್ಯ ಮಾತ್ರ ಹೋಗದಿರಲಿ! ಭಯಕ್ಕೆ ಎಳ್ಳಿನಷ್ಟೂ ಅವಕಾಶವಿಲ್ಲ. ಬಂದುದನ್ನೆಲ್ಲಾ ಬಂದಾಗಲೇ ನೋಡಿಕೊಳ್ಳೋಣ", ಎಂದು ದೃಢವಾದ ಧ್ವನಿಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳಿಬಿಟ್ಟರು. ಅಕ್ಕಪಕ್ಕದಲ್ಲಿದ್ದವರೆಲ್ಲಾ ಆ ದಿವ್ಯಪುರುಷನ ದೈವಭಕ್ತಿ, ಹಾಗೂ ದುರ್ದಮ್ಯ ಧೈರ್ಯವನ್ನು ಕಂಡು ರೋಮಾಂಚಿತರಾದರು!

ಸಂಜೆ ನಾಲ್ಕೂವರೆ ಗಂಟೆಯ ಹೊತ್ತಿಗೆ ದಳ-ಬಲಸಮೇತನಾಗಿ ಪೋಲೀಸ್ ಸೂಪರಿಂಟೆಂಡೆಂಟ್ ರಘುನಾಥಪ್ರಸಾದನು ಸಭಾಸ್ಥಳಕ್ಕೆ ಬಂದು, ಶಾಂತಿರಕ್ಷಣೆಗೆ ವ್ಯವಸ್ಥೆ ಮಾಡಿದನು. ಐದು ಗಂಟೆಯ ಹೊತ್ತಿಗೆ 50–60 ಸಾವಿರ ಜನರ ಗುಂಪು ಸೇರಿತು. ಎದುರು-ಬದುರಿಗೆ ದಯಾನಂದರಿಗೆ ಮತ್ತು ಪ್ರತಿವಾದಿಗಳಿಗಾಗಿ ಆಸನಗಳು ಹಾಕಲ್ಪಟ್ಟವು. ಮಧ್ಯದಲ್ಲಿ ಮಧ್ಯಸ್ಥನಾದ ಕಾಶೀನರೇಶ ಈಶ್ವರೀನಾರಾಯಣ ಸಿಂಹನಿಗಾಗಿ ಆಸನವಿಡಲ್ಪಟ್ಟಿತು. ಕಾಶೀನಗರಿಯ ಪಂಡಿತಪ್ರವರರಲ್ಲಿ ಕೆಲವರು ಆನೆಗಳ ಮೇಲೂ, ಕೆಲವರು ಕುದುರೆಗಾಡಿಗಳಲ್ಲಿಯೂ, ಕೆಲವರು ಪಲ್ಲಕ್ಕಿಗಳಲ್ಲಿಯೂ ಅತಿವೈಭವದಿಂದ ಮೆರವಣಿಗೆ ಮಾಡಿಸಿಕೊಂಡು, ತಮ್ಮ ಬಿರುದು-ಬಾವಲಿಗಳನ್ನು ಹೊಗಳಿಸಿಕೊಂಡು, ಸಭಾಸ್ಥಳಕ್ಕೆ ಆಗಮಿಸಿ, ತಮ್ಮ ತಮ್ಮ ಪೀಠಗಳಲ್ಲಿ ಮಂಡಿಸಿದರು. ದಯಾನಂದರು ಹಸ್ಮುಖಿರಾಗಿ, ಆಗಮಿಸಿದ ವಿದ್ವಾಂಸರನ್ನೆಲ್ಲಾ ಪರಮಾದರದಿಂದ ಕೈಮುಗಿದು ಸ್ವಾಗತಿಸುತ್ತಿದ್ದರು.

ನಿಶ್ಚಿತಸಮಯಕ್ಕೆ ಸಭಾಧ್ಯಕ್ಷನಾದ ಕಾಶೀನರೇಶ ಈಶ್ವರೀನಾರಾಯಣ ಸಿಂಹನು ಬಂದು, ತನ್ನ ಆಸನದಲ್ಲಿ ಕುಳಿತನು. ಈಶ್ವರೀನಾರಾಯಣಸಿಂಹನ ಕರೆಯ ಮೇರೆಗೆ ಸ್ವಾಮೀ ವಿಶುದ್ಧಾನಂದ, ಪಂ॥ ತಾರಾಚರಣ ತರ್ಕರತ್ನ, ಪಂ॥ ಮಾಧವಾಚಾರ್ಯ, ಪಂ॥ ಬಾಲಶಾಸ್ತ್ರೀ, ಪಂ॥ ವಾಮನಾಚಾರ್ಯ, ಪಂ॥ ಶಿವಸಹಾಯ, ಪಂ॥ ರಾಮಶಾಸ್ತ್ರೀ, ಪಂ॥ ದಾಮೋದರಶಾಸ್ತ್ರೀ, ಪಂ॥ ರಾಜಾರಾಮಶಾಸ್ತ್ರೀ ಮೊದಲಾದ ನಲವತ್ತಕ್ಕೂ ಹೆಚ್ಚು ಪಂಡಿತರು, ಏಕಾಂಗಿಯಾದ ಒಬ್ಬ ಕೌಪೀನಮಾತ್ರಧಾರೀ ಸಂನ್ಯಾಸಿಯನ್ನೆದುರಿಸಲು ಸಿದ್ಧರಾಗಿ, ಶಾಸ್ತ್ರಾರ್ಥರಂಗದಲ್ಲಿನ ಆಸನಗಳನ್ನೇರಿ ಕುಳಿತರು.

ದಯಾನಂದರ ಅನುಯಾಯಿಗಳಾಗಿದ್ದ ಪಂ॥ ಜ್ಯೋತಿಃಸ್ವರೂಪ, ಹಾಗೂ ಸಾಧು ಜವಾಹರದಾಸರು ದಯಾನಂದರ ಬಳಿ ಕುಳಿತುಕೊಳ್ಳಲು ಯತ್ನಿಸಿದಾಗ, ಪಂ॥ ಬಾಲಶಾಸ್ತ್ರಿಯು ಈಶ್ವರೀನಾರಾಯಣಸಿಂಹನ ಬಳಿ ಹೋಗಿ, ಪಿಸುಮಾತಿನಲ್ಲಿ,—"ಮಹಾರಾಜ! ಈ ಒಬ್ಬ ಸಂನ್ಯಾಸಿಯೊಡನೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೆಣಗುವುದೇ ನಮಗೆ ಸಾಕಾಗಿದೆ. ಜೊತೆಗೆ ಕಾಶೀನಿವಾಸಿಗಳೇ ಆದ, ಸ್ವತಃ ಭಾರೀ ವಿದ್ವಾಂಸರಾದ ಮತ್ತು ನಮ್ಮೆಲ್ಲರ ಒಳಗು-ಹೊರಗುಗಳನ್ನೆಲ್ಲಾ ಚೆನ್ನಾಗಿ ಬಲ್ಲ ಈ ಇಬ್ಬರೂ ದಯಾನಂದರ ಜೊತೆಗೆ ಸೇರಿದರೆ, ಕಾಶೀ ವಿಶ್ವನಾಥನೂ ನಮ್ಮನ್ನು ಗೆಲ್ಲಿಸಲಾರ!", ಎಂದು ಹೇಳಿದನು. ಕಾಶೀರಾಜನು ಅವರಿಬ್ಬರನ್ನೂ ದೂರವೇ ಕೂಡಿಸಿಬಿಟ್ಟನು. ಆದರೆ, ಇದಾವುದರಿಂದಲೂ, ಧೀರ ದಯಾನಂದರು ಎದೆಗುಂದಲಿಲ್ಲ. 'ಸರ್ವಾಧಾರನಾದ ಪರಮಾತ್ಮ ಮತ್ತು ಸತ್ಯಾಧಾರವಾದ ವೇದಗಳು ನನಗೆ ಆಧಾರ! ಅವೆರಡೂ ನನ್ನೊಂದಿಗಿರುವಾಗ, ನಾನು ಏಕಾಂಗಿಯಾಗಿಯೇ ಸಮಸ್ತಜಗತ್ತಿನ ವಿದ್ವಾಂಸರೆಲ್ಲರನ್ನೂ ಎದುರಿಸಬಲ್ಲೆ', ಎಂದವರು ನಿಶ್ಚಿಂತರಾಗಿದ್ದರು.

ಅಧ್ಯಕ್ಷನ ಅನುಮತಿ ಪಡೆದು, ಪಂ॥ ತಾರಾಚರಣ ತರ್ಕರತ್ನನು ವಾದವನ್ನು ಆರಂಭಿಸಿದನು—"ಸ್ವಾಮೀಜೀ! ನಮಗೆ ವೇದಗಳು ಪ್ರಮಾಣ! ತಾವೂ ಒಪ್ಪುತ್ತೀರಷ್ಟೇ!"

"ತರ್ಕರತ್ನರೇ! ನಿಸ್ಸಂದೇಹವಾಗಿ! ವೇದಗಳಲ್ಲಿ ವಿಗ್ರಹಾರಾಧನಾ ಸಮರ್ಥಕವಾದ ಯಾವುದಾದರೂ ಮಂತ್ರವಿದ್ದರೆ, ಉಚ್ಚರಿಸಿರಿ", —ದಯಾನಂದರು ಹೇಳಿದರು.

"ವೇದೋಕ್ತವಲ್ಲದುದನ್ನು ಆಚರಿಸಬಾರದೆಂದು ವೇದಗಳಲ್ಲಿ ಹೇಳಿದೆಯೇ?"—ತಾರಾಚರಣನು ಪ್ರಶ್ನಿಸಿದನು.

"ಈ ಪ್ರಶ್ನೆ 'ತರ್ಕರತ್ನ'ರ ಪ್ರತಿಭೆಗೆ ತಕ್ಕುದಲ್ಲ. ವೇದದಲ್ಲಿ ಏನು ಹೇಳಿದೆಯೋ, ಏನಿಲ್ಲವೋ, ಆಮೇಲೆ ನೋಡಿಕೊಳ್ಳೋಣ! ನನ್ನ ಆಹ್ವಾನಕ್ಕೆ ಉತ್ತರಬರಲಿ!"—ದಯಾನಂದರು ಗರ್ಜಿಸಿದರು. ಉತ್ತರ ಬರಲಿಲ್ಲ!

"ಸ್ವಾಮೀಜೀ! **'ರಚನಾನುಪಪತ್ತೇರ್ನಾನುಮಾನಮ್'**, ಎಂಬ ವೇದಾಂತ ಸೂತ್ರವು ವೇದಾನುಕೂಲವೆಂದು ಸಿದ್ಧಪಡಿಸಿರಿ."—ಸ್ವಾಮೀ ವಿಶುದ್ಧಾನಂದನು ಆರಂಭಿಸಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಯಾನಂದರು ತಮಗೆ ಸಹಜವಾದ ಎಳೆಮಗುವಿನಂತಹ ಸರಳತನದಿಂದ—"ಸಂಪೂರ್ಣ ವೇದಗಳ ಕಂಠಪಾಠವಾಗದೇ, ಈ ನಿಮ್ಮ ಪ್ರಶ್ನೆಗೆ ಉತ್ತರ ಕೊಡಲು ಸಾಧ್ಯವಿಲ್ಲ.", ಎಂದರು.

ವಿಶುದ್ಧಾನಂದನಿಗೆ ರೆಕ್ಕೆ ಚಿಗುರಿತು! ಅಟ್ಟಹಾಸದಿಂದ ಕೈ ಹೊಯ್ದು ನಗುತ್ತಾ—

7773

"ಸಮಸ್ತ ವೇದಶಾಸ್ತ್ರ ನಿನಗೆ ನೆನಪಿಲ್ಲದಿದ್ದರೆ, ಶಾಸ್ತ್ರಾರ್ಥ ಮಾಡಲು ಕಾಶಿಗೇಕೆ ಬಂದೆ?", ಎಂದು ಕೇಳಿದನು.

"ಓ ವೃದ್ಧ ಸಂನ್ಯಾಸೀ! ನಿನಗೆಲ್ಲಾ ನೆನಪಿದೆಯೇ?"—ದಯಾನಂದರು ಮರು ಪ್ರಶ್ನೆ ಹಾಕಿದರು.

ವಿಶುದ್ಧಾನಂದನು ಅಹುದೆನ್ನಲು, ದಯಾನಂದರು—"ಹಾಗಿದ್ದಲ್ಲಿ ಧರ್ಮದ ಸ್ವರೂಪವನ್ನು ಹೇಳಿ", ಎಂದು ನುಡಿದರು.

ಪಾಪ! ವಿಶುದ್ಧಾನಂದನು ದಿಙ್ಮೂಢನಾದನು. ದುರ್ದೈವದಿಂದ ಆವಶ್ಯಕವಾದ ಶ್ಲೋಕ ನೆನಪಿಗೆ ಬರಲಿಲ್ಲ. ಸಂಸ್ಕೃತದಲ್ಲಿ ಧರ್ಮಲಕ್ಷಣವೆಂದು ಯಾವುದೋ ವಾಕ್ಯವನ್ನುಚ್ಚರಿಸಿದನು.

"ನನಗೆ ನಿಮ್ಮ ವಾಕ್ಯ ಬೇಕಾಗಿಲ್ಲ; ಶಾಸ್ತ್ರವಾಕ್ಯ ಬೇಕು", ಎಂದು ದಯಾನಂದರು ಮೊಳಗಿದರು. ವಿಶುದ್ಧಾನಂದನ ಬಾಯಿ ಮುಚ್ಚಿತು!

ಆಗ ಬಾಲಶಾಸ್ತ್ರೀ, ಅತಿಶಯ ವಿಶ್ವಾಸದಿಂದ—"ಸ್ವಾಮೀಜೀ! ನನಗೆಲ್ಲಾ ನೆನಪಿದೆ. ನನ್ನನ್ನು ಕೇಳಿರಿ!", ಎಂದನು.

"ಶಾಸ್ತ್ರಿಗಳೇ! ನೀವು ಅಧರ್ಮದ ಲಕ್ಷಣವನ್ನೇ ಅಷ್ಟು ಹೇಳಿಬಿಡಿರಲ್ಲ!", ಎಂದು ದಯಾನಂದರು ಅವನನ್ನು ಆಹ್ವಾನಿಸಿದರು. ಬಾಲ ಶಾಸ್ತ್ರಿಯೂ ಅಸಹಾಯನಾಗಿ ಆಗಸದತ್ತ ನೋಡತೊಡಗಿದನು.

ಯಾವ ಕಾಶೀಪಂಡಿತರ ವ್ಯವಸ್ಥಾಪತ್ರಗಳಿಂದಲೇ ಸಮಸ್ತ ಧಾರ್ಮಿಕ ಸಮಸ್ಯೆಗಳಿಗೂ ಪರಿಹಾರ ಸಿಕ್ಕುವುದೆಂದು ಆಶಿಸಲಾಗುತ್ತದೋ, ಆ ಕಾಶೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಂಡಿತರೇ ಹೀಗೆ ಎರಡೆರಡು ನಿಮಿಷಗಳಲ್ಲಿ ಅಪ್ರತಿಭರಾಗಿ ಹಿಂಜರಿಯುತ್ತಿದ್ದುದನ್ನು ಕಂಡು, ಕಾಶಿಯ ನಾಗರಿಕರು ವಿಸ್ಮಿತರಾಗುತ್ತಿದ್ದರು! ಸಭಿಕರಲ್ಲಿ ಪೂರ್ವಾಚಾರಸಂಪ್ರದಾಯನಿಷ್ಠರ ಕಳವಳ ಹೆಚ್ಚುತ್ತಿತ್ತು; ವಿಚಾರಶೀಲರ ಉತ್ಸಾಹ ಉಕ್ಕೇರುತ್ತಿತ್ತು.

ಪಂಡಿತ ಮಾಧವಾಚಾರ್ಯನು ಕೈಯಲ್ಲಿ ಎರಡು ಹಾಳೆಗಳನ್ನು ಹಿಡಿದು—"ಇಲ್ಲಿ ನೋಡಿರಿ! ಇವು ವೇದವಾಕ್ಯಗಳು!* ಇವುಗಳಲ್ಲಿ **ಪ್ರತಿಮಾ** ಮತ್ತು **ಪೂರ್ತ**, ಎಂಬ ಶಬ್ದಗಳಿವೆ. ಅದರಿಂದ ವಿಗ್ರಾಹಾರಾಧನೆ ಸಿದ್ಧವಾಗುತ್ತದೆ.", ಎಂದು ನುಡಿದನು.

ದಯಾನಂದರು—"ನೀವೆಷ್ಟು ಲಾಗ ಹಾಕಿದರೂ ಆ ಶಬ್ದಗಳಿಂದ ಮೂರ್ತಿಪೂಜೆ ಸಿದ್ಧವಾಗಲಾರದು. ಅದರರ್ಥವೇ ಬೇರೆ!", ಎಂದು ಹೇಳಿ, ಆ ಸಂಪೂರ್ಣಪ್ರಕರಣದ ಅರ್ಥವನ್ನು ವಿವರಿಸಿದರು.

ಪಂಡಿತಮಂಡಲವು—'ಅಯ್ಯೋ! ಈ ಕಾಲಜಿಹ್ವನ ಜೊತೆಗೆ ಕಾಳಗಕ್ಕೆ ಕೈ ಹಾಕಬಾರದಾಗಿತ್ತು', ಎಂದು ಕೈ ಕೈ ಹಿಸುಕಿಕೊಂಡಿತು.

ಮಾಧವಾಚಾರ್ಯನು ಆ ಪ್ರಸಂಗವನ್ನಲ್ಲಿಯೇ ಬಿಟ್ಟು, **'ಬಾಹ್ಮಣಾನೀತಿಹಾಸಃ ಪುರಾಣಾನಿ.'**, ಎಂಬ ತೈತ್ತಿರೀಯೋಕ್ತಿಯನ್ನುದ್ಧರಿಸಿ—"ಸ್ವಾಮೀಜೀ! ಈ ವಾಕ್ಯದಲ್ಲಿನ **'ಪುರಾಣಾನಿ'**, ಎಂಬ ಶಬ್ದವು ಅಷ್ಟಾದಶ ಪುರಾಣಗಳನ್ನು ನಿರ್ದೇಶಿಸುತ್ತಿದೆ.", ಎಂದನು.

ಮಾಧವಾಚಾರ್ಯನ ಚಾತುರ್ಯ ದಯಾನಂದರಿಗೆ ಆ ಕ್ಷಣವೇ ಅರ್ಥವಾಯಿತು. **'ಪುರಾಣ'** ಶಬ್ದ ಹದಿನೆಂಟು ಪುರಾಣಗಳನ್ನು ಸೂಚಿಸುವುದೆಂದು ಒಪ್ಪಿತವಾದಲ್ಲಿ, ಪುರಾಣಗಳ ಆಧಾರದಿಂದ ಮೂರ್ತಿಪೂಜೆಯನ್ನು ಲೀಲಾಜಾಲವಾಗಿ ಸಿದ್ಧಪಡಿಸಬಹುದೆಂದು ಮಾಧವಾಚಾರ್ಯನು ತರ್ಕಿಸಿದ್ದನು. ದಯಾನಂದರು ದೃಢವಾದ ಧ್ವನಿಯಲ್ಲಿ—

---

*ವಸ್ತುತಃ ಅವು ವೇದವಾಕ್ಯಗಳೇ ಆಗಿರಲಿಲ್ಲ. ಪೌರಾಣಿಕ ಪಂಡಿತರ ಛಲ–ಚಾತುರ್ಯ ಇದೇ ತಾನೇ! ಪಂ.ಮಾಧವಾಚಾರ್ಯನು ಇದರಲ್ಲಿ ಪ್ರವೀಣನಾಗಿದ್ದನು. ಇದೇ ಅಸ್ತ್ರವನ್ನೇ ಕೊನೆಗೂ ಅವನು ಉಪಯೋಗಿಸಿಕೊಂಡೇ ಸ್ವಪಕ್ಷರಕ್ಷಣೆ ಮಾಡಿಕೊಂಡನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಅಲ್ಲಿ ಸಿದ್ಧವಾಗುವುದು ನಿಮ್ಮ ಅಷ್ಟಾದಶ ಪುರಾಣಗಳಲ್ಲ! **ಪುರಾಣಾನಿ**, ಎಂಬುದು **'ಬ್ರಾಹ್ಮಣಾನಿ'**, ಎಂಬ ಶಬ್ದದ ವಿಶೇಷಣ.", ಎಂದು ಉತ್ತರ ವಿತ್ತರು.

ಸ್ವಾಮೀ ವಿಶುದ್ಧಾನಂದನು—

"ಆದೆಂತಾದೀತು? **ಬ್ರಾಹ್ಮಣಾನಿ**, ಹಾಗೂ **ಪುರಾಣಾನಿ**, ಎಂಬೆರಡು ಶಬ್ದಗಳ ನಡುವೆ **'ಇತಿಹಾಸ'** ಶಬ್ದದ ವ್ಯವಧಾನವಿದೆಯಲ್ಲ?", ಎಂದು ನಡುವೆ ತಲೆಹಾಕಿದನು.

ಸ್ವಾಮೀ ದಯಾನಂದರು ಸಂಪೂರ್ಣ ಸಭೆಯೇ ಪ್ರತಿಧ್ವನಿಸುವಂತೆ ನಕ್ಕರು!

"ಓಹೋ ವಿಶುದ್ಧಾನಂದ ಸ್ವಾಮಿಗಳ ವ್ಯಾಕರಣಪರಿಜ್ಞಾನವೂ ಅಸಾಧಾರಣವೇ ಆಗಿದೆಯಲ್ಲ! ವಿಶೇಷ್ಯ-ವಿಶೇಷಣಗಳ ಮಧ್ಯೆ ವ್ಯವಧಾನವಿರಬಾರದೆಂದು ಯಾವ ವ್ಯಾಕರಣದಲ್ಲಿ ಹೇಳಿದೆ? **'ಅಜೋ ನಿತ್ಯಃ ಶಾಶ್ವತೋऽಯಂ ಪುರಾಣೋ'**, ಎಂಬ ಗೀತಾವಾಕ್ಯದಲ್ಲಿ (2.20) ಪುರಾಣ ಮತ್ತು ದೇಹೀ, ಈ ಎರಡರ ನಡುವೆ ಎಷ್ಟು ದೂರವಿದೆ? ಆದ ಮಾತ್ರಕ್ಕೆ 'ಪುರಾಣ' ಶಬ್ದ 'ದೇಹಿ'ಯ ವಿಶೇಷಣವಲ್ಲ, ಎನ್ನಲಾದೀತೇ?", ಎಂದು ದಯಾನಂದರು ಪ್ರಶ್ನಿಸಿದರು.

ಮೌನವೇ ಲೇಸೆಂದು ಭಾವಿಸಿ, ವಿಶುದ್ಧಾನಂದನು ಸುಮ್ಮನಾದನು.

ನಿರಂತರ ನಾಲ್ಕು ಗಂಟೆಗಳ ಕಾಲ ದಯಾನಂದರೊಬ್ಬರೇ ಏಕಾಕಿಯಾಗಿ ಕಾಶಿಯ ಪಂಡಿತರೆಲ್ಲರ ಬಾಯಿ ಮುಚ್ಚಿಸುತ್ತಿದ್ದರು. ಯಾವ ಪಂಡಿತನೂ ಮುಂದೆ ಬಾರಲಿಲ್ಲ.

'ನಮ್ಮ ವಿದ್ವಾಂಸರಿಗೆ ಇನ್ನೇನು ತಲೆನೋವು ತರಲಿದ್ದಾನೋ, ಈ ಸ್ವಾಮಿ?', ಎಂದು ನಾಗರಿಕರು ಕಾತುರರಾಗಿರಲು, ದಯಾನಂದರು—

"ಕಾಶೀನಗರಿಯ ವಿದ್ವಾಂಸರಲ್ಲಿ ಯಾರಿಗಾದರೂ ವ್ಯಾಕರಣಜ್ಞಾನದ ಅಭಿಮಾನವಿದ್ದರೆ, **'ಕಲ್ಮ'** ಸಂಜ್ಞೆಯು ವ್ಯಾಕರಣದಲ್ಲಿ ಎಲ್ಲಿಯಾದರೂ ಇದೆಯೋ? ಇಲ್ಲವೋ, ಹೇಳಲಿ!", ಎಂದು ಕರೆಯಿತ್ತರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಶೀನಗರಿಯ ಗೌರವರಕ್ಷಣೆಯಾಗಲೆಂಬ ಉದ್ದೇಶ್ಯದಿಂದ—"ವ್ಯಾಕರಣದಲ್ಲಿ 'ಕಲ್ಮ' ಸಂಜ್ಞೆಯಿಲ್ಲ. ಆದರೆ, ಒಬ್ಬ ಭಾಷ್ಯಕಾರನು ಅದನ್ನು ಅಪಹಾಸ್ಯ ಮಾಡಿದ್ದಾನೆ.", ಎಂದು ಬಾಲಶಾಸ್ತ್ರೀ ಬಿಂಕ ಬೀರುತ್ತಾ ಭಾಷಣವನ್ನಾರಂಭಿಸಿದನು.

"ಯಾವ ಸೂತ್ರದ ವಿವೃತ್ತಿಯಲ್ಲಿ, ಯಾವ ಭಾಷ್ಯಕಾರನು ಅಪಹಾಸ್ಯ ಮಾಡಿದ್ದಾನೆ? ಪ್ರಮಾಣಪೂರ್ವಕ ಸಿದ್ಧಪಡಿಸಿರಿ."—ದಯಾನಂದರು ಗರ್ಜಿಸಿದರು.

ಬಾಲಶಾಸ್ತ್ರಿಯ ಸಾಹಸ ಅಲ್ಲಿಗೇ ಸಮಾಪ್ತವಾಯಿತು.

ಕಾಶೀಪಂಡಿತರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಸಭೆಗೆ ಬರುವ ಮುನ್ನವೇ ನಿಶ್ಚಯಮಾಡಿಕೊಂಡು ಬಂದಿದ್ದಂತೆ, ಶಾಸ್ತ್ರ-ಬಲದಿಂದ ಜಯಿಸಲಾಗದ ದಯಾನಂದರನ್ನು ಶಾಸ್ತ್ರ-ಛಲದಿಂದ ಜಯಿಸುವ ಫಳಿಗೆ ಸನ್ನಿಹಿತವಾಯಿತೆಂದು ಭಾವಿಸಿದರು.

ಮಾಧವಾಚಾರ್ಯನು ಮತ್ತೆರಡು ಹಾಳೆಗಳನ್ನು ತೆಗೆದು, ಮಧ್ಯೆಯಿಟ್ಟು—

"**दशमेऽहनि किंचित्पुराणमाचक्षीत.**", ಎಂದು ವೇದವಾಕ್ಯವಿದೆ. ಇಲ್ಲಿ '**ಪುರಾಣ**' ಯಾವುದರ ವಿಶೇಷಣ?", ಎಂದು ಕೇಳಿದನು.

ದಯಾನಂದರು—"ಎಲ್ಲಿ? ಪೂರ್ಣ ಪ್ರಕರಣವನ್ನೇ ಓದಿ ಹೇಳಿರಿ", ಎಂದು ಹೇಳಿದರು.

ಓದಿ ಹೇಳಿದ್ದರೆ, ಅದರಲ್ಲಿಯೂ ತಮಗೆ ಪರಾಜಯವೇ ಗತಿ, ಎಂದು ವಿದ್ವಾಂಸರಿಗೆ ಗೊತ್ತಿತ್ತು. ಯಾರೂ ಓದಿ ಹೇಳುವ ಗೋಜಿಗೇ ಹೋಗಲಿಲ್ಲ!

ವಿಶುದ್ಧಾನಂದನು—"ನೀವೇ ಓದಿ ನೋಡಿ.", ಎಂದು ಆ ಹಾಳೆಗಳನ್ನು ದಯಾನಂದರ ಕೈಗಿತ್ತನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಯಾನಂದರು ಅದನ್ನು ಕೈಗೆ ತೆಗೆದುಕೊಂಡು, ಓದುತ್ತಿರುವಾಗಲೇ, ಪೂರ್ಣ ನಿಶ್ಚಯದಂತೆ, ಕಾಶೀನರೇಶನು—"ದಯಾನಂದರಿಗೆ ಪಂಡಿತರ ಪ್ರಶ್ನೆಗೆ ಉತ್ತರ ಹೇಳಲಾಗಲಿಲ್ಲ.", ಎನ್ನುತ್ತಾ ಕೈ ಚಪ್ಪಾಳೆ ತಟ್ಟಿದನು!

ಕೂಡಲೇ ಕಾಶೀಪಂಡಿತರೆಲ್ಲಾ ಜಗ್ಗನೆ ಮೇಲಕ್ಕೆದ್ದು ಬಿಟ್ಟರು.

"ಬೋಲೋ ಬಾಬಾ ವಿಶ್ವನಾಥ್ ಕೀ–ಜೈ!" "ಕಾಶೀಪಂಡಿತರಿಗೆ ಅದ್ಭುತ ವಿಜಯ!" "ದಯಾನಂದರಿಗೆ ಲಜ್ಜಾಸ್ಪದವಾದ ಪರಾಜಯ!", ಎಂದು ಕೆಲವು ಪುಂಡರು ಆರಚಲಾರಂಭಿಸಿದರು. ಬಿರುಗಾಳಿಯಿಂದ ಪ್ರಕ್ಷುಬ್ಧವಾದ ಸಾಗರದಂತೆ 50–60 ಸಾವಿರ ಜನರ ಆ ಸಭೆ ಕ್ಷುಬ್ಧವಾಯಿತು. ಅತಿಯಾದ ಕೋಲಾಹಲವೆದ್ದಿತು.

ದಯಾನಂದರು ವಿಶುದ್ಧಾನಂದನ ಕೈಹಿಡಿದು, ಜಗ್ಗುತ್ತಾ—"ಕುಳಿತು ಕೊಳ್ಳಿರಿ. ನಿಮ್ಮಂತಹ ವಿದ್ವಾಂಸರಿಗೆ ಸತ್ಯಾಸತ್ಯದ ನಿರ್ಣಯಮಾಡುವುದು ಕರ್ತವ್ಯವಾಗಿರುತ್ತದೆ. ಪುಂಡಾಟಿಕೆಗಿಳಿಯುವುದು ಪಂಡಿತರ ಘನತೆಗೆ ತಕ್ಕುದಲ್ಲ.", ಎಂದು ಎಷ್ಟೆಷ್ಟೋ ಹೇಳಿದರು.

ವಿಶುದ್ಧಾನಂದನು ಕೆಟ್ಟನಗೆ ' ನಗುತ್ತಾ—"ನೀನೇ ಸುಖವಾಗಿ ಕುಳಿತುಕೋ. ಆಗಬೇಕಾದುದು ಆಗಿಹೋಯಿತು! ನಮಗೆ ಹೊತ್ತಾಗುತ್ತದೆ. ನಾವಿನ್ನು ಹೊರಡುತ್ತೇವೆ.", ಎಂದು ಹೊರಟುಬಿಟ್ಟನು.

ಅಗ್ಗವಾಗಿ ಸಿಕ್ಕಿದ 'ಗೆಲು'ವಿಗಾಗಿ ಹಿಗ್ಗುತ್ತಾ ಈಶ್ವರೀ ನಾರಾಯಣ ಸಿಂಹನೂ, ಅವನ ವಿದ್ವಾಂಸರೂ ಆನಂದಬಾಗಿನಿಂದ ಹೊರಗಾದರು.

ಪಂಡಿತರು 'ಗೆದ್ದು'ದಾಯಿತು! ಪುಂಡರು 'ಗೆಲ್ಲ'ಬೇಕಾದುದು ಉಳಿದಿತ್ತು! ಅವರೂ ಹಿಂದೆ ಬೀಳಲಿಲ್ಲ. ಸಭೆಯಲ್ಲಿ ಪೋಲೀಸರೂ ಸಹ ವಶಕ್ಕೆ ತರಲಾಗದಂತಹ ಕೋಲಾಹಲವೆದ್ದಾಗ, ಆ ಮಹಾಕಾರ್ಯಕ್ಕಾಗಿಯೇ ಅಲ್ಲಿ ಸೇರಿದ್ದ ಪೋಕರಿಗಳು, ದಯಾನಂದರ ಕಡೆಗೆ ಗುರಿಯಿಟ್ಟು ಕಲ್ಲು, ಇಟ್ಟಿಗೆ ಚೂರು, ಚಪ್ಪಲಿ, ಸಗಣಿ, ಗೊಬ್ಬರ ಮೊದಲಾದುವನ್ನೆಲ್ಲಾ ಎಸೆದರು. ದಯಾನಂದರಿಗೆ ತಗಲಿ, ಎಷ್ಟೋ ಗಾಯಗಳಾಗಿ, ಮೈಯಿಂದ ಆಲ್ಲಲ್ಲಿ ರಕ್ತವೂ ಸುರಿಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಗಂಗಮ್ಮನನ್ನು, ವಿಶ್ವನಾಥಪ್ಪನನ್ನು ಬೈದುದರ ಫಲ ಈ ಬೈರಾಗಿಗೆ ಸಿಕ್ಕಿತು!", ಎಂದು ಅವರಲ್ಲನೇಕರು ತೃಪ್ತರಾದರು. ನೂರಾರು ಜನ ಧೂರ್ತರು ದಯಾನಂದರ ಕಡೆಗೆ ಉಗುಳುತ್ತಾ ಅತಿತುಚ್ಛವಾದ ಅಪಶಬ್ದ ಗಳಿಂದ ದಯಾನಂದರನ್ನು ಹಂಗಿಸಿದರು.

ಆದರೆ, ದಯಾನಂದರು ಭಗವದ್ಗೀತೆಯಲ್ಲಿ ವರ್ಣಿಸಿರುವಂತಹ ಸ್ಥಿತ ಪ್ರಜ್ಞನೇ ಆಗಿದ್ದರು. ಈ ಅನಿಷ್ಟ ಕೋಲಾಹಲವಾಗಲೀ, ಶಾಸ್ತ್ರಾರ್ಥ ಇದ್ದಕ್ಕಿದಂತೆ ಮುಗಿದುಹೋದುದರಿಂದಾಗಲೀ, ಅವರಿಗೆ ಸ್ವಲ್ಪವಾದರೂ ಚಿತ್ತಕ್ಷೋಭವುಂಟಾಗಲಿಲ್ಲ. ಯಾರನ್ನೂ ಹಂಗಿಸಲಿಲ್ಲ; ಯಾರನ್ನೂ ಭಂಗಿಸಲಿಲ್ಲ. ನಿಂದಿಸಿದವರನ್ನು ವಂದಿಸುತ್ತಾ, ಹೊಡೆದವರನ್ನು ಆಶೀರ್ವದಿಸುತ್ತಾ, ಶಾಪ ಹಾಕಿದವರ ಪಾಪಬುದ್ಧಿ ನಾಶವಾಗಲೆಂದು ಪ್ರಾರ್ಥಿಸುತ್ತಾ ಮಂದಹಾಸ ಯುಕ್ತರಾಗಿಯೇ ತಮ್ಮ ಆಸನದಲ್ಲಿ ಕುಳಿತಿದ್ದರು.

ಸಭೆ ಪೂರ್ಣವಾಗಿ ವಿಸರ್ಜಿತವಾದ ಮೇಲೆ, ಎಂದಿನಂತೆಯೇ ಸ್ನಾನ ಮಾಡಿದರು. ಸಂಧ್ಯಾವಂದನೆ ಮಾಡಿದರು. ಹಾಲು ಕುಡಿದರು. ಅನು ಯಾಯಿಗಳೊಂದಿಗೆ ವಿನೋದವಾಗಿ ಸಂಭಾಷಣೆ ಮಾಡುತ್ತಿದ್ದರು. ಏನೂ ನಡೆಯದೇ ಇದ್ದಲ್ಲಿ ಹೇಗಿರುತ್ತಿದ್ದರೋ, ಹಾಗೆಯೇ ಇದ್ದರು. ಮುಖದ ಮೇಲಿನ ಶಾಂತಿ, ಕಣ್ಣುಗಳಲ್ಲಿನ ಕಾಂತಿ, ತುಟಿಗಳ ಮೇಲಿನ ಮುಗುಳ್ನಗೆ, ಹೃದಯದಲ್ಲಿನ ಹುಮ್ಮಸ್ಸು, ಆತ್ಮನಲ್ಲಿದ್ದ ಆನಂದ, ಯಾವುದೂ ಎಳ್ಳಿನ ಕೋಟ್ಯಂಶದಷ್ಟೂ ಕಡಿಮೆಯಾಗಿರಲಿಲ್ಲ.

ದಯಾನಂದರ ವಿಷಯದಲ್ಲಿ ತಾವು ಮಾಡಿದ ಅಪಚಾರ ಸಾಲದೆಂದು, ಬಾಲಶಾಸ್ತ್ರೀ, ತಾರಾಚರಣ, ವಿಶುದ್ಧಾನಂದ ಮೊದಲಾದವರೆಲ್ಲಾ ಸಹಿ ಹಾಕಿ—.

'ದಯಾನಂದರು ಕಾಶೀ ವಿದ್ವಾಂಸರ ಪ್ರಶ್ನೆಗಳಿಗೆ ಉತ್ತರ ಕೊಡಲಾರದೇ ಹೋದ ಕಾರಣ, ಅವರ ಮತ ಅಸತ್ಯವೆಂದು ಸಿದ್ಧವೇ ಆಗಿದೆ. ಆದಕಾರಣ, ಇನ್ನು ಯಾರೂ ಅವರ ಮತಕ್ಕೆ ಸೇರಬಾರದು', ಎಂದು ಒಂದು ಪ್ರಕಟಣೆ ಯನ್ನು ಹೊರಡಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದಕ್ಕೆ ಉತ್ತರವಾಗಿ, ದಯಾನಂದರು—

"ನನ್ನ ಪ್ರಶ್ನೆಗಳಿಗೆ ಉತ್ತರವೀಯಲಾರದೇ, ಎರಡೆರಡು ನಿಮಿಷಕ್ಕೇ ಮೌನಧರಿಸಿ ಹಿಂಜರಿಯುತ್ತಿದ್ದ ಕಾಶೀಪಂಡಿತರ ವಾದವೈಖರಿಯನ್ನು 60 ಸಾವಿರ ನಾಗರಿಕರು ತಮ್ಮ ಕಣ್ಣಾರೆ ಕಂಡಿದ್ದಾರೆ. ಅವರ ಕೊನೆಯ ಪ್ರಶ್ನೆಗೆ ನಾನು ಉತ್ತರ ಕೊಡಲು ಸನ್ನದ್ಧನಾಗುತ್ತಿರುವಾಗಲೇ ಗಲಭೆಮಾಡಿ ಮೇಲಿದ್ದು, ವಿದ್ವಾಂಸರ ಉನ್ನತಮಟ್ಟದ ವ್ಯವಹಾರವಂತಿರಲೀ; ಸಾಧಾರಣ ಪಾಮರರು ತೋರಬಹುದಾದ ಸೌಜನ್ಯಕ್ಕೂ ಕೂಡ, ಸೊನ್ನೆ ಸುತ್ತಿದ್ದಾರೆ. ಕಾಶೀಪಂಡಿತರಿಂದ ನಾನು ಸೋತಿಲ್ಲವೆಂದು ನಾನು ಪ್ರತಿಜ್ಞಾಪೂರ್ವಕವಾಗಿ ಘೋಷಿಸುತ್ತೇನೆ. ಕಾಶೀನಗರಿಯ ಪಂಡಿತರಿಗೆ ಸಾಹಸವಿದ್ದರೆ, ಸತ್ಯಾಸತ್ಯನಿರ್ಣಯ ಮಾಡಬೇಕೆಂಬ ಅಭಿಪ್ರಾಯವೇನಾದರೂ ಹೃದಯದಲ್ಲಿದ್ದರೆ, ಮತ್ತೆ ನನ್ನೊಂದಿಗೆ ಶಾಸ್ತ್ರಾರ್ಥಕ್ಕೆ ಬರಬೇಕೆಂದು ಆಹ್ವಾನ ನೀಡುತ್ತೇನೆ. ಒಂದು ದಿನವಲ್ಲ; ಒಂದು ವರ್ಷ ಬೇಕಾದರೂ ಕಾಶಿಯಲ್ಲೇ ಇದ್ದು ಶಾಸ್ತ್ರಾರ್ಥ ಮಾಡಲು ಸಿದ್ಧನಾಗಿದ್ದೇನೆ.", ಎಂಬ ಘೋಷಣಾಪತ್ರವನ್ನು ಪ್ರಕಟಿಸಿ, ಪಂಡಿತರ ಪ್ರಕಟಣೆಯ ಪ್ರತಿಗಳನ್ನು ಅಂಟಿಸಿದ್ದ ಕಡೆಗಳಲ್ಲೆಲ್ಲಾ ಅಂಟು ಹಾಕಿಸಿದರು! ಕಾಶೀರಾಜನಿಗೂ, ಪಂಡಿತರುಗಳಿಗೂ ವ್ಯಕ್ತಿಗತವಾಗಿಯೂ ಕಾಗದಗಳನ್ನು ಬರೆದರು.

ಒಂದು ಸಾರಿ ಮಣ್ಣು ಮುಕ್ಕಿದುದೇ ಸಾಕಾಗಿತ್ತು ಆ ವಿದ್ವನ್ಮಂಡಲಿಗೆ! ಮತ್ತೆ ವಾದ ಮಾಡುವ ಯೋಚನೆಯನ್ನು ಅವರು ಮಾಡುವಂತಿರಲಿಲ್ಲ!*

*ಇದಾದ ಮೇಲೆ, ದಯಾನಂದರು ಆರು ಬಾರಿ ಕಾಶಿಗೆ ಭೇಟಿ ಇತ್ತು, ಮತ್ತೆ ಶಾಸ್ತ್ರಾರ್ಥಕ್ಕಾಗಿ ಪಂಡಿತರುಗಳನ್ನು ಆಹ್ವಾನಿಸಿದರು. ಮೌನವೇ ಕಾಶೀ ಪಂಡಿತರುಗಳ ಉತ್ತರವಾಗಿತ್ತು!—ಸಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹರಿದ್ವಾರದ ಕುಂಭಮೇಳದಲ್ಲಿ ಮಹಾಮಾರಿಯ ಕಾರಣ

"ಸಂತೆ-ಜಾತ್ರೆಗಳಲ್ಲಿ ಬಹಳ ಜನಸಂದಣಿ ಇರುತ್ತದೆ. ಆದುದರಿಂದ, ಅಲ್ಲಿ ಮಹಾಮಾರಿಯ ಪ್ರಕೋಪ ಉಂಟಾಗುತ್ತದೆ. ಇದಕ್ಕೆ ಭೌತಿಕ, ಹಾಗೂ ವೈಜ್ಞಾನಿಕ ಕಾರಣವೇನೆಂದರೆ—ಮನುಷ್ಯರ ಶರೀರದಿಂದ ವಿದ್ಯುತ್, ಎಂದರೆ, ಛಿದ್ರಗಳಿಂದ ಯಾವ ಉಷ್ಣತೆಯು ಹೊರಬೀಳುತ್ತಿರುತ್ತದೋ, ಅದು ಸ್ವಭಾವತಃ ಮೇಲಕ್ಕೆ ಏರುತ್ತಾ ಹೋಗುತ್ತದೆ. ಹೇಗೆ ಹೇಗೆ ಮಾನವ ಸಮುದಾಯ ಹೆಚ್ಚುತ್ತಾ ಹೋಗುತ್ತದೋ, ಹಾಗೆ ಹಾಗೆ ಆ ಉಷ್ಣವು ಹೆಚ್ಚುತ್ತಾ, ಮೇಲಕ್ಕೆ ಏರುತ್ತಿರುತ್ತದೆ. ರಾತ್ರಿಯಲ್ಲಿ ತಂಪಾದಾಗ ಆ ವಿದ್ಯುತ್ತು ಕೆಳಗೆ ಇಳಿಯುತ್ತದೆ.* ಮತ್ತು ಯಾವನಿಗೆ ತಗಲುವುದೋ, ಅವನ ಶರೀರದಲ್ಲಿ ಪ್ರವೇಶಮಾಡುತ್ತದೆ. ಅವನು ತತ್ಕಾಲ ಸತ್ತುಹೋಗುತ್ತಾನೆ; ಜೀವಿಸಲಾರನು".

—ಸ್ವಾಮೀ ದಯಾನಂದ ಸರಸ್ವತೀ

['ಮಹರ್ಷಿ ದಯಾನಂದ ಸರಸ್ವತೀ ಕಾ ಜೀವನಚರಿತ್ರ'
—ಪಂ. ಲೇಖಿರಾಮ್: ಪುಟ 661]

---

*ದಿ. 2-12-1984ರಂದು ಭೋಪಾಲಿನಲ್ಲಿ MIC ವಿಷಾನಿಲವು ನಳಿಕೆಯಿಂದ ಸೋರಿ, ಮೊದಲು ಆಕಾಶಕ್ಕೇರಿತು. ನಂತರ, ರಾತ್ರಿ 1-30 ಗಂಟೆಗ ಕೆಳಗಿಳಿದು ಮಲಗಿದ್ದ ಸಾವಿರಾರು ಜನರನ್ನು ಬಲಿತೆಗೆದುಕೊಂಡಿತು.—ಸಂ.

ooo

ವಿದ್ವಾಂಸರಿಂದಲೇ ವಿರೋಧಬೀಜವಪನ!

ವಿದ್ವಾಂಸರುಗಳ ವಿರೋಧದಿಂದ, ಅವಿದ್ವಾಂಸರಲ್ಲಿ ವಿರೋಧ ಹೆಚ್ಚಿ, ಅನೇಕ ವಿಧದ ದುಃಖಿಗಳ ವೃದ್ಧಿಯೂ ಮತ್ತು ಸುಖದ ಹಾನಿಯೂ ಆಗುತ್ತದೆ. ಯಾವುದು ಸ್ವಾರ್ಥೀ ಜನರಿಗೆ ಪ್ರಿಯವೋ, ಅಂತಹ ಹಾನಿಯು ಮಾನವರೆಲ್ಲರನ್ನೂ ದುಃಖ ಸಾಗರದಲ್ಲಿ ಮುಳುಗಿಸಿಬಿಟ್ಟಿದೆ.

[ಸತ್ಯಾರ್ಥಪ್ರಕಾಶ—ಭೂಮಿಕಾ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಸ್ತ್ರಾದಪಿ, ಶಾಸ್ತ್ರಾದಪಿ!

ಬರೌಲಿಯ ಶ್ರೀಮಂತನಾದ **ರಾವ್** ಕರ್ಣಸಿಂಹನು ಗಂಗಾಸ್ನಾನಕ್ಕೆಂದು ಬಂದಾಗ, ಸ್ವಾಮೀಜೀಯವರ ದರ್ಶನ ಮಾಡುವುದಕ್ಕಾಗಿ ಬಂದನು.

ಸ್ವಾಮೀಜೀಯವರು ಅವನನ್ನು ನೋಡಿ, ಸಂಸ್ಕೃತದಲ್ಲಿ —

"ನೀವು ಕ್ಷತ್ರಿಯರಾಗಿದ್ದೂ ಕೂಡ, ಚಾಂಡಾಲನಂತೆ ಮುಖಾಕೃತಿಯನ್ನು ಏಕೆ ಮಾಡಿಕೊಂಡಿದ್ದೀರಿ?", ಎಂದು ಕೇಳಿದರು.

ಕರ್ಣಸಿಂಹನು ಸಂಸ್ಕೃತವನ್ನು ತಿಳಿಯಲಾರನೆಂದು ಹೇಳಿದಾಗ, **ಪಂಡಿತ ಟೀಕಾರಾಮನು**—"ತಾವು ಕ್ಷತ್ರಿಯರಾಗಿದ್ದೂ ಕೂಡ, ಭಿಕಾರಿಗಳಂತೆ ನಾಮ-ತಿಲಕಗಳನ್ನು ಹಣೆಯ ಮೇಲೆ ಏಕೆ ಧರಿಸಿಕೊಂಡಿದ್ದೀರಿ, ಎಂದು ಸ್ವಾಮಿಗಳು ಕೇಳುತ್ತಾರೆ", ಎಂದು ಹಿಂದಿಯಲ್ಲಿ ತಿಳಿಸಿದನು.

ಅದನ್ನು ಕೇಳಿದ ಕರ್ಣಸಿಂಹನು ಕ್ರುದ್ಧನಾಗಿ, ಸ್ವಾಮಿಗಳನ್ನು ಬೈಯತೊಡಗಿದನು.

ಸ್ವಾಮೀಜೀಯವರು ಅದನ್ನು ಕೇಳಿ, ನಗುತ್ತಾ—

"ನೀವು ಶಸ್ತ್ರಾರ್ಥ ಮಾಡಲಿಚ್ಛಿಸುವಿರಾದರೆ, ಜಯಪುರ ಅಥವಾ ಧೌಲಪುರದ ರಾಜರೊಂದಿಗೆ ಯುದ್ಧ ಮಾಡಿ. ಶಾಸ್ತ್ರಾರ್ಥ ಮಾಡಲಿಚ್ಛಿಸುವಿರಾದರೆ, ನಿಮ್ಮ ಗುರುಗಳಾದ ರಂಗಾಚಾರ್ಯರನ್ನು ವೃಂದಾವನದಿಂದ ಕರೆಯಿಸಿ, ಶಾಸ್ತ್ರಾರ್ಥ ಮಾಡಿಸಿ", ಎಂದು ಹೇಳಿದರು.

['ಮಹರ್ಷಿ ದಯಾನಂದ ಸರಸ್ವತೀ ಕಾ ಜೀವನಚರಿತ್ರ'
—ಪಂ. ಲೇಖಿರಾಮ್: ಪುಟ 79]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಸಿದ್ಧಾಂತ ಕೌಮುದೀ'ಗೆ ಚಪ್ಪಲಿ ಏಟು!

ಭಟ್ಟೋಜೀ ದೀಕ್ಷಿತರು ಸಂಸ್ಕೃತದ ವ್ಯಾಕರಣ ಗ್ರಂಥವಾದ 'ಸಿದ್ಧಾಂತ ಕೌಮುದಿ'ಯ ರಚನಾಕಾರರಾಗಿದ್ದರು. ಅವರ ಹೆಸರಿನ ಮೇಲೆ ದಂಡೀ ವಿರಜಾನಂದರು ವಿದ್ಯಾರ್ಥಿಗಳ ಕೈಯಿನಿಂದ ಚಪ್ಪಲಿ ಏಟುಗಳನ್ನು ಹೊಡೆಯಿಸುತ್ತಿದ್ದರು. ಮತ್ತು ಎಲ್ಲಿಯ ತನಕ ವಿದಾರ್ಥಿಗಳ ಹೃದಯದಿಂದ ಆ ಗ್ರಂಥದ ಸಮ್ಮಾನವು ದೂರವಾಗುತ್ತಿರಲಿಲ್ಲವೋ, ಅಲ್ಲಿಯ ತನಕ 'ಅಷ್ಟಾಧ್ಯಾಯಿ'ಯ ಪ್ರಾರಂಭ ಮಾಡಿಸುತ್ತಿರಲಿಲ್ಲ. ಆವರ ಈ ವಿಷಯ ಜಗತ್ಪ್ರಸಿದ್ಧವಾಗಿತ್ತು. ಮತ್ತು ವಿಶೇಷರೂಪದಲ್ಲಿ ಈ ಮಾತು ಸಮಸ್ತ ವಿದ್ವಾಂಸರಿಗೂ ತಿಳಿದಿತ್ತು. ಸ್ವಾಮೀ ದಯಾನಂದರೂ ಕೂಡ, ಈ ಆಜ್ಞೆಯನ್ನು ಪಾಲಿಸಿದರು. ಆಗಲೇ, ದಂಡಿಯವರು ವಿದ್ಯೆಯನ್ನು ಹೇಳಿಕೊಡಲಾರಂಭಿಸಿದರು. ಸಮಸ್ತ ನಗರ* ದಲ್ಲೆಲ್ಲಾ ಜಂದಾಹಣವನ್ನೆತ್ತಿ 'ಮಹಾಭಾಷ್ಯ'ದ ಪುಸ್ತಕವನ್ನು ತರಿಸಲಾಯಿತು. ಇದಕ್ಕಾಗಿ 31 ರೂಪಾಯಿ ಖರ್ಚಾಯಿತು.

['ಮಹರ್ಷಿ ದಯಾನಂದ ಸರಸ್ವತೀ ಕಾ ಜೀವನಚರಿತ್ರ'
—ಪಂ. ಲೇಖರಾಮ್; ಪುಟ 45]

---

*ಮಥುರಾ

ವಿದೇಶೀಯರಿಂದಲೇ ಅನಾಚಾರದ ಆರಂಭ!

ಯಾವಾಗಿನಿಂದ ವಿದೇಶೀಯರಾದ ಮಾಂಸಾಹಾರಿಗಳು ಈ ದೇಶಕ್ಕೆ ಬಂದು, ಗೋವುಗಳೇ ಮೊದಲಾದ ಪಶುಗಳನ್ನು ಕೊಲ್ಲುವವರೂ, ಮದ್ಯಪಾನ ಮಾಡುವವರೂ ಆದ ರಾಜ್ಯಾಧಿಕಾರಿಗಳಾದರೋ, ಆಗಿನಿಂದಲೇ ಕ್ರಮಶಃ ಆರ್ಯರ ದುಃಖದ ವೃದ್ಧಿಯಾಗುತ್ತಾ ಬಂದಿದೆ.

[ಸತ್ಯಾರ್ಥಪ್ರಕಾಶ; ದಶಮ ಸಮುಲ್ಲಾಸ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥ ಕಾಶೀ-ಶಾಸ್ತ್ರಾರ್ಥಃ

ಧರ್ಮಾಧರ್ಮಯೋರ್ಮಧ್ಯೇ ಶಾಸ್ತ್ರಾರ್ಥವಿಚಾರೋ ವಿದಿತೋ ಭವತು!

ಏಕೋ ದಿಗಂಬರಸ್ಸತ್ಯಶಾಸ್ತ್ರಾರ್ಥವಿದ್ ದಯಾನಂದಸರಸ್ವತೀ ಸ್ವಾಮೀ ಗಂಗಾತಟೇ ವಿಹರತಿ. ಸ ಋಗ್ವೇದಾದಿ ಸತ್ಯಶಾಸ್ತ್ರೇಭ್ಯೋ ನಿಶ್ಚಯಂ ಕೃತ್ವೈವಂ ವದತಿ—

"ವೇದೇಷು ಪಾಷಾಣಾದಿಮೂರ್ತಿಪೂಜನವಿಧಾನಂ ಶೈವಶಾಕ್ತಗಾಣಪತ-ವೈಷ್ಣವಾದಿಸಂಪ್ರದಾಯಾ ರುದ್ರಾಕ್ಷತ್ರಿಪುಂಡ್ರಾದಿಧಾರಣಂ ಚ ನಾಸ್ತ್ಯೇವ! ತಸ್ಮಾದೇತತ್ ಸರ್ವಂ ಮಿಥ್ಯೈವಾಸ್ತಿ, ನಾಚರಣೀಯಂ ಕದಾಚಿತ್! ಕುತಃ? ಏತತ್ ವೇದವಿರುದ್ಧಾಪ್ರಸಿದ್ಧಾಚರಣೇ ಮಹತ್ಪಾಪಂ ಭವತೀತೀಯಂ ವೇದಾದಿಷು ಮರ್ಯಾದಾ ಲಿಖಿತಾಸ್ತಿ".

ಧರ್ಮ ಮತ್ತು ಅಧರ್ಮಗಳ ನಡುವೆ ನಡೆದ ಶಾಸ್ತ್ರಾರ್ಥದ ವಿಚಾರವು ತಿಳಿಯಲ್ಪಡಲಿ!

ಸ್ವಾಮೀ ದಯಾನಂದ ಸರಸ್ವತೀ, ಎಂಬ ಹೆಸರಿನ ದಿಗಂಬರ ಸಂನ್ಯಾಸಿಯೊಬ್ಬರು ಗಂಗಾತಟದಲ್ಲಿ ವಿಹರಿಸುತ್ತಿದ್ದರು. ಅವರು ಸತ್ಪುರುಷರೂ, ಸತ್ಯಶಾಸ್ತ್ರಗಳಲ್ಲಿ ಪರಿಣತರೂ ಆಗಿದ್ದರು. ಋಗ್ವೇದಾದಿ [ಶಾಸ್ತ್ರಗಳನ್ನು] ಸಂಪೂರ್ಣವಾಗಿ ಅಭ್ಯಸಿಸಿದ್ದರು. ಅವರು ಈ ರೀತಿ ಸತ್ಯಶಾಸ್ತ್ರಗಳನ್ನು ಪರಾಮರ್ಶಿಸಿ, ನಿಶ್ಚಯಪೂರ್ವಕವಾಗಿ ಹೀಗೆ ಹೇಳುತ್ತಾರೆ.—

"ಪಾಷಾಣಾದಿ ಮೂರ್ತಿಪೂಜೆ, ಶೈವ, ಶಾಕ್ತ, ಗಾಣಪತ, ಹಾಗೂ ವೈಷ್ಣವಾದಿ ಸಂಪ್ರದಾಯಗಳು ಮತ್ತು ರುದ್ರಾಕ್ಷ, ತುಳಸೀ, ಮಾಲೆ, ತ್ರಿಪುಂಡ್ರಾದಿ ಧಾರಣೆಗಳ ವಿಧಾನವು ವೇದಗಳಲ್ಲೆಲ್ಲಿಯೂ ಇಲ್ಲವೇ ಇಲ್ಲ! ಆದುದರಿಂದ, ಇವೆಲ್ಲವೂ ಮಿಥ್ಯೆ, ಎಂದೇ ವಿದಿತವಾಗುತ್ತದೆ. ಇವುಗಳನ್ನು ಎಂದಿಗೂ ಆಚರಿಸಬಾರದು! ಏಕೆಂದರೆ, ವೇದವಿರುದ್ಧ, ಹಾಗೂ ವೇದಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಚಲಿತವಿಲ್ಲದವುಗಳ ಆಚರಣೆಯಿಂದ ಮಹಾಪಾಪವಾಗುತ್ತದೆ! ಈ ರೀತಿಯ ಮರ್ಯಾದೆಯು* ವೇದಾದಿಗಳಲ್ಲಿ ಬರೆಯಲಾಗಿದೆ".

ಏವಂ ಹರಿದ್ವಾರಮಾರಭ್ಯ ಗಂಗಾತಟೇ ಅನ್ಯತ್ರಾಪಿ ಯತ್ರ ಕುತ್ರಚಿದ್ ದಯಾನಂದಸರಸ್ವತೀಸ್ವಾಮೀ ಖಂಡನಂ ಕುರ್ವನ್ ಸನ್, ಕಾಶೀಮಾಗತ್ಯ ದುರ್ಗಾಕುಂಡಸಮೀಪ ಆನಂದಾರಾಮೇ ಯದಾ ಸ್ಥಿತಿಂ ಕೃತವಾನ್, ತದಾ ಕಾಶೀನಗರೇ ಮಹಾನ್ ಕೋಲಾಹಲೋ ಜಾತಃ. ಬಹುಭಿಃ ಪಂಡಿತೈರ್ವೇದಾದಿಪುಸ್ತಕಾನಾಂ ಮಧ್ಯೇ ವಿಚಾರಃ ಕೃತಃ. ಪರಂತು ಕ್ವಾಪಿ ಪಾಷಾಣಾದಿಮೂರ್ತಿಪೂಜನಾದಿ ವಿಧಾನಂ ನ ಲಬ್ಧಮ್.

ಈ ಕಾರಣದಿಂದ, ಈ ಸ್ವಾಮೀಜೀಯವರು ಹರಿದ್ವಾರದಿಂದ ಪ್ರಾರಂಭಿಸಿ, ಗಂಗಾತೀರದಲ್ಲಿ ಎಲ್ಲೆಡೆಯೂ ಇದರ ಖಂಡನೆಯನ್ನು ಮಾಡುತ್ತಾ, ಕಾಶಿಗೆ ಬಂದು, ದುರ್ಗಾಕುಂಡದ ಸಮೀಪದ ಆನಂದೋದ್ಯಾನದಲ್ಲಿ ತಂಗಿದರು.

ಅವರು ಬಂದ ಸಂಗತಿಯು ಎಲ್ಲೆಡೆಯೂ ಪೊಳಗಿತು! ಬಹಳ ಮಂದಿ ಪಂಡಿತರು ವೇದಗಳಲ್ಲಿನ ವಿಷಯಗಳ ಬಗ್ಗೆ ವಿಚಾರ ಮಾಡತೊಡಗಿದರು. ಆದರೆ, ಪಾಷಾಣಾದಿ ಮೂರ್ತಿಪೂಜೆಯ ವಿಧಾನವು ಯಾರಿಗೂ ಎಲ್ಲಿಯೂ† ದೊರಕಲಿಲ್ಲ.

ಪ್ರಾಯೇಣ ಬಹೂನಾಂ ಪಾಷಾಣಪೂಜನಾದಿಷ್ವಾಗ್ರಹೋ ಮಹಾನ್ ಅಸ್ತಿ. ಅತಃ ಕಾಶೀರಾಜಮಹಾರಾಜೇನ ಬಹೂನ್ ಪಂಡಿತಾನ್ ಆಹೂಯ ಪೃಷ್ಟಂ—"ಕಿಂ ಕರ್ತವ್ಯಮ್?", ಇತಿ.

ತದಾ ಸರ್ವೈರ್ಜನೈರ್ನಿಶ್ಚಯಃ ಕೃತಃ—

---

*ಮರ್ಯಾದೆ, ಎಂಬುದರ ರೂಢ ಅರ್ಥ ಗೌರವ, ಎಂದು ಕನ್ನಡದಲ್ಲಿದೆ. ಆದರೆ, ಇಲ್ಲಿ, ಸೀಮೆ, ವಿಧಿ–ನಿಷೇಧ, ಎಂದರ್ಥ.—ಸಂ.

†ಎಂದರೆ, ಯಾವ ವೇದದಲ್ಲಿಯೂ—ಅನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಯೇನ ಕೇನ ಪ್ರಕಾರೇಣ ದಯಾನಂದಸ್ವಾಮಿನಾ ಸಹ ಶಾಸ್ತ್ರಾರ್ಥಂ ಕೃತ್ವಾ ಬಹುಕಾಲಾತ್ ಪ್ರವೃತ್ತಸ್ಯಾಚಾರಸ್ಯ ಸ್ಥಾಪನಂ ಯಥಾ ಭವೇತ್ ತಥಾ ಕರ್ತವ್ಯಮೇವ', ಇತಿ.

ಬಹುತೇಕವಾಗಿ, ಬಹಳ ಜನರ ಆಗ್ರಹವು ಇದರ* ಪೂಜೆಯ ಕಡೆಗೆ ಇದೆ. ಆದುದರಿಂದ, ಕಾಶೀರಾಜರಾದ ಮಹಾರಾಜರು ಬಹಳ ಮಂದಿ ಪಂಡಿತರುಗಳನ್ನು ಕರೆಸಿ—"ಈ ವಿಷಯದ ಬಗ್ಗೆ ಏನು ಮಾಡಬೇಕು?", ಎಂದು ಕೇಳಿದರು.

ಆಗ, ಅವರೆಲ್ಲರೂ ಒಂದು ನಿಶ್ಚಯಕ್ಕೆ ಬಂದು—"ಯಾವ ರೀತಿಯಿಂದಲಾದರೂ ಸರಿ, ದಯಾನಂದ ಸರಸ್ವತೀ ಸ್ವಾಮಿಯವರೊಡನೆ ಶಾಸ್ತ್ರಾರ್ಥ ನಡೆಸಿ, ಬಹಳ ಕಾಲದಿಂದಲೂ ನಡೆದುಕೊಂಡು ಬಂದಿರುವ ಆಚಾರವನ್ನು † ಭದ್ರಗೊಳಿಸುವುದು ಹೇಗೆ ಸಾಧ್ಯವೋ, ಹಾಗೆ ಮಾಡಬೇಕು", ಎಂದು ತಿಳಿಸಿದರು.

ಪುನಃ ಕಾರ್ತ್ತಿಕಶುಕ್ಲದ್ವಾದಶ್ಯಾಮೇಕೋನವಿಂಶತಿಶತಷಡ್ವಿಂಶತಿತಮೇ ಸಂವತ್ಸರೇ (1926) ಮಂಗಲವಾಸರೇ ಮಹಾರಾಜಃ ಕಾಶೀನರೇಶೋ ಬಹುಭಿಃ ಪಂಡಿತೈಃ ಸಹ ಶಾಸ್ತ್ರಾರ್ಥಕರಣಾರ್ಥಮಾನಂದಾರಾಮಂ, ಯತ್ರ ದಯಾನಂದ-ಸ್ವಾಮಿನಾ ನಿವಾಸಃ ಕೃತಃ, ತತ್ರಾಗತಃ.

ಹೀಗಾಗಿ, 1926ನೇ ಸಂವತ್ಸರದ ಕಾರ್ತಿಕ ಶುದ್ಧ ದ್ವಾದಶೀ ಮಂಗಳವಾರದಂದು‡ ಮಹಾರಾಜಾ ಕಾಶೀನರೇಶರು ಬಹಳ ಮಂದಿ ಪಂಡಿತರುಗಳನ್ನು ಜೊತೆಗಿಟ್ಟುಕೊಂಡು, ದಯಾನಂದ ಸರಸ್ವತಿಗಳೊಡನೆ ಶಾಸ್ತ್ರಾರ್ಥ ನಡೆಸುವ ಸಲುವಾಗಿ, ಎಲ್ಲಿ ದಯಾನಂದ ಸ್ವಾಮಿಯವರು ತಂಗಿದ್ದರೋ, ಆ ಆನಂದೋದ್ಯಾನಕ್ಕೆ ಬಂದರು.

---

*ಎಂದರೆ, ಪಾಷಾಣದ—ಆನು.

†ಎಂದರೆ, ಮೂರ್ತಿಪೂಜೆಯನ್ನು.—ಸಂ.

‡16 ನೆಯ ನವೆಂಬರ್ 1869; ಅಥವಾ ಶಾಲಿವಾಹನ ಶಕ 1791.—ಸಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ದಯಾನಂದಸ್ವಾಮಿನಾ ಮಹಾರಾಜಂ ಪ್ರತ್ಯುಕ್ತವಮ್—"**ವೇದಾನಾಂ ಪುಸ್ತಕಾನ್ಯಾನೀತಾನಿ ನ ವಾ?**", **ಇತಿ.**

ಆಗ, **ದಯಾನಂದ ಸ್ವಾಮೀಜೀಯವರು** ಮಹಾರಾಜರನ್ನು—"ತಾವು ವೇದಗಳ ಪುಸ್ತಕಗಳನ್ನು ತಂದಿದ್ದೀರೋ, ಅಥವಾ ಇಲ್ಲವೋ", ಎಂದು ಕೇಳಿದರು.

ತದಾ ಮಹಾರಾಜೇನೋಕ್ತಮ್—"**ವೇದಾಃ ಪಂಡಿತಾನಾಂ ಕಂಠಸ್ಥಾಃ ಸಂತಿ. ಕಿಂ ಪ್ರಯೋಜನಂ ಪುಸ್ತಕಾನಾಮ್?**", **ಇತಿ.**

ಆಗ, **ಮಹಾರಾಜರು**—"ವೇದಗಳು ಸಂಪೂರ್ಣವಾಗಿ ಪಂಡಿತರುಗಳಿಗೆ ಕಂಠಸ್ಥವಾಗಿವೆ! ಪುಸ್ತಕಗಳಿಂದ ಪ್ರಯೋಜನವೇನು?", ಎಂದು ಹೇಳಿದರು.

ತದಾ ದಯಾನಂದಸ್ವಾಮಿನೋಕ್ತಮ್—"**ಪುಸ್ತಕೈರ್ವಿನಾ ಪೂರ್ವಾಪರಪ್ರಕರಣಸ್ಯ ಯಥಾವದ್ ವಿಚಾರಸ್ತು ನ ಭವತಿ**".

"**ಅಸ್ತು ತಾವತ್ ಪುಸ್ತಕಾನಿ ನಾನೀತಾನಿ**", **ಇತಿ.**

ಆಗ, **ದಯಾನಂದ ಸ್ವಾಮೀಜೀಯವರು**—"ಪುಸ್ತಕಗಳ ಹೊರತು, ಪೂರ್ವಾಪರ ಪ್ರಕರಣಗಳ ವಿಚಾರವು ಸರಿ-ಸರಿಯಾಗಿ ಮಾಡಲಾಗುವುದಿಲ್ಲ. ಆಗಲಿ! ಪುಸ್ತಕ ತರದಿದ್ದರೂ ಚಿಂತೆಯಿಲ್ಲ.

*["ಆದರೆ, ಯಾವ ವಿಷಯದ ಬಗ್ಗೆ ವಿಚಾರ ಮಾಡಲಾಗುವುದು?", ಎಂದು ಕೇಳಿದರು.

ಪಂಡಿತರುಗಳು—"ನೀವು ಮೂರ್ತಿಪೂಜೆಯ ಖಂಡನೆ ಮಾಡುತ್ತೀರಿ! ನಾವು ಅದರ ಮಂಡನೆ ಮಾಡುತ್ತೇವೆ!", ಎಂದು ಹೇಳಿದರು.

ಆಗ, **ಸ್ವಾಮೀಜೀಯವರು** — "ನಿಮ್ಮಲ್ಲಿ ಯಾರು ಮುಖ್ಯಸ್ಥರಿದ್ದಾರೋ. ಆ ಪಂಡಿತರೊಬ್ಬರು ನನ್ನೊಡನೆ ವಾದ ಮಾಡಲಿ", ಎಂದು ಹೇಳಿದರು.]*

---

*ಕೋಷ್ಟಾಂತರ್ಗತ ಪಾಠವು ಸಂಸ್ಕೃತಭಾಗದಲ್ಲಿಲ್ಲ.—ಯು.ಮೀ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ಪಂಡಿತರಘುನಾಥಪ್ರಸಾದಕೋಟಪಾಲೇನ ನಿಯಮಃ ಕೃತಃ— 'ದಯಾನಂದಸ್ವಾಮಿನಾ ಸಹೈಕೈಕಃ ಪಂಡಿತೋ ವದತು; ನ ತು ಯುಗಪತ್', ಇತಿ.

ಆಗ, ಪಂಡಿತ ರಘುನಾಥ ಪ್ರಸಾದ ಕೋಟಪಾಲರು—'ಪಂಡಿತರು ಒಬ್ಬೊಬ್ಬರಾಗಿ ಸ್ವಾಮೀಜೀಯವರೊಡನೆ ವಿಚಾರ ಮಾಡಬೇಕು', ಎಂಬ ನಿಯಮವನ್ನು ಸೂಚಿಸಿದರು.

ತದಾದೌ ತಾರಾಚರಣನ್ಯೈಯಾಯಿಕೋ ವಿಚಾರಾರ್ಥಮುದ್ಯತಃ.

ಆಗ, ಎಲ್ಲರಿಗಿಂತ ಮೊದಲು, ತಾರಾಚರಣ ನೈಯಾಯಿಕರು ಸ್ವಾಮೀಜೀಯವರೊಡನೆ ವಿಚಾರ ಮಾಡುವ ಸಲುವಾಗಿ ಅವರ ಸಮ್ಮುಖದಲ್ಲಿ ಉಪಸ್ಥಿತರಾದರು.

ತಂ ಪ್ರತಿ ಸ್ವಾಮಿದಯಾನಂದೇನೋಕ್ತಮ್ — "ಯುಷ್ಮಾಕಂ ವೇದಾನಾಂ ಪ್ರಾಮಾಣ್ಯಂ ಸ್ವೀಕೃತಮಸ್ತಿ ನ ವಾ?", ಇತಿ.

ಸ್ವಾಮೀಜೀಯವರು ಅವರನ್ನು—"ತಾವು ವೇದಗಳ ಪ್ರಮಾಣವನ್ನು ಒಪ್ಪುತ್ತೀರೋ, ಅಥವಾ ಇಲ್ಲವೋ?", ಎಂದು ಕೇಳಿದರು.

ತದಾ ತಾರಾಚರಣೇನೋಕ್ತಮ್—"ಸರ್ವೇಷಾಂ ವರ್ಣಾಶ್ರಮಸ್ಥಾನಾಂ ವೇದೇಷು ಪ್ರಾಮಾಣ್ಯಸ್ವೀಕಾರೋಽಸ್ತಿ", ಇತಿ.

ಆಗ, ತಾರಾಚರಣರು—"ಯಾರು ವರ್ಣಾಶ್ರಮಗಳಲ್ಲಿ ಸ್ಥಿತರಾಗಿದ್ದಾರೋ, ಅವರೆಲ್ಲರಿಗೂ ವೇದಗಳೇ ಪ್ರಮಾಣ", ಎಂದು ಉತ್ತರ ಕೊಟ್ಟರು*.

ತದಾ ದಯಾನಂದಸ್ವಾಮಿನೋಕ್ತಮ್—"ವೇದೇ ಪಾಷಾಣಾದಿಮೂರ್ತಿಪೂಜನಸ್ಯ ಯತ್ರ ಪ್ರಮಾಣಂ ಭವೇತ್. ತದ್ ದರ್ಶನೀಯಮ್. ನಾಸ್ತಿ ಚೇದ್, ವದ ನಾಸ್ತಿ", ಇತಿ.

---

*ಸ್ವಾಮೀಜೀಯವರೂ ಕೂಡ, ವರ್ಣಾಶ್ರಮಸ್ಥರಾಗಿರುವುದರಿಂದ, ವೇದಗಳಿಗೆ ಮಾನ್ಯತೆ ನೀಡುತ್ತಾರೆಂದು, ಇದರಿಂದ ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗ, **ದಯಾನಂದ ಸ್ವಾಮೀಜೀಯವರು**—"ವೇದಗಳಲ್ಲೆಲ್ಲಿಯಾದರೂ ಪಾಷಾಣಾದಿ ಮೂರ್ತಿಗಳನ್ನು ಪೂಜಿಸುವ ಬಗ್ಗೆ ಪ್ರಮಾಣ ಇದೆಯೋ, ಅಥವಾ ಇಲ್ಲವೋ? ಹಾಗೇನಾದರೂ ಇದ್ದಲ್ಲಿ, ಅದನ್ನು ತೋರಿಸಿರಿ! ಇಲ್ಲದಿದ್ದಲ್ಲಿ, 'ಇಲ್ಲ', ಎಂದಾದರೂ ತಿಳಿಸಿರಿ!", ಎಂದು ಹೇಳಿದರು.

ತದಾ ತಾರಾಚರಣಭಟ್ಟಾಚಾರ್ಯೋಣೋಕ್ತಮ್ — "ವೇದೇಷು ಪ್ರಮಾಣಮಸ್ತಿ ವಾ ನಾಸ್ತಿ! ಪರಂತು ವೇದಾನಾಮೇವ ಪ್ರಾಮಾಣ್ಯಂ; ನಾನ್ಯೇಷಾಮಿತಿ ಯೋ ಬ್ರೂಯಾತ್, ತಂ ಪ್ರತಿ ಕಿಂ ವದೇತ್?"*

ಆಗ, **ಪಂಡಿತ ತಾರಾಚರಣಭಟ್ಟಾಚಾರ್ಯರು** — "ವೇದಗಳಲ್ಲಿ ಪ್ರಮಾಣ ಇದೆಯೋ ಅಥವಾ ಇಲ್ಲವೋ, [ಅದು ಹಾಗಿರಲಿ!] ಆದರೆ, ಯಾವನು ಕೇವಲ ವೇದಗಳ ಪ್ರಮಾಣವನ್ನು ಮಾತ್ರ ಅಂಗೀಕರಿಸುತ್ತಾನೋ, ಬೇರೆ ಯಾವುದನ್ನೂ ಅಂಗೀಕರಿಸುವುದಿಲ್ಲವೋ, ಅವನ ಬಗ್ಗೆ ಏನು ಹೇಳ ಬೇಕು?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಅನ್ಯೋ ವಿಚಾರಸ್ತು ಪಶ್ಚಾದ್ ಭವಿಷ್ಯತಿ. ವೇದವಿಚಾರ ಏವ ಮುಖ್ಯೋಽಸ್ತಿ. ತಸ್ಮಾತ್ ಸ ಏವಾದೌ ಕರ್ತವ್ಯಃ. ಕುತೋ, ವೇದೋಕ್ತಕರ್ಮೈವ ಮುಖ್ಯಮಸ್ತ್ಯತಃ.

"ಮನುಸ್ಮೃತ್ಯಾದೀನ್ಯಪಿ ವೇದಮೂಲಾನಿ ಸಂತಿ. ತಸ್ಮಾತ್ತೇಷಾಮಪಿ ಪ್ರಾಮಾಣ್ಯಮಸ್ತಿ; ನ ತು ವೇದವಿರುದ್ಧಾನಾಂ ವೇದಾಪ್ರಸಿದ್ಧಾನಾಂ ಚ", ಇತಿ.

ಅದರ ಮೇಲೆ, **ಸ್ವಾಮೀಜೀಯವರು**—"ಬೇರೆಯವುಗಳ ಬಗ್ಗೆ ವಿಚಾರವು ಆಮೇಲೆ ಆಗುವುದು. ವೇದಗಳ ವಿಚಾರವೇ ಮುಖ್ಯವಾಗಿದೆ. ಈ ಕಾರಣದಿಂದ, ಇದರ ವಿಚಾರವನ್ನೇ ಮೊದಲು ಮಾಡಬೇಕು. ಏಕೆಂದರೆ, ವೇದೋಕ್ತಕರ್ಮವೇ ಮುಖ್ಯವಾದದ್ದು.

---

*'ವದೇಯಮ್', ಎಂದಿದ್ದರೆ, ಉಚಿತವಾಗಿರುತ್ತಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಮತ್ತು ಮನುಸ್ಮೃತಿ ಮೊದಲಾದುವೂ ಕೂಡ, ವೇದಮೂಲಕಗಳಾಗಿವೆ. ಆದ್ದರಿಂದ, ಇವುಗಳ ಪ್ರಮಾಣವೂ ಕೂಡ, ಇದೆ. ಏಕೆಂದರೆ, ಯಾವ ಯಾವುವು ವೇದವಿರುದ್ಧವಾಗಿವೆಯೋ, ಮತ್ತು ವೇದಗಳಲ್ಲಿ ಪ್ರಚಲಿತ ವಿಲ್ಲವೋ, ಅವುಗಳ ಪ್ರಮಾಣವನ್ನು ತೆಗೆದುಕೊಳ್ಳಲಾಗುವುದಿಲ್ಲ", ಎಂದು ಹೇಳಿದರು.

ತದಾ ತಾರಾಚರಣಭಟ್ಟಾಚಾರ್ಯೋಽಕೋಕ್ತಮ್—"ಮನುಸ್ಮೃತೇಃ ಕ್ವಾಸ್ತಿ ವೇದಮೂಲಮ್?", ಇತಿ.

ಆದಕ್ಕೆ, ಪಂಡಿತ **ತಾರಾಚರಣಭಟ್ಟಾಚಾರ್ಯರು**—"ಮನುಸ್ಮೃತಿಯು ಮೂಲವು ವೇದಗಳಲ್ಲೆಲ್ಲಿದೆ?", ಎಂದು ಕೇಳಿದರು.

ಸ್ವಾಮಿನೋಕ್ತಮ್—
"'ಯದ್ವೈ ಕಿಂಚನ ಮನುರವದತ್ತದ್ ಭೇಷಜಂ ಭೇಷಜತಾಯೈ'*,
ಇತಿ ಸಾಮವೇದೇ".†

ಇದರ ಮೇಲೆ, **ಸ್ವಾಮೀಜೀಯವರು**—"ಮನು ಆವರು. ಏನೇನು ಹೇಳಿದ್ದಾರೋ, ಅವೆಲ್ಲವೂ ಔಷಧಿಗಳಿಗೂ ಔಷಧಿಗಳಾಗಿವೆ, ಎಂಬುದಾಗಿ ಸಾಮವೇದದ ಬ್ರಾಹ್ಮಣದಲ್ಲಿ ಹೇಳಲಾಗಿದೆ, ಎಂದು ಹೇಳಿದರು.

---

*ತಾಂಡ್ಯ ಬ್ರಾಹ್ಮಣ–(23-16-7) ಇಲ್ಲಿ ಪ್ರಕರಣಾನುಸಾರವಾಗಿ ವೈವಸ್ವತ ಮನುವಿನ ನಿರ್ದೇಶವಿದೆ. ಸ್ವಾಯಂಭುವ ಮನುವಿನದಲ್ಲ. ಏಕೆಂದರೆ, ಇವನು ಮನುಸ್ಮೃತಿಯ ಪ್ರವಚನವನ್ನು ಮಾಡಿದನು.—ತೈತ್ತಿರೀಯ ಸಂಹಿತಾ (2-2-10) ಮೈತ್ರಾಯಣೀಯ ಸಂಹಿತಾ (2-1-6) ಮತ್ತು ಕಾಠಕ ಸಂಹಿತಾ (11–15)ರ ಜೊತೆ ತುಲನೆ ಮಾಡಿ.—ಯು.ವೀ.

†ಇದು ಪಂಡಿತರುಗಳ ಮತವನ್ನಂಗೀಕರಿಸಿದಂತೆಯೇ ಹೇಳಲಾಗಿದೆ. ಸ್ವಾಮೀ ದಯಾನಂದರ ಮತವಲ್ಲ, ಎಂದು ತಿಳಿಯಬೇಕು. ಮುಂದೆಯೂ ಹೀಗೆಯೇ ಇದೆ!

ಏಕೆಂದರೆ, ಸ್ವಾಮೀಜೀಯವರಂತೂ ಬ್ರಾಹ್ಮಣ ಗ್ರಂಥಗಳನ್ನು ವೇದಗಳೆಂದು ಅಂಗೀಕರಿಸುವುದಿಲ್ಲ. ಆದರೆ, ಮಂತ್ರಭಾಗವನ್ನು ಮಾತ್ರ ವೇದವೆಂದು ಅಂಗೀಕರಿಸುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ವಿಶುದ್ಧಾನಂದಸ್ವಾಮಿನೋಕ್ತವಮ್—
'ರಚನಾನುಪಪತ್ತೇಶ್ಚ ನಾನುಮಾನಮ್',*
ಇತ್ಯಸ್ಯ ವ್ಯಾಸಸೂತ್ರಸ್ಯ ಕಿಂ ಮೂಲಮಸ್ತಿ?", ಇತಿ.

ಆಗ, **ವಿಶುದ್ಧಾನಂದಸ್ವಾಮಿಗಳು**—"ರಚನೆಯ ಉತ್ಪತ್ತಿಯ ಬಗ್ಗೆ ಸೂಕ್ತ ಪುರಾವೆ ದೊರೆಯದಿರುವ ಕಾರಣದಿಂದ, ಅನುಮಾನದಿಂದ ಪ್ರತಿಪಾದ್ಯವಾದ ಪ್ರಮಾಣವು ಪ್ರಧಾನವಾಗಿರುತ್ತದೆ, ಜಗತ್ತಿನ ಕಾರಣವಲ್ಲ; ಎಂಬ ವ್ಯಾಸಸೂತ್ರಕ್ಕೆ ವೇದಗಳಲ್ಲಿ ಮೂಲವಾವುದು?", ಎಂದು ಕೇಳಿದರು.

ತದಾ ಸ್ವಾಮಿನೋಕ್ತವಮ್—"ಅಸ್ಯ ಪ್ರಕರಣಸ್ಯೋಪರಿ ವಿಚಾರೋ ನ ಕರ್ತವ್ಯಃ", ಇತಿ.

ಆದಕ್ಕೆ, **ಸ್ವಾಮೀಜೀಯವರು**—"ಇದು ಈ ಪ್ರಕರಣಕ್ಕೆ ಸಂಬಂಧಿಸದೇ ಬೇರೆಯ ವಿಷಯವಾಗಿದೆ. [ಆದುದರಿಂದ,] ಈ ಬಗ್ಗೆ ವಿಚಾರ ಮಾಡಲಾಗದು.", ಎಂದು ಹೇಳಿದರು.

ಪುನರ್ವಿಶುದ್ಧಾನಂದಸ್ವಾಮಿನೋಕ್ತವಮ್ — "ವದೈವ ತ್ವಂ ಯದಿ ಜಾನಾಸಿ", ಇತಿ.

ಪುನಃ, **ವಿಶುದ್ಧಾನಂದಸ್ವಾಮಿಗಳು**—"ಒಂದು ವೇಳೆ, ನಿಮಗೆ ತಿಳಿದಿದ್ದ ಪಕ್ಷದಲ್ಲಿ, ಅವಶ್ಯವಾಗಿ ತಿಳಿಸಿ", ಎಂದು ಹೇಳಿದರು.

ತದಾ ದಯಾನಂದಸ್ವಾಮಿನಾ ಪ್ರಕರಣಾಂತರೇ ಗಮನಂ ಭವಿಷ್ಯತೀತಿ ಮತ್ವಾ ನೇದಮುಕ್ತವಮ್.

ಆಗ, **ದಯಾನಂದ ಸ್ವಾಮೀಜೀಯವರು**, ಪ್ರಕರಣಾಂತರದಲ್ಲಿ ಸಂವಾದವು ಜಾರಿಹೋದೀತು, ಎಂದು ತಿಳಿದು, ಅದನ್ನು ಹೇಳಲಿಲ್ಲ.

---

*ವೇದಾಂತದರ್ಶನ. (2-2-1)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[ಪುನಃ ಸ್ವಾಮಿನೋಕ್ತಮ್] — "ಕದಾಚಿತ್ ಕಂಠಸ್ಥಂ ಯಸ್ಯ ನ ಭವೇತ್, ಸ ಪುಸ್ತಕಂ ದೃಷ್ಟ್ವಾ ವದೇತ್", ಇತಿ.

[ಮತ್ತೆ, ಸ್ವಾಮೀಜೀಯವರು—] "ಯಾರಿಗಾದರೂ ಕಂಠಸ್ಥವಾಗಿಲ್ಲದಿದ್ದರೆ, ಅವರು ಪುಸ್ತಕವನ್ನು ನೋಡಿ, ಹೇಳಬಹುದು", ಎಂದು ಹೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—"ಕಂಠಸ್ಥಂ ನಾಸ್ತಿ ಚೇಚ್ಛಾಸ್ತ್ರಾರ್ಥಂ ಕರ್ತುಂ ಕಥಮುದ್ಯತಃ? ಕಾಶೀನಗರೇ ಚ!", ಇತಿ.

ಆಗ, ವಿಶುದ್ಧಾನಂದ ಸ್ವಾಮಿಗಳು — "ಕಂಠಸ್ಥವಾಗಿಲ್ಲದಿದ್ದರೆ, ಶಾಸ್ತ್ರಾರ್ಥ ನಡೆಸಲು ಪ್ರಯತ್ನಿಸಿದ್ದೇಕೆ? ಅದರಲ್ಲೂ ಕಾಶಿಯಲ್ಲಿ!", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಭವತಃ ಸರ್ವಂ ಕಂಠಸ್ಥಂ ವರ್ತತೇ?", ಇತಿ.

ಆಗ, ಸ್ವಾಮೀಜೀಯವರು—"ತಮಗೆ ಎಲ್ಲವೂ ಕಂಠಸ್ಥವಾಗಿದೆಯೇನು?", ಎಂದು ಕೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—"ಮಮ ಸರ್ವಂ ಕಂಠಸ್ಥಂ ವರ್ತತೇ", ಇತಿ.

ಆಗ, ವಿಶುದ್ಧಾನಂದ ಸ್ವಾಮಿಗಳು—"ಹೌದು! ನಮಗೆ ಎಲ್ಲವೂ ಕಂಠಸ್ಥವಾಗಿದೆ!", ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"ಧರ್ಮಸ್ಯ ಕಿಂ ಸ್ವರೂಪಮ್?", ಇತಿ.

ಇದರ ಮೇಲೆ, ಸ್ವಾಮೀಜೀಯವರು—"ಹೇಳಿರಿ! ಧರ್ಮದ ಸ್ವರೂಪವೇನು?", ಎಂದು ಕೇಳಿದರು.

ತದಾ ವಿಶುದ್ಧಾನಂದಸಾಮಿನೋಕ್ತಮ್ — "ವೇದಪ್ರತಿಪಾದ್ಯಃ ಪ್ರಯೋಜನವದರ್ಥೋ ಧರ್ಮಃ", ಇತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದಕ್ಕೆ, ವಿಶುದ್ಧಾನಂದ ಸ್ವಾಮಿಗಳು—"ಯಾವುದು ವೇದಪ್ರತಿಪಾದಿತವಾಗಿದ್ದು, ಫಲಸಹಿತವಾದ ಅರ್ಥವನ್ನು ನೀಡುತ್ತದೋ, ಅದೇ ಧರ್ಮವೆಂದು ಕರೆಯಲ್ಪಡುತ್ತದೆ", ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"ಇದಂ ತು ತವ ಸಂಸ್ಕೃತಂ; ನಾಸ್ಯ ಪ್ರಾಮಾಣ್ಯಂ! ಕಂಠಸ್ಥಾಂ ಶ್ರುತಿಂ ಸ್ಮೃತಿಂ ವಾ ವದ", ಇತಿ.

ಇದರ ಮೇಲೆ, ಸ್ವಾಮೀಜೀಯವರು—"ಇದು ನಿಮ್ಮ ಸಂಸ್ಕೃತವಾಗಿದೆ. ಇದಕ್ಕೆ ಏನು ಪ್ರಮಾಣ? ಕಂಠಸ್ಥವಾಗಿರುವ ಶ್ರುತಿಯನ್ನೋ, ಅಥವಾ ಸ್ಮೃತಿಯನ್ನೋ, ಹೇಳಿರಿ", ಎಂದು ಹೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—
"'ಚೋದನಾಲಕ್ಷಣೋऽರ್ಥೋ ಧರ್ಮಃ'",*
"ಇತಿ ಜೈಮಿನಿಸೂತ್ರಮ್",† ಇತಿ.

ಆಗ, ವಿಶುದ್ಧಾನಂದ ಸ್ವಾಮಿಗಳು—"ಯಾವುದು ಪ್ರೇರಣೆ ನೀಡುವಂತಹ ಅರ್ಥವನ್ನು ಕೊಡುತ್ತದೋ, ಅದನ್ನೇ ಧರ್ಮವೆಂದು ಹೇಳಲಾಗುತ್ತದೆ. ಇದು ಜೈಮಿನೀ-ಸೂತ್ರವಾಗಿದೆ", ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"ಚೋದನಾ ಕಾ? ಚೋದನಾ ನಾಮ ಪ್ರೇರಣಾ! ತತ್ರಾಪಿ ಶ್ರುತಿರ್ವಾ ಸ್ಮೃತಿರ್ವಾ ವಕ್ತವ್ಯಾ, ಯತ್ರ ಪ್ರೇರಣಾ ಭವೇತ್".

ಇದರ ಮೇಲೆ, ಸ್ವಾಮೀಜೀಯವರು—"ಇದು ಸೂತ್ರವಾಗಿದೆ. ಇಲ್ಲಿ ಕಂಠಸ್ಥವಾದ ಶ್ರುತಿಯನ್ನೋ, ಅಥವಾ ಸ್ಮೃತಿಯನ್ನೋ, ಏಕೆ ಹೇಳುವುದಿಲ್ಲ?

---

*ಮಿಮಾಂಸಾ ದರ್ಶನ (1.1.2.)

†ಇದಂತೂ ಸೂತ್ರವಾಗಿದೆ. ಇದು ಶ್ರುತಿಯೂ ಅಲ್ಲ; ಸ್ಮೃತಿಯೂ ಅಲ್ಲ! ಎಲ್ಲವೂ ನನಗೆ ಕಂಠಸ್ಥವಾಗಿದೆ, ಎಂಬ ಪ್ರತಿಜ್ಞೆಯ ಹಾನಿಯಾದ್ದರಿಂದ, ಸ್ವಾಮೀ ವಿಶುದ್ಧಾನಂದರ ಪರಾಜಯವೇಕಾಗಲಿಲ್ಲ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಮತ್ತು 'ಚೋದನಾ', ಎಂದರೇನು? ಪ್ರೇರಣೆಯ ಹೆಸರೇ, ಚೋದನಾ, ಎಂದು ಹೇಳಲಾಗಿದೆ. ಎಲ್ಲಿ ಪ್ರೇರಣೆಯಾಗಿರುತ್ತದೋ, ಅಲ್ಲಿಯೂ ಕೂಡ, ಶ್ರುತಿಯನ್ನೋ ಅಥವಾ ಸ್ಮೃತಿಯನ್ನೋ, ಹೇಳಬೇಕು", ಎಂದು ಹೇಳಿದರು.

ತದಾ ವಿಶುದ್ಧಾನಂದಸ್ವಾಮಿನಾ ಕಿಮಪಿ ನೋಕ್ತಮ್.

ಆಗ, ವಿಶುದ್ಧಾನಂದ ಸ್ವಾಮಿಗಳು ಏನನ್ನೂ ಹೇಳಲಿಲ್ಲ!

ತದಾ ಸ್ವಾಮಿನೋಕ್ತಮ್—"ಅಸ್ತು ತಾವದ್ಧರ್ಮಸ್ವರೂಪಪ್ರತಿಪಾದಿಕಾ ಶ್ರುತಿರ್ವಾ ಸ್ಮೃತಿಸ್ತು ನೋಕ್ತಾ. ಕಿಞ್ಚ ಧರ್ಮಸ್ಯ ಕತಿ ಲಕ್ಷಣಾನಿ ಭವಂತಿ? ವದತು ಭವಾನ್", ಇತಿ.

ಆಗ, ಸ್ವಾಮೀಜೀಯವರು—"ಸರಿ! ತಾವು ಧರ್ಮದ ಸ್ವರೂಪಪ್ರತಿಪಾದಕವಾದ ಶ್ರುತಿಯನ್ನಾಗಲೀ, ಅಥವಾ ಸ್ಮೃತಿಯನ್ನಾಗಲೀ, ಹೇಳಲಿಲ್ಲ. ಆದರೆ, [ಈಗ] ಧರ್ಮದ ಲಕ್ಷಣಗಳೆಷ್ಟೆಂಬುದನ್ನು ತಾವು ಹೇಳಿ?", ಎಂದು ಕೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—"ಏಕಮೇವ ಲಕ್ಷಣಂ ಧರ್ಮಸ್ಯ", ಇತಿ.

ಅದಕ್ಕೆ, ವಿಶುದ್ಧಾನಂದ ಸ್ವಾಮಿಗಳು—"ಧರ್ಮದ ಲಕ್ಷಣ ಒಂದೇ ಒಂದಾಗಿದೆ", ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"ಕಿಂ ಚ ತತ್?", ಇತಿ.

ಆಗ, ಸ್ವಾಮೀಜೀಯವರು—"ಅದು ಏನು?", ಎಂದು ಕೇಳಿದರು.

ತದಾ ವಿಶುದ್ಧಾನಂದಸ್ವಾಮಿನಾ ಕಿಮಪಿ ನೋಕ್ತಮ್.

ಆಗ, ವಿಶುದ್ಧಾನಂದ ಸ್ವಾಮಿಗಳು ಏನನ್ನೂ ಹೇಳಲಿಲ್ಲ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ದಯಾನಂದಸ್ವಾಮಿನೋಕ್ತವಾನ್—"ಧರ್ಮಸ್ಯ ತು ದಶ ಲಕ್ಷಣಾನಿ ಸಂತಿ. ಭವತಾ ಕಥಮುಕ್ತಮೇಕಮೇವ?", ಇತಿ.

ಆಗ, ದಯಾನಂದ ಸ್ವಾಮೀಜೀಯವರು—"ಧರ್ಮದ ಲಕ್ಷಣಗಳಂತೂ ಹತ್ತು ಇವೆ, [ಆದರೆ,] ತಾವು—'ಒಂದೇ', ಎಂದು ಹೇಗೆ ಹೇಳಿದಿರಿ ?", ಎಂದು ಕೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತವಾನ್—"ಕಾನಿ ತಾನಿ ಲಕ್ಷಣಾನಿ?", ಇತಿ.

ಆಗ, ವಿಶುದ್ಧಾನಂದಸ್ವಾಮಿಗಳು—"ಆ ದಶ ಲಕ್ಷಣಗಳಾವುವು?", ಎಂದು ಕೇಳಿದರು.

ತದಾ ಸ್ವಾಮಿನೋಕ್ತವಾನ್—

"'ಧೃತಿಃ ಕ್ಷಮಾ ದಮೋऽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್' ॥*
ಇತಿ ಮನುಸ್ಮೃತೇಃ ಶ್ಲೋಕೋऽಸ್ತಿ".

ಅದಕ್ಕೆ, ಸ್ವಾಮೀಜೀಯವರು ಮನುಸ್ಮೃತಿಯ ಈ ವಚನವನ್ನು, ಎಂದರೆ—

1. ಧೈರ್ಯ, 2. ಕ್ಷಮಾ, 3. ದಮ,[1] 4. ಕದಿಯದಿರುವುದು,[2] 5. ಶೌಚ, 6. ಇಂದ್ರಿಯನಿಗ್ರಹ, 7. ಬುದ್ಧಿ, 8. ವಿದ್ಯೆಯ ವೃದ್ಧಿ, 9. ಸತ್ಯ, 10. ಅಕ್ರೋಧ, ಎಂದರೆ ಕ್ರೋಧದ ತ್ಯಾಗ. ಇವು ಧರ್ಮದ ದಶ ಲಕ್ಷಣಗಳಾಗಿವೆ. ಆದರೂ, ತಾವು—'ಒಂದೇ ಲಕ್ಷಣ', ಎಂದು ಹೇಗೆ ಹೇಳುತ್ತೀರಿ?", ಎಂದು ಕೇಳಿದರು.

ತದಾ ಬಾಲಶಾಸ್ತ್ರಿಣೋಕ್ತವಾನ್—"ಅಹಂ ಸರ್ವಂ ಧರ್ಮಶಾಸ್ತ್ರಂ ಪಠಿತವಾನ್", ಇತಿ.

---

*ಮನುಸ್ಮೃತಿ. (6–92)

1. ಮನೋನಿಗ್ರಹ—ಅನು.

2. ಪರರ ವಸ್ತುವಿಗೆ ಆಸೆ ಪಡದಿರುವುದು—ಅನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗ, ಬಾಲಶಾಸ್ತ್ರಿಗಳು—"ಸರಿ! ನಾವು ಧರ್ಮಶಾಸ್ತ್ರಗಳೆಲ್ಲವನ್ನೂ ಓದಿದ್ದೇವೆ.", ಎಂದೂ ಹೇಳಿದರು.

ತದಾ ದಯಾನಂದಸ್ವಾಮಿನೋಕ್ತಮ್—"ತ್ವಮಧರ್ಮಸ್ಯ ಲಕ್ಷಣಾನಿ ವದ", ಇತಿ.

ಆಗ, ಸ್ವಾಮೀಜೀಯವರು — "ನೀವು ಅಧರ್ಮದ ಲಕ್ಷಣಗಳನ್ನು ತಿಳಿಸಿ", ಎಂದು ಹೇಳಿದರು.

ತದಾ ಬಾಲಶಾಸ್ತ್ರಿಣಾ ಕಿಮಪಿ ನೋಕ್ತಮ್.

ಆಗ, ಬಾಲಶಾಸ್ತ್ರಿಗಳು ಯಾವ ಉತ್ತರವನ್ನೂ ಕೊಡಲಿಲ್ಲ!

ತದಾ ಬಹುಭಿರ್ಯುಗಪತ್ ಪೃಷ್ಟಮ್—"ಪ್ರತಿಮಾ-ಶಬ್ದೋ ವೇದೇ ನಾಸ್ತಿ ಕಿಮ್?", ಇತಿ.

ಪುನಃ, ಬಹಳ ಮಂದಿ ಪಂಡಿತರುಗಳು ಒಟ್ಟಿಗೆ ಸೇರಿ, ಗಲಾಟೆ ಮಾಡುತ್ತಾ—"ವೇದಗಳಲ್ಲಿ 'ಪ್ರತಿಮಾ' ಶಬ್ದವು ಇದೆಯೋ, ಅಥವಾ ಇಲ್ಲವೋ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಪ್ರತಿಮಾ-ಶಬ್ದಸ್ತ್ವಸ್ತಿ", ಇತಿ.

ಅದಕ್ಕೆ, ಸ್ವಾಮೀಜೀಯವರು—"ಪ್ರತಿಮಾ ಶಬ್ದವಂತೂ ಇದೆ". ಎಂದು ಹೇಳಿದರು.

ತದಾ ತೈರುಕ್ತಮ್—"ಕ್ವಾಸ್ತಿ?", ಇತಿ.

ಪುನಃ, ಅವರೆಲ್ಲರೂ—"ಎಲ್ಲಿದೆ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಸಾಮವೇದಸ್ಯ ಬ್ರಾಹ್ಮಣೇ ಚ", ಇತಿ.

ಅದಕ್ಕೆ, ಸ್ವಾಮೀಜೀಯವರು—"ಸಾಮವೇದದ ಬ್ರಾಹ್ಮಣದಲ್ಲಿದೆ", ಎಂದು ಹೇಳಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ತೈರುಕ್ತಮ್—"**ಕಿಂ ಚ ತದ್ವಚನಮ್?**", **ಇತಿ.**

ಪುನಃ, **ಅವರುಗಳು**—"ಅದು ಯಾವ ವಚನವಾಗಿದೆ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—
"**'ದೇವತಾಯತನಾನಿ ಕಂಪಂತೇ, ದೈವತಪ್ರತಿಮಾ ಹಸಂತಿ'***
ಇತ್ಯಾದೀನಿ".

ಅದಕ್ಕೆ, **ಸ್ವಾಮೀಜೀಯವರು** — "ಅದೇನೆಂದರೆ — 'ದೇವತೆಯ ಸ್ಥಾನವು ಕಂಪಿಸುತ್ತದೆ. ಮತ್ತು ಪ್ರತಿಮಾ ನಗುತ್ತದೆ', ಇತ್ಯಾದಿಗಳಲ್ಲಿದೆ", ಎಂದು ಹೇಳಿದರು.

ತದಾ ತೈರುಕ್ತಮ್—"**ಪ್ರತಿಮಾ-ಶಬ್ದಸ್ತು ವೇದೇ† ವರ್ತತೇ. ಭವಾನ್ ಕಥಂ ಖಂಡನಂ ಕರೋತಿ?**", **ಇತಿ.**

ಪುನಃ, **ಅವರುಗಳು**—"**ಪ್ರತಿಮಾ** ಶಬ್ದವಂತೂ ವೇದಗಳಲ್ಲೂ ಇದೆಯಲ್ಲ! ಮತ್ತೆ, ನೀವು ಖಂಡನವನ್ನೇಕೆ ಮಾಡುತ್ತೀರಿ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"**ಪ್ರತಿಮಾ-ಶಬ್ದೇನೈವ ಪಾಷಾಣ-ಪೂಜನಾದೇಃ ಪ್ರಾಮಾಣ್ಯಂ ನ ಭವತಿ. ಪ್ರತಿಮಾ-ಶಬ್ದಸ್ಯಾರ್ಥಃ ಕರ್ತವ್ಯಃ**", **ಇತಿ.**

---

*ಷಡ್ವಿಂಶ ಬ್ರಾಹ್ಮಣ (5-9)

ಇದು ವೇದವಚನವಲ್ಲ. ಆದರೆ, ಸಾಮವೇದದ ಷಡ್ವಿಂಶ-ಬ್ರಾಹ್ಮಣ ಗ್ರಂಥದ್ದು. ಆದರೆ, ಅಲ್ಲಿಯೂ ಸಹ ಇದು ಪ್ರಕ್ಷಿಪ್ತವಾಗಿದೆ. ಏಕೆಂದರೆ, ಅದು ವೇದವಿರುದ್ಧವಾಗಿದೆ. ವಸ್ತುತಃ ಷಡ್ವಿಂಶ-ಬ್ರಾಹ್ಮಣವು ಪಂಚವಿಂಶ-ಬ್ರಾಹ್ಮಣ, ಎಂದರೆ ತಾಂಡ್ಯ-ಬ್ರಾಹ್ಮಣದ ಪರಿಶಿಷ್ಟವಾಗಿದೆ. ಆದುದರಿಂದ, ಈ ಬ್ರಾಹ್ಮಣವೆಲ್ಲಾ ಉತ್ತರ ಕಾಲೀನದ್ದಾಗಿದೆ. —ಯು.ಮೀ.

†ಇದು ಬ್ರಾಹ್ಮಣವಚನವೆಂದು ತಿಳಿದೂ ಕೂಡ, ಅದನ್ನು ವೇದದಲ್ಲಿದೆ, ಎಂದು ಹೇಳುವುದು, ಛಲಪ್ರಯೋಗ ಮಾಡಿದಂತೆ ಆಗುತ್ತದೆ. —ಸಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರ ಮೇಲೆ, ಸ್ವಾಮೀಜೀಯವರು—"'ಪ್ರತಿಮಾ' ಶಬ್ದದಿಂದ ಪಾಷಾಣ ಮೊದಲಾದ ಮೂರ್ತಿ ಪೂಜನಾದಿಗಳ ಪ್ರಮಾಣ ಉಂಟಾಗುವುದಿಲ್ಲ. ಆದ್ದರಿಂದ, ಇದರ ಅರ್ಥವೇನು, ಎಂದು 'ಪ್ರತಿಮಾ' ಶಬ್ದದ ಅರ್ಥವನ್ನು ಮಾಡಬೇಕಾಗಿದೆ", ಎಂದು ಹೇಳಿದರು.

ತದಾ ತೈರುಕ್ತಮ್—"ಯಸ್ಮಿನ್ ಪ್ರಕರಣೇ೨ಯಂ ಮಂತ್ರೋ೨ಸ್ತಿ* ತಸ್ಯ ಕೋ೨ರ್ಥಃ?", ಇತಿ.

ಆಗ, ಅವರುಗಳು—"ಈ ಮಂತ್ರವು ಯಾವ ಪ್ರಕರಣದಲ್ಲಿದೆಯೋ, ಆ ಪ್ರಕರಣದ ಅರ್ಥವೇನು?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—

"'ಅಥಾತೋ೨ದ್ಭುತಶಾಂತಿಂ ವಾಖ್ಯಾಸ್ಯಾಮಃ'†

"ಇತ್ಯುಪಕ್ರಮ್ಯ — 'ತ್ಯಾತಾರಮಿಂದ್ರಮಿತ್ಯಾದಯಃ'; ತತ್ರೈವ ಸರ್ವೇ ಮೂಲಮಂತ್ರಾ ಲಿಖಿತಾಃ.

"ಏತೇಷಾಂ ಮಧ್ಯಾತ್ ಪ್ರತಿಮಂತ್ರೇಣ ತ್ರಿತ್ರಿಸಹಸ್ರಾಣ್ಯಾಹುತಯಃ ಕಾರ್ಯಾಸ್ತತೋ ವ್ಯಾಹೃತಿಭಿಃ ಪಂಚ ಪಂಚಾಹುತಯಶ್ಚೇತಿ ಲಿಖಿತ್ವಾ ಸಾಮಗಾನಂ ಚ ಲಿಖಿತಮ್. ಅನೇನೈವ ಕರ್ಮಣಾ೨ದ್ಭುತಶಾಂತಿರ್ವಿಹಿತಾ.

"ಯಸ್ಮಿನ್ಮಂತ್ರೇ ಪ್ರತಿಮಾ-ಶಬ್ದೋ೨ಸ್ತಿ ಸ ಮಂತ್ರೋ ನ ಮರ್ತ್ಯಲೋಕವಿಷಯೋ೨ಪಿತು ಬ್ರಹ್ಮಲೋಕವಿಷಯ ಏವ. ತದ್ಯಥಾ—

"'ಸ ಪ್ರಾಚೀಂ ದಿಶಮನ್ವಾವರ್ತತೇ೨ಥೇತಿ', ಪ್ರಾಚ್ಯಾ ದಿಶೋ೨ದ್ಭುತದರ್ಶನಶಾಂತಿಮುಕ್ತ್ವಾ, ತತೋ ದಕ್ಷಿಣಸ್ಯಾಃ ಪಶ್ಚಿಮಾಯಾ ದಿಶಃ ಶಾಂತಿಂ ಕಥಯಿತ್ವಾ, ಉತ್ತರಸ್ಯಾ ದಿಶಃ ಶಾಂತಿರುಕ್ತಾ. ತತೋ ಭೂಮೇಶ್ಚೇತಿ ಮರ್ತ್ಯಲೋಕಸ್ಯ ಪ್ರಕರಣಂ ಸಮಾಪ್ಯಾಂತರಿಕ್ಷಸ್ಯ ಶಾಂತಿರುಕ್ತಾ. ತತೋ

---

*ಇದು ಮಂತ್ರವಲ್ಲ; ಬ್ರಾಹ್ಮಣವಾಕ್ಯ. ಆದರೂ, ಇದನ್ನು ಮಂತ್ರ, ಎಂದು ಹೇಳುವುದು ಪಂಡಿತರ ಭ್ರಮೆ.—(ಯು.ಮೀ)

†ಪಡ್ವಿಂಶ ಬ್ರಾಹ್ಮಣ (5–1)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿವಶ್ಚ ಶಾಂತಿವಿಧಾನಮುಕ್ತಮ್. ತತಃ ಪರಸ್ಯ ಸ್ವರ್ಗಸ್ಯ* ಚ ನಾಮ ಬ್ರಹ್ಮಲೋಕಸ್ಯೈವ", ಇತಿ.

ಅದಕ್ಕೆ, ಸ್ವಾಮೀಜೀಯವರು—"ಹೀಗಿದೆ ಅದರ ಅರ್ಥ—

'ಈಗ ಅದ್ಭುತ ಶಾಂತಿಯ ವ್ಯಾಖ್ಯಾನ ಮಾಡುತ್ತೇವೆ', ಎಂದು ಪ್ರಾರಂಭಿಸಿ, ಪುನಃ ರಕ್ಷಣೆಯ ಸಲುವಾಗಿ, 'ತ್ರಾತಾರಮ್ ಇಂದ್ರಮ್', ಇತ್ಯಾದಿ ಮೂಲಮಂತ್ರವೆಲ್ಲಾ ಅಲ್ಲಿಯೇ, ಸಾಮವೇದದ ಬ್ರಾಹ್ಮಣದಲ್ಲಿ ಬರೆಯಲಾಗಿದೆ.

"ಇವುಗಳಲ್ಲಿಂದ, ಪ್ರತಿಯೊಂದು ಮಂತ್ರದಿಂದಲೂ ಮೂರು-ಮೂರು ಸಾವಿರ ಆಹುತಿಗಳನ್ನು ಕೊಡಬೇಕು. ತದನಂತರ, ವ್ಯಾಹೃತಿ ಮಾಡಿ, ಐದೈದು ವ್ಯಾಹೃತಿ ಆಹುತಿಗಳನ್ನು ಕೊಡಬೇಕು". ಹೀಗೆ ಬರೆದಾದ ಮೇಲೆ, 'ಸಾಮ ಗಾನವನ್ನೂ ಕೂಡ, ಮಾಡಬೇಕು', ಎಂದು ಬರೆಯಲಾಗಿದೆ. ಈ ಕ್ರಮ ದಿಂದ, ಅದ್ಭುತ ಶಾಂತಿಯ ವಿಧಾನವನ್ನು ರೂಪಿಸಲಾಗಿದೆ.

"ಯಾವ ಮಂತ್ರದಲ್ಲಿ 'ಪ್ರತಿಮಾ' ಶಬ್ದವು ಬಂದಿದೆಯೋ, ಆ ಮಂತ್ರವು ಮರ್ತ್ಯಲೋಕಕ್ಕೆ ಸಂಬಂಧಿಸಿದುದಲ್ಲ; ಆದರೆ, ಬ್ರಹ್ಮಲೋಕಕ್ಕೆ ಸಂಬಂಧಿಸಿದು ದಾಗಿದೆ. ಅದು ಹೇಗೆಂದರೆ—

"'ವಿಘ್ನಕರ್ತೃದೇವತೆಯು ಪೂರ್ವ ದಿಕ್ಕಿನಲ್ಲಿರುವಾಗ', ಮೊದಲಾದ ಮಂತ್ರಗಳಿಂದ ಪೂರ್ವ ದಿಕ್ಕಿನಲ್ಲಿ ಅದ್ಭುತ-ದರ್ಶನದ ಶಾಂತಿಯನ್ನು ಹೇಳಿ, ಪುನಃ ದಕ್ಷಿಣ ದಿಕ್ಕು, ಪಶ್ಚಿಮ ದಿಕ್ಕು ಮತ್ತು ಉತ್ತರ ದಿಕ್ಕು; ಆದಾದ ಮೇಲೆ, ಭೂಮಿಯ ಶಾಂತಿಯನ್ನು ಹೇಳಿ, ಮರ್ತ್ಯಲೋಕದ ಪ್ರಕರಣವನ್ನು ಸಮಾಪ್ತಗೊಳಿಸಿ, ಅಂತರಿಕ್ಷದ ಶಾಂತಿಯನ್ನೂ ಹೇಳಿ, ತದನಂತರ, ಸ್ವರ್ಗ ಲೋಕ; ಪುನಃ ಪರಮಸ್ವರ್ಗ, ಎಂದರೆ, ಬ್ರಹ್ಮಲೋಕದ ಶಾಂತಿಯನ್ನು ಹೇಳಲಾಗಿದೆ", ಎಂದು ಹೇಳಿದರು.

ಇದನ್ನು ಕೇಳಿ, ಎಲ್ಲರೂ ಸುಮ್ಮನಾದರು!

---

*'ಸ ಪರಂ ದಿವಮನ್ವಾವರ್ತತೇ' .... ಷಡ್ವಿಂಶ-ಬ್ರಾಹ್ಮಣ (5.10)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ಬಾಲಶಾಸ್ತ್ರಿಕೋಕ್ತಮ್—"ಯಸ್ಯಾಂ ಯಸ್ಯಾಂ ದಿಶಿ ಯಾ ಯಾ ದೇವತಾ ತಸ್ಯಾಸ್ತಸ್ಯಾ ದೇವತಾಯಾಃ ಶಾಂತಿಕರಣೇನ ದುಷ್ಪವಿಘ್ನೋಪಶಾಂತಿರ್ಭವತಿ", ಇತಿ.

ಆಗ, ಬಾಲಶಾಸ್ತ್ರಿಗಳು—"ಯಾವ ಯಾವ ದಿಕ್ಕಿನಲ್ಲಿ ಯಾವ ಯಾವ ದೇವತೆ ಇದೆಯೋ, ಆದರದರ ಶಾಂತಿ ಮಾಡುವುದರಿಂದ, ಅದ್ಭುತವನ್ನು ನೋಡುವವನ* ವಿಘ್ನಗಳು ಶಾಂತವಾಗುತ್ತವೆ"., ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"ಇದಂ ತು ಸತ್ಯಂ! ಪರಂತು ವಿಘ್ನದರ್ಶಯಿತಾ ಕೋಽಸ್ತಿ?", ಇತಿ.

ಆಗ, ಸಾಮೀಜೀಯವರು—"ಇದಂತೂ ಸತ್ಯವೇ! ಆದರೆ, ಈ ರೀತಿಯಲ್ಲಿ ವಿಘ್ನಗಳನ್ನು ತೋರಿಸುವವರಾರು?", ಎಂದು ಕೇಳಿದರು.

ತದಾ ಬಾಲಶಾಸ್ತ್ರಿಕೋಕ್ತಮ್—"ಇಂದ್ರಿಯಾಣಿ ದರ್ಶಯಿತ್ಯಾಣಿ", ಇತಿ.

ಆಗ, ಬಾಲಶಾಸ್ತ್ರಿಗಳು—"ತೋರಿಸುವುವು ಇಂದ್ರಿಯಗಳೇ!", ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"ಇಂದ್ರಿಯಾಣಿ ತು ದ್ರಷ್ಟ್ರಾಣಿ ಭವಂತಿ, ನ ತು ದರ್ಶಯಿತ್ಯಾಣಿ! ಪರಂತು, 'ಸ ಪ್ರಾಚೀಂ ದಿಶಮನ್ವಾವರ್ತತೇಽಥೇತಿ'. "ಅತ್ರ 'ಸ'-ಶಬ್ದವಾಚ್ಯಃ ಕೋಽಸ್ತಿ?", ಇತಿ.

ಇದಕ್ಕೆ, ಸ್ವಾಮೀಜೀಯವರು—"ಇಂದಿಯಗಳಂತೂ ನೋಡುವುವುಗಳಾಗಿವೆ; ನೋಡಿಸುವುವುಗಳಲ್ಲ! ಆದರೆ—

'ಸ ಪ್ರಾಚೀಂ ದಿಶಮನ್ವಾವರ್ತತೇಽಥೇತಿ'—ಇತ್ಯಾದಿ [ಮಂತ್ರ]ದಲ್ಲಿ 'ಸ' ಶಬ್ದದ ವಾಚ್ಯಾರ್ಥವೇನು?", ಎಂದು ಕೇಳಿದರು.

---

*ಪಾರಮಾರ್ಥಿಕ ಅರಿವನ್ನು ತಿಳಿಯಲಿಚ್ಛಿಸುವವನ.—ಆನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ಬಾಲಶಾಸ್ತ್ರಿಣಾ ಕಿಮಪಿ ನೋಕ್ತಮ್.

ಆಗ, **ಬಾಲಶಾಸ್ತ್ರಿಗಳು** ಏನನ್ನೂ ಹೇಳಲಿಲ್ಲ!

ತದಾ ಶಿವಸಹಾಯೇನ ಪ್ರಯಾಗಸ್ಥೇನೋಕ್ತಮ್—"ಅಂತರಿಕ್ಷಾದಿ-ಗಮನಂ ಶಾಂತಿಕರಣಸ್ಯ ಫಲಮನೇನೋಚ್ಯತೇ ಚ", ಇತಿ.

ಆಗ, **ಪ್ರಯಾಗನಿವಾಸಿಗಳಾದ ಪಂಡಿತಶಿವಸಹಾಯರು**—"ಆಂತರಿಕ್ಷ ಮೊದಲಾದುವುಗಳಲ್ಲಿ ಗಮನ [ಮತ್ತು] ಶಾಂತಿ ಮಾಡುವುದರ ಫಲ, ಈ ಮಂತ್ರದಲ್ಲಿ ಹೇಳಲಾಗಿದೆ", ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"ಭವತಾ ತತ್ಪ್ರಕರಣಂ ದೃಷ್ಟಂ ಕಿಮ್? ದೃಷ್ಟಂ ಚೇತ್ತರ್ಹಿ ಕಸ್ಯಾಪಿ ಮಂತ್ರಸ್ಯಾರ್ಥಂ ವದ", ಇತಿ.

ಇದಕ್ಕೆ, **ಸ್ವಾಮೀಜೀಯವರು**—"ತಾವು ಆ ಪ್ರಕರಣವನ್ನು ನೋಡಿದ್ದೀರೇನು? ಒಂದುವೇಳೆ, ನೋಡಿದ್ದರೆ, ಯಾವುದಾದರೂ ಮಂತ್ರದ ಅರ್ಥವನ್ನಾದರೂ ಹೇಳಿರಿ?", ಎಂದು ಹೇಳಿದರು.

ತದಾ ಶಿವಸಹಾಯೇನ ಮೌನಂ ಕೃತಮ್.

ಆಗ, **ಶಿವಸಹಾಯರು** ಸುಮ್ಮನಾಗಿಬಿಟ್ಟರು!

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—"ವೇದಾಃ ಕಸ್ಯಾಜ್ಞಾತಾಃ?", ಇತಿ.

ಪುನಃ, **ವಿಶುದ್ಧಾನಂದ ಸ್ವಾಮಿಗಳು**—"ವೇದಗಳು ಯಾರಿಂದ ಉತ್ಪನ್ನವಾಗಿವೆ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ವೇದಾ ಈಶ್ವರಾಜ್ಞಾತಾಃ", ಇತಿ.

ಆದಕ್ಕೆ, **ಸ್ವಾಮೀಜೀಯವರು**—"ವೇದಗಳು ಈಶ್ವರನಿಂದ ಉತ್ಪನ್ನವಾಗಿವೆ", ಎಂದು ಹೇಳಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—"ಕಸ್ಮಾದೀಶ್ವರಾಜ್ಜಾತಾಃ? ಕಿಂ ನ್ಯಾಯಶಾಸ್ತ್ರೋಕ್ತಾದ್ವಾ ಯೋಗಶಾಸ್ತ್ರೋಕ್ತಾದ್ವಾ ವೇದಾಂತ-ಶಾಸ್ತ್ರೋಕ್ತಾದ್ವಾ?", ಇತಿ.

ಆಗ, **ವಿಶುದ್ಧಾನಂದ ಸ್ವಾಮಿಗಳು**—"ಯಾವ ಈಶ್ವರನಿಂದ ಉತ್ಪನ್ನವಾಗಿವೆ? ನ್ಯಾಯಶಾಸ್ತ್ರಪ್ರಸಿದ್ಧ ಈಶ್ವರನಿಂದಲೋ? ಅಥವಾ ಯೋಗ ಶಾಸ್ತ್ರಪ್ರಸಿದ್ಧ ಈಶ್ವರನಿಂದಲೋ? ಅಥವಾ ವೇದಾಂತಶಾಸ್ತ್ರಪ್ರಸಿದ್ಧ ಈಶ್ವರನಿಂದಲೋ? ಇತ್ಯಾದಿ [ಯಾವ ಈಶ್ವರನಿಂದ?]", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಈಶ್ವರಾ ಬಹವೋ ಭವಂತಿ ಕಿಮ್?" ಇತಿ.

ಇದಕ್ಕೆ, **ಸ್ವಾಮೀಜೀಯವರು**—"ಬಹಳ ಮಂದಿ ಈಶ್ವರರಿದ್ದಾರೇನು?", ಎಂದು ಕೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—"ಈಶ್ವರಸ್ತ್ವೇಕ ಏವ! ಪರಂತು ವೇದಾಃ ಕೀದೃಗ್ಲಕ್ಷಣಾದೀಶ್ವರಾಜ್ಜಾತಾಃ?", ಇತಿ.

ಆಗ, **ವಿಶುದ್ಧಾನಂದಸ್ವಾಮಿಗಳು**—"ಈಶ್ವರನಂತೂ ಒಬ್ಬನೇ ಇದ್ದಾನೆ. ಆದರೆ, ವೇದಗಳು ಯಾವ ಲಕ್ಷಣಗಳನ್ನುಳ್ಳ ಈಶ್ವರನಿಂದ ಪ್ರಕಾಶಿತವಾಗಿವೆ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಸಚ್ಚಿದಾನಂದಲಕ್ಷಣಾದೀಶ್ವರಾದ್ವೇದಾ ಜಾತಾಃ", ಇತಿ.

ಇದಕ್ಕೆ, **ಸ್ವಾಮೀಜೀಯವರು**—"'ಸಚ್ಚಿದಾನಂದ' ಲಕ್ಷಣಗಳನ್ನುಳ್ಳ ಈಶ್ವರನಿಂದ ಪ್ರಕಾಶಿತವಾಗಿವೆ", ಎಂದು ಹೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—"ಕೋऽಸ್ಯ ಸಂಬಂಧಃ? ಕಿಂ ಪ್ರತಿಪಾದ್ಯಪ್ರತಿಪಾದಕಭಾವೋ ವಾ ಜನ್ಯಜನಕಭಾವೋ ವಾ ಸಮವಾಯ-ಸಂಬಂಧೋ ವಾ ಸ್ವಸ್ವಾಮಿಭಾವ ಇತಿ ತಾದಾತ್ಮ್ಯಭಾವೋ ವಾ?", ಇತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುನಃ, ವಿಶುದ್ಧಾನಂದ ಸ್ವಾಮಿಗಳು—"ಈಶ್ವರ ಮತ್ತು ವೇದಗಳ ಸಂಬಂಧವೇನು? ಪ್ರತಿಪಾದ್ಯ-ಪ್ರತಿಪಾದಕಭಾವವೋ? ಅಥವಾ ಜನ್ಯ-ಜನಕ ಭಾವವೋ? ಅಥವಾ ಸಮವಾಯ-ಸಂಬಂಧವೋ? ಅಥವಾ ಸ್ವ-ಸ್ವಾಮಿಭಾವ ಸಂಬಂಧವೋ? ಅಥವಾ ತಾದಾತ್ಮ್ಯಭಾವ ಸಂಬಂಧವೋ? ಇತ್ಯಾದಿಗಳಲ್ಲಿ [ಯಾವುದು?]", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಕಾರ್ಯಕಾರಣಭಾವಃ ಸಂಬಂಧಶ್ಚ", ಇತಿ.

ಇದಕ್ಕೆ, ಸ್ವಾಮೀಜೀಯವರು—"ಕಾರ್ಯ-ಕಾರಣಭಾವ ಸಂಬಂಧವಿದೆ", ಎಂದು ಹೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—

"'ಮನೋ ಬ್ರಹ್ಮೇತ್ಯು-ಪಾಸೀತ'[1]; 'ಆದಿತ್ಯಂ ಬ್ರಹ್ಮೇತ್ಯು-ಪಾಸೀತ',[2]

"ಇತಿ ಯಥಾ ಪ್ರತೀಕೋಪಾಸನಮುಕ್ತಂ ತಥಾ ಶಾಲಿಗ್ರಾಮ-ಪೂಜನಮಪಿ ಗ್ರಾಹ್ಯಮ್", ಇತಿ.

ಆಗ, ವಿಶುದ್ಧಾನಂದ ಸ್ವಾಮಿಗಳು—"ಯಾವ ರೀತಿ 'ಮನಸ್ಸಿನಲ್ಲಿ ಬ್ರಹ್ಮಬುದ್ಧಿಯನ್ನು' ಮತ್ತು 'ಸೂರ್ಯನಲ್ಲಿ ಬ್ರಹ್ಮ ಬುದ್ಧಿಯನ್ನು' ಮಾಡಿ, ಪ್ರತೀಕದ ಉಪಾಸನೆ ಮಾಡಬೇಕೆಂದು ಹೇಳಿದೆಯೋ, ಆದೇ ರೀತಿ ಶಾಲಿಗ್ರಾಮದ ಪೂಜೆಯನ್ನೂ ಮಾಡಬೇಕೆಂದು ಗ್ರಹಿಸಬೇಕು",. ಎಂದು ಹೇಳಿದರು

ತದಾ ಸ್ವಾಮಿನೋಕ್ತಮ್—"ಯಥಾ—

'ಮನೋ ಬ್ರಹ್ಮೇತ್ಯುಪಾಸೀತ'; 'ಆದಿತ್ಯಂ ಬ್ರಹ್ಮೇತ್ಯುಪಾಸೀತ',

1. ಛಾಂದೋಗ್ಯೋಪನಿಷತ್ (3.18.1.)

2. ತುಲನೆ ಮಾಡಿ, ಛಾಂದೋಗ್ಯೋಪನಿಷತ್ (3.19.1)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಇತ್ಯಾದಿವಚನಂ ವೇದೇಷು* ದೃಶ್ಯತೇ, ತಥಾ—
'ಪಾಷಾಣಾದಿಬ್ರಹ್ಮೇತ್ಯುಪಾಸೀತ',
"ಇತಿ ವಚನಂ ಕ್ವಾಪಿ ವೇದೇಷು ನ ದೃಶ್ಯತೇ. ಪುನಃ ಕಥಂ ಗ್ರಾಹ್ಯಂ ಭವೇತ್?", ಇತಿ.

7773

ಆಗ, ಸ್ವಾಮೀಜೀಯವರು—"ಹೇಗೆ, 'ಮನೋ ಬ್ರಹ್ಮೇತ್ಯುಪಾಸೀತ' 'ಆದಿತ್ಯಂ ಬ್ರಹ್ಮೇತ್ಯುಪಾಸೀತ', ಇತ್ಯಾದಿ ವಚನಗಳು ವೇದಗಳಲ್ಲಿ* ಕಂಡು ಬರುತ್ತವೋ', ಹಾಗೆಯೇ, 'ಪಾಷಾಣಾದಿಬ್ರಹ್ಮೇತ್ಯುಪಾಸೀತ', ಇತ್ಯಾದಿ ವಚನವು ವೇದಗಳಲ್ಲಿ ಕಂಡು ಬರುವುದಿಲ್ಲ. ಆದ್ದರಿಂದ, ಇದು ಹೇಗೆ ಗ್ರಾಹ್ಯವಾಗುತ್ತದೆ?", ಎಂದು ಕೇಳಿದರು.

ತದಾ ಮಾಧವಾಚಾರ್ಯೋಽಽಹೋಕ್ತವ್—
"'ಉದ್ಬುಧ್ಯಸ್ವಾಗ್ನೇ ಪ್ರತಿ ಜಾಗೃಹಿ ತ್ವಮಿಷ್ಟಾಪೂರ್ತೇ ಸಗ್ಂ ಸೃಜೇಥಾಮಯಂ ಚ'†"
"ಇತಿ ಮಂತ್ರಸ್ಥೇನ 'ಪೂರ್ತ್ತ'ಶಬ್ದೇನ ಕಸ್ಯ ಗ್ರಹಣಮ್?"', ಇತಿ.

ಆಗ, ಮಾಧವಾಚಾರ್ಯರು—
"'ಉದ್ಬುಧ್ಯಸ್ವಾಗ್ನೇ ಪ್ರತಿ ಜಾಗೃಹಿ ತ್ವಮಿಷ್ಟಾಪೂರ್ತೇ ಸಗ್ಂ ಸೃಜೇಥಾಮಯಂ ಚ",

ಎಂಬ ಈ ಮಂತ್ರದಲ್ಲಿ 'ಪೂರ್ತ್ತ'-ಶಬ್ದದಿಂದ ಯಾವುದನ್ನು ಗ್ರಹಿಸಲಾಗುತ್ತದೆ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತವ್—"ವಾಪೀಕೂಪತಡಾಗಾರಾಮಾಣಾವೇವ;‡ ನಾನ್ಯಸ್ಯ", ಇತಿ.

---

*ಇದೂ ಕೂಡ, ಅದೇ ಪಂಡಿತರುಗಳ ಮತವಾಗಿತ್ತು; ಸ್ವಾಮೀಜೀಯವರ ಮತವಲ್ಲ. ಏಕೆಂದರೆ, ಸ್ವಾಮೀಜೀಯವರು ಬ್ರಾಹ್ಮಣ ಗ್ರಂಥಗಳನ್ನು ವೇದವೆಂದೂ, ಮತ್ತು ಈಶ್ವರಕೃತವೆಂದೂ ಒಪ್ಪುತ್ತಿರಲಿಲ್ಲ.

†ಯಜುರ್ವೇದ.(15.14).

‡ಕೋಶಗಳಲ್ಲಿ ಈ ಅರ್ಥಗಳೇ ಕೊಡಲ್ಪಟ್ಟಿವೆ.—(ಯು.ವೀ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದಕ್ಕೆ, ಸ್ವಾಮೀಜೀಯವರು — "ಭಾವಿ, ಹೊಂಡ, ಕೆರೆ, ಮತ್ತು ಉದ್ಯಾನಗಳ ಗ್ರಹಣವೇ ಆಗುತ್ತದೆ; ಬೇರೆಯದಲ್ಲ!", ಎಂದು ಹೇಳಿದರು.

ತದಾ ಮಾಧವಾಚಾರ್ಯೋಕ್ತಮ್ — "ಪಾಷಾಣಾದಿಮೂರ್ತಿ-ಪೂಜನಮತ್ರ ಕಥಂ ನ ಗೃಹ್ಯತೇ ಚ?", ಇತಿ.

ಆಗ, ಮಾಧವಾಚಾರ್ಯರು—"ಇದರಿಂದ, ಪಾಷಾಣಾದಿ ಮೂರ್ತಿ ಪೂಜೆಯನ್ನು ಏಕೆ ಗ್ರಹಿಸಲಾಗುವುದಿಲ್ಲ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್ — "ಪೂರ್ತ್ಯಶಬ್ದಸ್ತು ಪೂರ್ತ್ಯಿವಾಚಿ ವರ್ತತೇ. ತಸ್ಮಾನ್ನ ಕದಾಚಿತ್ಪಾಷಾಣಾದಿಮೂರ್ತಿಪೂಜನಗ್ರಹಣಂ ಸಂಭವತಿ. ಯದಿ ಶಂಕಾಸ್ತಿ, ತರ್ಹಿ ನಿರುಕ್ತಮಸ್ಯ ಮಂತ್ರಸ್ಯ ಪಶ್ಯ; ಬ್ರಾಹ್ಮಣಂ ಚ", ಇತಿ.

ಇದಕ್ಕೆ, ಸ್ವಾಮೀಜೀಯವರು—'ಪೂರ್ತ್ತ'–ಶಬ್ದವು 'ಪೂರ್ತ್ತಿ'ಯ ವಾಚಕವಾಗಿದೆ. ಇದರಿಂದ, ಎಂದಿಗೂ ಪಾಷಾಣಾದಿ ಮೂರ್ತಿಗಳ ಪೂಜೆಯನ್ನು ಗ್ರಹಿಸಲಾಗುವುದಿಲ್ಲ. ಒಂದು ವೇಳೆ, ನಿಮಗೆ ಸಂದೇಹವಿದ್ದರೆ, ಮಂತ್ರಕ್ಕೆ ಸಂಬಂಧಿಸಿದಂತೆ ನಿರುಕ್ತ, ಹಾಗೂ ಬ್ರಾಹ್ಮಣ ಗ್ರಂಥಗಳನ್ನು ನೋಡಿರಿ"., ಎಂದು ಹೇಳಿದರು.

ತತೋ ಮಾಧವಾಚಾರ್ಯೋಕ್ತಮ್ — "ಪುರಾಣ–ಶಬ್ದೋ ವೇದೇಷ್ವಸ್ತಿ ನ ವಾ?", ಇತಿ.

ಆಗ, ಮಾಧವಾಚಾರ್ಯರು—'ಪುರಾಣ' ಶಬ್ದವು ವೇದಗಳಲ್ಲಿದೆಯೋ, ಅಥವಾ ಇಲ್ಲವೋ?", ಎಂದು ಕೇಳಿದು.

ತದಾ ಸ್ವಾಮಿನೋಕ್ತಮ್—"'ಪುರಾಣ'-ಶಬ್ದಸ್ತು ಬಹುಷು ಸ್ಥಲೇಷು ವೇದೇಷು ದೃಶ್ಯತೇ. ಪರಂತು ಪುರಾಣಶಬ್ದೇನ ಕದಾಚಿದ್ ಬ್ರಹ್ಮ-ವೈವರ್ತಾದಿಗ್ರಂಥಾನಾಂ ಗ್ರಹಣಂ ನ ಭವತಿ! ಕುತಃ? ಪುರಾಣಶಬ್ದಸ್ತು ಭೂತಕಾಲವಾಚ್ಯಸ್ತಿ; ಸರ್ವತ್ರ ದ್ರವ್ಯವಿಶೇಷಣಂ ಚ", ಇತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದಕ್ಕೆ, ಸ್ವಾಮೀಜೀಯವರು—"'ಪುರಾಣ' ಶಬ್ದವಂತೂ ವೇದಗಳಲ್ಲಿ ಬಹಳ ಕಡೆ ಬಂದಿದೆ. ಆದರೆ, 'ಪುರಾಣ' ಶಬ್ದದಿಂದ ಬ್ರಹ್ಮವೈವರ್ತಾದಿ ಗ್ರಂಥಗಳೆಂಬುದಾಗಿ ಎಂದಿಗೂ ಗ್ರಹಿಸುವುದಕ್ಕಾಗುವುದಿಲ್ಲ. ಏಕೆಂದರೆ, 'ಪುರಾಣ' ಶಬ್ದವು ಭೂತಕಾಲವಾಚಕವಾಗಿದೆ. ಮತ್ತು ಎಲ್ಲ ಕಡೆಯೂ ದ್ರವ್ಯದ ವಿಶೇಷಣವಾಗಿರುತ್ತದೆ"., ಎಂದು ಹೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—

"'ಏತಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದ್ಋಗ್ವೇದೋ ಯಜುರ್ವೇದಃ ಸಾಮವೇದೋ ಽಥರ್ವಾಂಗಿರಸ ಇತಿಹಾಸಃ ಪುರಾಣಂ ಶ್ಲೋಕಾ ವ್ಯಾಖ್ಯಾನಾನ್ಯನುವ್ಯಾಖ್ಯಾನಾನಿ".*

"ಇತ್ಯತ್ರ ಬೃಹದಾರಣ್ಯಕೋಪನಿಷದಿ ಪಠಿತಸ್ಯ ಸರ್ವಸ್ಯ ಪ್ರಾಮಾಣ್ಯಂ ವರ್ತ್ತತೇ ನ ವಾ?" ಇತಿ.

ಪುನಃ, ವಿಶುದ್ಧಾನಂದ ಸ್ವಾಮಿಗಳು—"ಬೃಹದಾರಣ್ಯಕೋಪನಿಷತ್ತಿನ ಈ ಮಂತ್ರದಲ್ಲಿ, ಎಂದರೆ—

'ಏತಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದ್ಋಗ್ವೇದೋ ಯಜುರ್ವೇದಃ ಸಾಮವೇದೋ ಽಥರ್ವಾಂಗಿರಸ ಇತಿಹಾಸಃ ಪುರಾಣಂ ಶ್ಲೋಕಾ ವ್ಯಾಖ್ಯಾನಾನ್ಯನುವ್ಯಾಖ್ಯಾನಾನೀತಿ';

"ಈ [ಮಂತ್ರದಲ್ಲಿ] ಹೇಳಿರುವ ಎಲ್ಲದಕ್ಕೂ ಪ್ರಮಾಣವಿದೆಯೋ, ಅಥವಾ ಇಲ್ಲವೋ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಅಸ್ತ್ಯೇವ ಪ್ರಾಮಾಣ್ಯಮ್", ಇತಿ.

ಅದಕ್ಕೆ, ಸ್ವಾಮೀಜೀಯವರು—"ಹೌದು, ಪ್ರಮಾಣವಿದೆ", ಎಂದು ಹೇಳಿದರು.

---

*ಬೃಹದಾರಣ್ಯಕೋಪನಿಷತ್ (2.4.10)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ವಿಶುದ್ಧಾನಂದಸ್ವಾಮಿನೋಕ್ತಮ್ — "ಶ್ಲೋಕಸ್ಯಾಪಿ ಪ್ರಾಮಾಣ್ಯಂ ಚೇತ್ತದಾ ಸರ್ವೇಷಾಂ ಪ್ರಾಮಾಣ್ಯಮಾಗತಮ್!", ಇತಿ.

ಆಗ, ವಿಶುದ್ಧಾನಂದ ಸ್ವಾಮಿಗಳು—"ಒಂದು ವೇಳೆ, ಶ್ಲೋಕಕ್ಕೂ ಪ್ರಮಾಣವಿದ್ದರೆ, ಎಲ್ಲಕ್ಕೂ ಪ್ರಮಾಣ ದೊರಕಿತು!", ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"ಸತ್ಯಾನಾಮೇವ ಶ್ಲೋಕಾನಾಂ ಪ್ರಾಮಾಣ್ಯಂ; ನಾನ್ಯೇಷಾಮ್", ಇತಿ.

ಆದಕ್ಕೆ, ಸ್ವಾಮೀಜೀಯವರು—"ಸತ್ಯಶ್ಲೋಕಗಳಿಗೆ ಮಾತ್ರ ಪ್ರಮಾಣ ಅಂಗೀಕರಿಸಲ್ಪಡುತ್ತದೆ. ಬೇರೆಯವುಗಳ ಬಗ್ಗೆ ಅಲ್ಲ". ಎಂದು ಹೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್—"ಅತ್ರ 'ಪುರಾಣ'ಶಬ್ದಃ ಕಸ್ಯ ವಿಶೇಷಣಮ್?," ಇತಿ.

ಆಗ, ವಿಶುದ್ಧಾನಂದ ಸ್ವಾಮಿಗಳು—"ಇಲ್ಲಿ 'ಪುರಾಣ' ಶಬ್ದವು ಯಾವುದರ ವಿಶೇಷಣವಾಗಿದೆ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಪುಸ್ತಕಮಾನಯ. ಪಶ್ಚಾದ್ವಿಚಾರಃ ಕರ್ತ್ತವ್ಯಃ", ಇತಿ.

ಇದಕ್ಕೆ, ಸ್ವಾಮೀಜೀಯವರು—"ಪುಸ್ತಕವನ್ನು ತೆಗೆದುಕೊಂಡು ಬನ್ನಿರಿ. ಆಗ ಅದರ ವಿಚಾರ ಮಾಡೋಣ", ಎಂದು ಹೇಳಿದರು.

ತದಾ ಮಾಧವಾಚಾರ್ಯೇಣ ವೇದಸ್ಯ* ದ್ವೇ ಪತ್ರೇ ನಿಸ್ಸಾರಿತೇ. "ಅತ್ರ ಪುರಾಣಶಬ್ದಃ ಕಸ್ಯ ವಿಶೇಷಣಮ್?", ಇತ್ಯುಕ್ತ್ವಾ....", ಇತಿ.

ಆಗ, **ಮಾಧವಾಚಾರ್ಯರು** ವೇದಗಳ* ಎರಡು ಹಾಳಗಳನ್ನು ತೆಗೆದು ತೋರಿಸುತ್ತಾ—"ಇಲ್ಲಿ 'ಪುರಾಣ' ಶಬ್ದವು ಯಾವುದರ ವಿಶೇಷಣವಾಗಿದೆ?", ಎಂದು ಕೇಳಿದರು.

---

*ಇದೂ ಕೂಡ, ಪಂಡಿತರ ಮತವಾಗಿತ್ತು; ಸ್ವಾಮೀಜೀಯವರ ಮತವಲ್ಲ. ಏಕೆಂದರೆ, ಅವು 'ಗೃಹ್ಯಸೂತ್ರ'ದ ಹಾಳೆಗಳಾಗಿದ್ದುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ಸ್ವಾಮಿನೋಕ್ತಮ್—"ಕೀದೃಶಮಸ್ತಿ ವಚನಮ್? ಪಶ್ಯತಾಮ್", ಇತಿ.

ಆದಕ್ಕೆ, ಸ್ವಾಮೀಜೀಯವರು—"ಅದು ಯಾವ ವಚನ? ಓದಿ ಹೇಳಿ", ಎಂದರು.

ತದಾ ಮಾಧವಾಚಾರ್ಯೇಣ ಪಾಠಃ ಕೃತಸ್ತತ್ರೇದಂ ವಚನಮಸ್ತಿ—'ಬ್ರಾಹ್ಮಣಾನೀತಿಹಾಸಃ ಪುರಾಣಾನೀತಿ'.

ಆಗ, ಮಾಧವಾಚಾರ್ಯರು—

"ಬ್ರಾಹ್ಮಣಾನೀತಿಹಾಸಃ ಪುರಾಣಾನೀತಿ"., ಎಂದು ಓದಿದರು.

ತದಾ ಸ್ವಾಮಿನೋಕ್ತಮ್—"ಪುರಾಣಾನಿ ಬ್ರಾಹ್ಮಣಾನಿ ನಾಮ; ಸನಾತನಾನೀತಿ ವಿಶೇಷಣಮ್", ಇತಿ.

ಇದಕ್ಕೆ, ಸ್ವಾಮೀಜೀಯರು—"ಇಲ್ಲಿ 'ಪುರಾಣ' ಶಬ್ದವು 'ಬ್ರಾಹ್ಮಣ'ದ ವಿಶೇಷಣವಾಗಿದೆ. ಏಕೆಂದರೆ, ಬ್ರಾಹ್ಮಣಗಳು ಪ್ರಾಚೀನ, ಸನಾತನವಾಗಿವೆ", ಎಂದು ಹೇಳಿದರು.

ತದಾ ಬಾಲಶಾಸ್ತ್ರ್ಯಾದಿಭಿರುಕ್ತಮ್—"ಬ್ರಾಹ್ಮಣಾನಿ ನವೀನಾನಿ ಭವಂತಿ ಕಿಮ್?", ಇತಿ.

ಆಗ, ಬಾಲಶಾಸ್ತ್ರಿ ಮೊದಲಾದವರು—"ಯಾವ ಬ್ರಾಹ್ಮಣಗಳಾದರೂ ನವೀನವಾಗಿರುತ್ತವೆಯೇನು?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—ನವೀನಾನಿ ಬ್ರಾಹ್ಮಣಾನೀತಿ ಕಸ್ಯಚಿಚ್ಛಂಕಾऽಪಿ ಮಾ ಭೂದಿತಿ ವಿಶೇಷಣಾರ್ಥಃ".

ಇದಕ್ಕೆ, ಸ್ವಾಮೀಜೀಯವರು—"ಬ್ರಾಹ್ಮಣಗಳು ನವೀನವಲ್ಲ! ಆದರೆ, ಇಂತಹ ಸಂದೇಹ ಯಾರಿಗೂ ಬರದಿರಲಿ, ಎಂದು ಇಲ್ಲಿ ಇದನ್ನು ವಿಶೇಷಣವಾಗಿ ಹೇಳಲಾಗಿದೆ", ಎಂದು ಹೇಳಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ವಿಶುದ್ಧಾನಂದಸ್ವಾಮಿನೋಕ್ತಮ್ — "'ಇತಿಹಾಸ'ಶಬ್ದ-ವ್ಯವಧಾನೇನ ಕಥಂ ವಿಶೇಷಣಂ ಭವೇತ್?", ಇತಿ.

ಆಗ, ವಿಶುದ್ಧಾನಂದ ಸ್ವಾಮಿಗಳು—"ಇಲ್ಲಿ 'ಇತಿಹಾಸ' ಶಬ್ದದ ವ್ಯವಧಾನ*ವಿರುವುದರಿಂದ, ವಿಶೇಷಣ ಹೇಗಾಗುತ್ತದೆ?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"ಅಯಂ ನಿಯಮೋ ನಾಸ್ತಿ ಕಿಂ ವ್ಯವಧಾನಾದ್ವಿಶೇಷಣಯೋಗೋ ನ ಭವೇತ್; ಸನ್ನಿಧಾನಾದೇವ ಭವೇತ್'", ಇತಿ.

"'ಅಜೋ ನಿತ್ಯಶ್ಶಾಶ್ವತೋಽಯಂ ಪುರಾಣೋ ನ', ಇತಿ ದೂರಸ್ಥಸ್ಯ ದೇಹಿನೋ ವಿಶೇಷಣಾನಿ ಗೀತಾಯಾಂ ಕಥಂ ಭವಂತಿ? ವ್ಯಾಕರಣೇಽಪಿ ನಿಯಮೋ ನಾಸ್ತಿ ಸಮೀಪಸ್ಥಮೇವ ವಿಶೇಷಣಂ ಭವೇನ್ನ ದೂರಸ್ಥಮ್", ಇತಿ.

ಇದಕ್ಕೆ, ಸ್ವಾಮೀಜೀಯವರು — "'ವ್ಯವಧಾನವಿರುವುದರಿಂದ, ವಿಶೇಷಣವಾಗುವುದಿಲ್ಲ', ಮತ್ತು 'ವ್ಯವಧಾನವಿರದಿದ್ದರೆ, ಮಾತ್ರ ವಿಶೇಷಣವಾಗುತ್ತದೆ', ಎಂಬ ನಿಯಮವಿದೆಯೇನು? ಏಕೆಂದರೆ, ಗೀತೆಯ—

'ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ.'†

ಈ ಶ್ಲೋಕದಲ್ಲಿ ದೂರಸ್ಥ ದೇಹಿಗೂ ಕೂಡ, ವಿಶೇಷಣವಿಲ್ಲವೇನು? ಮತ್ತು ವ್ಯಾಕರಣಾದಿ ಗ್ರಂಥಗಳಲ್ಲೆಲ್ಲಿಯೂ ಕೂಡ, 'ಸಮೀಪಸ್ಥ ಪದಗಳು ಮಾತ್ರ ವಿಶೇಷಣವಾಗಬಲ್ಲವು; ದೂರಸ್ಥವಲ್ಲ', ಎಂಬ ನಿಯಮವನ್ನು ಮಾಡಿಲ್ಲ.", ಎಂದು ಹೇಳಿದರು.

ತದಾ ವಿಶುದ್ಧಾನಂದಸ್ವಾಮಿನೋಕ್ತಮ್ — "ಇತಿಹಾಸಸ್ಯಾತ್ರ 'ಪುರಾಣ'ಶಬ್ದೋ ವಿಶೇಷಣಂ ನಾಸ್ತಿ. ತಸ್ಮಾದಿತಿಹಾಸೋ ನವೀನೋ ಗ್ರಾಹ್ಯಃ ಕಿಮ್?", ಇತಿ.

---

*ಎಂದರೆ, ಅಡ್ಡಿ, ತಡೆ—ಸಂ.

†ಭಗವದ್ಗೀತಾ (2.20)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗ, **ವಿಶುದ್ಧಾನಂದ ಸ್ವಾಮಿಗಳು**—"ಇಲ್ಲಿ ಇತಿಹಾಸಕ್ಕಂತೂ **'ಪುರಾಣ'** ಶಬ್ದವು ವಿಶೇಷಣವಲ್ಲ. ಆದುದರಿಂದ, ಇತಿಹಾಸವನ್ನು ನವೀನವೆಂಬುದಾಗಿ ಗ್ರಹಿಸಬೇಕೇನು?", ಎಂದು ಕೇಳಿದರು.

ತದಾ ಸ್ವಾಮಿನೋಕ್ತಮ್—"**ಆನ್ಯತ್ರಾಸ್ತ್ಯೀತಿಹಾಸಸ್ಯ 'ಪುರಾಣ'-ಶಬ್ದೋ ವಿಶೇಷಣಮ್. ತದ್ಯಥಾ—**

'ಇತಿಹಾಸಃ ಪುರಾಣಃ ಪಂಚಮೋ ವೇದಾನಾಂ ವೇದಃ'*.ಇತ್ಯುಕ್ತಮ್".

ಅದಕ್ಕೆ, **ಸ್ವಾಮೀಜೀಯವರು**—"ಅನ್ಯಸ್ಥಳದಲ್ಲಿ **'ಪುರಾಣ'** ಶಬ್ದವು ಇತಿಹಾಸದ ವಿಶೇಷಣವಾಗಿದೆ. ಆಲಿಸಿರಿ—

'ಇತಿಹಾಸಃ ಪುರಾಣಃ ಪಂಚಮೋ ವೇದಾನಾಂ ವೇದಃ'* ಇತ್ಯಾದಿ ಗಳಲ್ಲಿ ಹೇಳಲಾಗಿದೆ", ಎಂದು ಹೇಳಿದರು.

ತದಾ ವಾಮನಾಚಾರ್ಯಾದಿಭಿರಯಂ ಪಾಠ ಏವ ವೇದೇ ನಾಸ್ತೀತ್ಯುಕ್ತಮ್.

ಆಗ, **ವಾಮನಾಚಾರ್ಯರು** ಮೊದಲಾದವರು—"ವೇದಗಳಲ್ಲೆಲ್ಲಿಯೂ ಈ ಪಾಠವೇ ಇಲ್ಲ", ಎಂದು ಹೇಳಿದರು.

ತದಾ ದಯಾನಂದಸ್ವಾಮಿನೋಕ್ತಮ್—"**ಯದಿ ವೇದೇಷ್ವಯಂ† ಪಾಠೋ ನ ಭವೇಚ್ಚೇನ್ಮಮ ಪರಾಜಯಃ. ಯದ್ಯಯಂ ಪಾಠೋ ವೇದೇ† ಯಥಾವದ್ಭವೇತ್ ತದಾ ಭವತಾಂ ಪರಾಜಯಶ್ಚೇಯಂ ಪ್ರತಿಜ್ಞಾ ಲೇಖ್ಯಾ**", **ಇತ್ಯುಕ್ತಮ್.**

ತದಾ ಸರ್ವೈರ್ಮೌನಂ ಕೃತಮ್, ಇತಿ.

---

*ಛಾಂದೋಗ್ಯೋಪನಿಷತ್ತಿನಲ್ಲಿ (7-1-4), 'ಇತಿಹಾಸಪುರಾಣಃ', ಎಂಬ ಪಾಠವಿದೆ. ಛಾಂದೋಗ್ಯೋಪನಿಷತ್ತಿನ (7-7-1) ನಲ್ಲಿ 'ಇತಿಹಾಸಪುರಾಣಮ್', ಎಂಬ ಪಾಠವಿದೆ.

†ಇದು ಪಂಡಿತರುಗಳ ಮತವನ್ನನುಸರಿಸಿ, 'ದುರ್ಜನತೋಷನ್ಯಾಯ'ದಂತೆ ಹೇಳಿರುವ ಪದ. ಸಾಮೀಜೀಯವರ ಮತವಲ್ಲ.—ಸಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದಕ್ಕೆ, **ಸ್ವಾಮೀಜೀಯವರು**—"ಒಂದುವೇಳೆ, 'ವೇದ*ದಲ್ಲಿ ಈ ಪಾಠವಿಲ್ಲದಿದ್ದರೆ, ಸೋಲು ನಮ್ಮದಾಗಲಿ! ಮತ್ತು ಇದ್ದ ಪಕ್ಷದಲ್ಲಿ, ಸೋಲು ನಿಮ್ಮದಾಗಲಿ!', ಎಂಬ ಪ್ರತಿಜ್ಞೆಯನ್ನು ಬರೆದಿಡಿ.", ಎಂದು ಹೇಳಿದರು.

ಆಗ, ಎಲ್ಲರೂ ಸುಮ್ಮನಾಗಿ ಬಿಟ್ಟರು!

ತದಾ ಸ್ವಾಮಿನೋಕ್ತಮ್—"**ಇದಾನೀಂ ವ್ಯಾಕರಣೇ 'ಕಲ್ಮ'ಸಂಜ್ಞಾ ಕ್ವಾಪಿ ಲಿಖಿತಾ ನ ವಾ?**", **ಇತಿ.**

ಆಗ, **ಸ್ವಾಮೀಜೀಯವರು**—"ವ್ಯಾಕರಣದಲ್ಲಿ ಎಲ್ಲಿಯಾದರೂ **'ಕಲ್ಮ'**-ಸಂಜ್ಞಾ ಮಾಡಲಾಗಿದೆಯೋ, ಅಥವಾ ಇಲ್ಲವೋ?, ಎಂಬುದನ್ನು ವ್ಯಾಕರಣ ಗೊತ್ತಿರುವವರು ತಿಳಿಸಿ.", ಎಂದು ಕೇಳಿದರು.

ತದಾ ಬಾಲಶಾಸ್ತ್ರಿಣೋಕ್ತಮ್—"**ಏಕಸ್ಮಿನ್ ಸೂತ್ರೇ ಸಂಜ್ಞಾ ತು ನ ಕೃತಾ. ಪರಂತು ಮಹಾಭಾಷ್ಯಕಾರೇಣೋಪಹಾಸಃ ಕೃತಃ**", **ಇತಿ.**

ಆಗ, **ಬಾಲಶಾಸ್ತ್ರಿಗಳು** — "ಸಂಜ್ಞೆಯನ್ನಂತೂ ಮಾಡಿರುವುದಿಲ್ಲ. ಆದರೆ, ಒಂದು ಸೂತ್ರದಲ್ಲಿ ಭಾಷ್ಯಕಾರರು ಉಪಹಾಸ ಮಾಡಿದ್ದಾರೆ.", ಎಂದು ಹೇಳಿದರು.

ತದಾ ಸ್ವಾಮಿನೋಕ್ತಮ್—"**ಕಸ್ಯ ಸೂತ್ರಸ್ಯ ಮಹಾಭಾಷ್ಯೇ ಸಂಜ್ಞಾ ತು ನ ಕೃತಾ? ಉಪಹಾಸಶ್ಚೇತ್ಯುದಾಹರಣಪ್ರತ್ಯುದಾಹರಣಪೂರ್ವಕಂ ಸಮಾಧಾನಂ ವದ**", **ಇತಿ.**

ಇದಕ್ಕೆ, **ಸ್ವಾಮೀಜೀಯವರು**—"ಮಹಾಭಾಷ್ಯದ ಯಾವ ಸೂತ್ರದಲ್ಲಿ ಸಂಜ್ಞೆಯನ್ನಂತೂ ಮಾಡದೇ, ಉಪಹಾಸ ಮಾಡಿದ್ದಾರೆ? ತಿಳಿದಿರುತ್ತೀರಾದರೆ, ಇದಕ್ಕೆ ಉದಾಹರಣೆ-ಪ್ರತ್ಯುದಾಹರಣೆ-ಪೂರ್ವಕವಾಗಿ ಸಮಾಧಾನ ಕೊಡಿ!", ಎಂದು ಹೇಳಿದರು.

---

*ಇದನ್ನು ಅದೇ ಪಂಡಿತರುಗಳ ಮತಾನುಸಾರ ಹೇಳಲಾಗಿದೆ. ಆದರೆ, ಸ್ವಾಮೀಜೀಯವರಂತೂ ಛಾಂದೋಗ್ಯೋಪನಿಷತ್ತನ್ನು ವೇದವೆಂದು ಮನ್ನಿಸುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[ತದಾ] ಬಾಲಶಾಸ್ತ್ರಿಣಾ ಕಿಮಪಿ ನೋಕ್ತಮನ್ಯೇನಾಪಿ ಚೇತಿ.

ಆಗ, ಬಾಲಶಾಸ್ತ್ರಿಗಳೂ, ಮತ್ತು ಇತರರೂ ಕೂಡ, ಏನನ್ನೂ ಹೇಳಲಿಲ್ಲ!

ತದಾ ಮಾಧವಾಚಾರ್ಯೇಣ ದ್ವೇ ಪತ್ರೇ ವೇದಸ್ಯ ನಿಸಾಯ್ಯ ಸರ್ವೇಷಾಂ ಪಂಡಿತಾನಾಂ ಮಧ್ಯೇ ಪ್ರಕ್ಷಿಪ್ತೇ. ಅತ್ರ—

"'ಯಜ್ಞಸಮಾಪ್ತೌ ಸತ್ಯಾಂ ದಶಮೇ ದಿವಸೇ ಪುರಾಣಾನಾಂ ಪಾಠಂ ಶೃಣುಯಾದ್', ಇತಿ ಲಿಖಿತಮ್.

"ಅತ್ರ 'ಪುರಾಣ'-ಶಬ್ದಃ ಕಸ್ಯ ವಿಶೇಷಣಮ್?", ಇತ್ಯುಕ್ತಮ್.

ನಂತರ, ಮಾಧವಾಚಾರ್ಯರು ವೇದಗಳ* ಎರಡು ಹಾಳೆಗಳನ್ನು† ತೆಗೆದು, ಪಂಡಿತರುಗಳ ಮಧ್ಯೆ ಇಟ್ಟರು. ಮತ್ತು—

"ಇಲ್ಲಿ, 'ಯಜ್ಞದ ಸಮಾಪ್ತಿಯಾದ ನಂತರ, ಹತ್ತನೆಯ ದಿನ ಯಜಮಾನನು ಪುರಾಣಗಳ ಪಾಠವನ್ನು ಆಲಿಸಬೇಕು,' ಎಂಬುದಾಗಿ ಬರೆದಿದೆ. ಇಲ್ಲಿ 'ಪುರಾಣ' ಶಬ್ದವು ಯಾವುದರ ವಿಶೇಷಣವಾಗಿದೆ?", ಎಂದು ಕೇಳಿದರು.

‡ [ಆಗ, ಸ್ವಾಮೀಜೀಯವರು—"ಈ ಹಾಳೆಗಳಲ್ಲಿ ಯಾವ ರೀತಿಯ ಪಾಠವಿದೆ, ಎಂಬುದನ್ನು ಓದಿ.", ಎಂದು ಹೇಳಿದರು.

ಯಾವಾಗ ಯಾವನೂ ಅದನ್ನು ಓದಲಿಲ್ಲವೋ, ಆಗ ವಿಶುದ್ಧಾನಂದರು ಆ ಹಾಳೆಗಳನ್ನು ತೆಗೆದುಕೊಂಡು, ಸ್ವಾಮೀಜೀಯವರ ಕಡೆಗೆ ನೀಡಿ—"ನೀವೇ ಓದಿ", ಎಂದು ಹೇಳಿದರು.

ಸ್ವಾಮೀಜೀಯವರು—"ತಾವೇ ಇದನ್ನು ಓದಿ", ಎಂದು ಹೇಳಿದರು.

---

*ಇದು ಪಂಡಿತರ ಮತಾನುಸಾರ ಹೇಳಲಾಗಿದೆ; ಸ್ವಾಮೀಜೀಯವರ ಮತಾನುಸಾರವಲ್ಲ.

†ಈ ಹಾಳೆಗಳು ಗೃಹ್ಯಸೂತ್ರದ ಪಾಠದವಾಗಿದ್ದುವು; ವೇದಗಳದ್ದಲ್ಲ!

‡ಕೋಷ್ಠಾಂತರ್ಗತ ಪಾಠವು ಸಂಸ್ಕೃತಭಾಗದಲ್ಲಿಲ್ಲ.—ಯು.ಮೀ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಾ ವಿಶುದ್ಧಾನಂದಸ್ವಾಮಿನಾ ದಯಾನಂದಸ್ವಾಮಿನೋ ಹಸ್ತೇ ಪತ್ರೇ ದತ್ತೇ.

ಆಗ, ವಿಶುದ್ಧಾನಂದ ಸ್ವಾಮಿಗಳು—"ನಾನು ಕನ್ನಡಕವಿಲ್ಲದೇ, ಓದಲಾರೆ",] ಎಂದು ಹೇಳಿ, ಆ ಹಾಳೆಗಳನ್ನು ತೆಗೆದುಕೊಂಡು, ದಯಾನಂದ ಸ್ವಾಮೀಜೀಯವರ ಕೈಗೆ ಕೊಟ್ಟರು.

ತದಾ ಸ್ವಾಮೀ ಪತ್ರೇ ದ್ವೇ ಗೃಹೀತ್ವಾ ಪಂಚ ಕ್ಷಣಮಾತ್ರಂ ವಿಚಾರಂ ಕೃತವಾನ್. ತತ್ರೇದಂ ವಚನಂ ವರ್ತತೇ—

'ದಶಮೇ ದಿವಸೇ ಯಜ್ಞಾಂತೇ ಪುರಾಣವಿದ್ಯಾವೇದಃ, ಇತ್ಯಸ್ಯ ಶ್ರವಣಂ ಯಜಮಾನಃ ಕುರ್ಯ್ಯಾದ್', ಇತಿ.*

ನಂತರ, ಸ್ವಾಮೀಜೀಯವರು ಎರಡು ಹಾಳೆಗಳನ್ನೂ ತೆಗೆದುಕೂಂಡು, ಐದು ಕ್ಷಣಮಾತ್ರ ವಿಚಾರ ಮಗ್ನರಾದರು. [ಅದರಲ್ಲಿ—'ಯಜ್ಞಸಮಾಪ್ತಿಯ ನಂತರ, ಹತ್ತನೆಯ ದಿನ ಯಜಮಾನನು ಪುರಾಣವಿದ್ಯಾವೇದದ ಶ್ರವಣ ಮಾಡಬೇಕು', ಎಂಬುದಾಗಿ ಪಾಠವಿದ್ದಿತು.] ಕೆಳಕಂಡಂತೆ ವಿಚಾರ ಮಾಡುವುದರಲ್ಲಿ ಐದು ಕ್ಷಣಗಳು ಕಳೆದಿರಬಹುದು—

ಅಸ್ಯಾಯಮರ್ಥಃ—'ಪುರಾಣೇ ಚಾಸೌ ವಿದ್ಯಾ ಚ ಪುರಾಣವಿದ್ಯಾ. ಪುರಾಣವಿದ್ಯೇವ ವೇದಃ ಪುರಾಣವಿದ್ಯಾವೇದ ಇತಿ ನಾಮ ಬ್ರಹ್ಮವಿದ್ಯೈವ ಗ್ರಾಹ್ಯಾ. ಕುತಃ ? ಏತದನ್ಯತ್ರರ್ಗ್ವೇದಾದೀನಾಂ ಶ್ರವಣಮುಕ್ತಂ ನ ಚೋಪನಿಷದಾಮ್. ತಸ್ಮಾದುಪನಿಷದಾಮೇವ ಗ್ರಹಣಂ, ನಾನ್ಯೇಷಾಮ್. 'ಪುರಾಣವಿದ್ಯಾವೇದೋऽಪಿ ಬ್ರಹ್ಮವಿದ್ಯೈವ ಭವಿತುಮರ್ಹತಿ; ನಾನ್ಯೇನವೀನಾ ಬ್ರಹ್ಮವೈವರ್ತಾದಯೋ ಗ್ರಂಥಾಶ್ಚೇತಿ.

---

*ಶತಪಥ ಬ್ರಾಹ್ಮಣ (13-4-3-13)ದಲ್ಲಿ 'ನವಮೇऽಹನಿ ಪುರಾಣಪಾಠ.', ದ ನಿರ್ದೇಶವಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಯದಿ ಹ್ಯೇವಂ ಪಾಠೋ ಭವೇದ್, ಬ್ರಹ್ಮವೈವರ್ತಾದಯೋSಷ್ಟಾದಶ ಗ್ರಂಥಾಃ ಪುರಾಣಾನಿ ಚೇತಿ, ಕ್ವಾಪ್ಯೇವ ವೇದೇಷು* ಪಾಠೋ ನಾಸ್ತ್ಯೇವ. ತಸ್ಮಾತ್ ಕದಾಚಿತ್ತೇಷಾಂ ಗ್ರಹಣಂ ನ ಭವೇದೇವೇತ್ಯರ್ಥಕಥನಸ್ಯೇಚ್ಛಾ ಕೃತಾ, [ತಾವತ್ಯೇವ]'—

ಇದರ ಅರ್ಥ ಹೀಗಿದೆ—

'ಪುರಾತನ ವಿದ್ಯೆಯು ಯಾವುದಿದೆಯೋ, ಅದನ್ನು **'ಪುರಾಣವಿದ್ಯಾ'**, ಎಂದು ಹೇಳುತ್ತಾರೆ. ಮತ್ತು ಯಾವ **'ಪುರಾಣವಿದ್ಯಾ'** ವೇದವಾಗಿದೆಯೋ, ಅದೇ **'ಪುರಾಣವಿದ್ಯಾವೇದ'**, ಎಂದು ಹೇಳಲ್ಪಡುತ್ತದೆ. ಈ ಮೊದಲಾದುವುಗಳಿಂದ, ಇಲ್ಲಿ ಅದನ್ನು **'ಬ್ರಹ್ಮವಿದ್ಯಾ'**, ಎಂದೇ ಗ್ರಹಿಸಬೇಕಾಗುತ್ತದೆ. ಏಕೆಂದರೆ, ಪೂರ್ವಪ್ರಕರಣದಲ್ಲಿ ಋಗ್ವೇದಾದಿ ನಾಲ್ಕು ವೇದ ಮೊದಲಾದುವುಗಳನ್ನಂತೂ ಶ್ರವಣ ಮಾಡಬೇಕು, ಎಂದು ಹೇಳಲಾಗಿದೆ. ಆದರೆ, ಉಪನಿಷತ್ತುಗಳ ಬಗ್ಗೆ [ಆ ರೀತಿ] ಹೇಳಿರುವುದಿಲ್ಲ. ಆದ್ದರಿಂದ, ಇಲ್ಲಿ ಉಪನಿಷತ್ತುಗಳದ್ದೆಂದೇ ಗ್ರಹಿಸಬೇಕು. ಬೇರೆಯವುಗಳದ್ದನ್ನಲ್ಲ!

'ಪುರಾಣವಿದ್ಯಾವೇದ', ಎಂದರೆ, ಪುರಾತನ ವಿದ್ಯೆಯು ವೇದಗಳದೇ ಆದ ಬ್ರಹ್ಮವಿದ್ಯೆಯಾಗಿರುತ್ತದೆ. ಇದರಿಂದ, ಬ್ರಹ್ಮವೈವರ್ತಾದಿ ನವೀನ ಗ್ರಂಥಗಳನ್ನು ಎಂದಿಗೂ ಗ್ರಹಿಸಲಾಗುವುದಿಲ್ಲ.

'ಏಕೆಂದರೆ, ಒಂದುವೇಳೆ, ಬ್ರಹ್ಮವೈವರ್ತಾದಿ ಹದಿನೆಂಟು ಗ್ರಂಥಗಳನ್ನು ಪುರಾಣಗಳೆಂದು ಕರೆಯುವುದಾದರೆ, ವೇದ†ಗಳಲ್ಲೆಲ್ಲಿಯೂ ಈ ತರಹದ ಪಾಠ ಬರುವುದಿಲ್ಲ. ಆದ್ದರಿಂದ, ಇಲ್ಲಿ ಎಂದಿಗೂ ಹದಿನೆಂಟು ಪುರಾಣಗಳೆಂದು ಗ್ರಹಿಸುವುದು ಸಾಧ್ಯವಿಲ್ಲ'.

---

*ಇದೂ ಕೂಡ, ಪಂಡಿತರುಗಳ ಮತದಂತೆ ಹೇಳಲಾಗಿದೆ; ಸ್ವಾಮೀಜೀಯವರ ಮತದಂತಲ್ಲ.

†ಇದು ಪಂಡಿತರುಗಳ ಮತದಂತೆ ಬರೆಯಲಾಗಿದೆ. ಸ್ವಾಮೀಜೀಯವರ ಮತವಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ರೀತಿಯಾಗಿ, ಉತ್ತರವನ್ನು ಹೇಳಬೇಕೆಂದಿರುವಾಗಲೇ—

ತದಾ ವಿಶುದ್ಧಾನಂದಸ್ವಾಮೀ—'ಮಮ ವಿಲಂಬೋ ಭವತೀದಾನೀಂ ಗಚ್ಛಾಮೀ'ತ್ಯುಕ್ತ್ವಾ ಗಮನಾಯೋತ್ಥಿತೋ೽ಭೂತ್. ತತಃ ಸರ್ವೇ ಪಂಡಿತಾ ಉತ್ಥಾಯ ಕೋಲಾಹಲಂ* ಕೃತ್ವಾ ಗತಾಃ; ಏವಂ ಚ ತೇಷಾಂ ಕೋಲಾಹಲಮಾತ್ರೇಣ ಸರ್ವೇಷಾಂ ನಿಶ್ಚಯೋ ಭವಿಷ್ಯತಿ ದಯಾನಂದ ಸ್ವಾಮಿನಃ ಪರಾಜಯೋ ಜಾತ ಇತಿ.

ಆಗ, ವಿಶುದ್ಧಾನಂದ ಸ್ವಾಮಿಗಳು ಎದ್ದು ನಿಂತುಕೊಂಡರು. ಮತ್ತು—"ನಮಗೆ ವಿಳಂಬವಾಗುತ್ತಿದೆ, ನಾವು ಹೋಗುತ್ತೇವೆ", ಎಂದು ಹೇಳಿದರು.

ಆಗ, ಎಲ್ಲ ಪಂಡಿತರೂ ಎದ್ದು ನಿಂತು, ದಯಾನಂದ ಸ್ವಾಮಿಯವರು ಪರಾಜಯಗೊಂಡರೆಂಬುದಾಗಿ ಜನರು ತಿಳಿದು ಕೊಳ್ಳಲೆಂಬ ಉದ್ದೇಶ್ಯದಿಂದ, ಬೊಬ್ಬೆ ಇಡುತ್ತಾ ಹೊರಟು ಹೋದರು.

ಅಥಾತ್ರ ಬುದ್ಧಿಮದ್ಭಿರ್ವಿಚಾರಃ ಕರ್ತ್ತವ್ಯಃ, ಕಸ್ಯ ಜಯೋ ಜಾತಃ? ಕಸ್ಯ ಪರಾಜಯಶ್ಚೇತಿ?

ಆದರೆ, ಇಲ್ಲಿ—ಯಾರ ಜಯವಾಯಿತು? ಮತ್ತು ಯಾರ ಪರಾಜಯವಾಯಿತು?, ಎಂದು ಬುದ್ಧಿವಂತರಾದ ಜನರು ವಿಚಾರ ಮಾಡಬೇಕು.—

ದಯಾನಂದಸ್ವಾಮಿನಶ್ಚತ್ವಾರಃ ಪೂರ್ವೋಕ್ತಾಃ ಪೂರ್ವಪಕ್ಷಾಸ್ಸಂತಿ. ತೇಷಾಂ ಚತುರ್ಣಾಂ ಪ್ರಾಮಾಣ್ಯಂ ನೈವ ವೇದೇಷು ನಿಃಸೃತಮ್! ಪುನಸ್ತಸ್ಯ ಪರಾಜಯಃ ಕಥಂ ಭವೇತ್?

ದಯಾನಂದ ಸ್ವಾಮೀಜೀಯವರದು ಪೂರ್ವೋಕ್ತ ನಾಲ್ಕು ಪ್ರಶ್ನೆಗಳಿದ್ದುವು. ಅವುಗಳಲ್ಲಿ ಯಾವುದರ ಪ್ರಮಾಣವೂ ವೇದಗಳಲ್ಲಿ ಸಿಕ್ಕಲೇ ಇಲ್ಲ. ಮತ್ತೆ, ಅವರ ಪರಾಜಯ ಹೇಗಾಯಿತು?

---

*ಶಾಸ್ತ್ರಾರ್ಥಕ್ಕೆ ಸಂಬಂಧಿಸಿದ ವಾಸ್ತವಿಕ ನಾಟಕೀಯ ವೃತ್ತಾಂತವು 'ವೈದಿಕ ಯಂತ್ರಾಲಯ'ದಿಂದ ಪ್ರಕಾಶಿತವಾದ ಪ್ರಸ್ತುತ 'ಕಾಶೀಶಾಸ್ತ್ರಾರ್ಥ'ದಲ್ಲಿ ಇಲ್ಲ. ಆದರೆ, ಪಂ. ಸತ್ಯವ್ರತ ಸಾಮಶ್ರಮಿಗಳಿಂದ ಪ್ರಕಾಶಿತವಾದ 'ಕಾಶೀಶಾಸ್ತ್ರಾರ್ಥ'ದಲ್ಲಿದೆ. ಇದು ಅವರ 'ಪ್ರತ್ನಕವ್ಯನಂದಿನೀ' ಪತ್ರಿಕೆಯಲ್ಲಿ ಪ್ರಕಟಿತವಾಗಿದೆ.—ಸಂ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾಷಾಣಾದಿಮೂರ್ತಿಪೂಜನ[ತ್ರಿಪುಂಡ್ರಾದಿ]ರಚನಾದಿವಿಧಾಯಕಂ ವೇದವಾಕ್ಯಂ ಸಭಾಯಾಮೇತೈಃ ಸರ್ವೈರ್ನೋಕ್ತಮ್.

ಪಾಷಾಣಾದಿ ಮೂರ್ತಿಪೂಜೆ ಮತ್ತು ತಿಪುಂಡ್ರಾದಿ ಧಾರಣಾ-ವಿಧಾಯಕವಾದ ಒಂದು ವೇದವಚನವನ್ನೂ ಕೂಡ, ಇವರುಗಳಲ್ಲಿಂದ ಯಾವನೊಬ್ಬನೂ ಸಭೆಯಲ್ಲಿ ಹೇಳಲಿಲ್ಲ.

ಯೇಷಾಂ ವೇದವಿರುದ್ಧೇಷು, ವೇದಾಪ್ರಸಿದ್ಧೇಷು ಚ, ಪಾಷಾಣಾದಿ ಮೂರ್ತಿಪೂಜನಾದಿಷು, ಶೈವಶಾಕ್ತವೈಷ್ಣವಾದಿಸಂಪ್ರದಾಯಾದಿಷು, ರುದ್ರಾಕ್ಷತುಲಸೀಕಾಷ್ಠ ಮಾಲಾಧಾರಣಾದಿಷು, ತ್ರಿಪುಂಡ್ರೋರ್ಧ್ವಪುಂಡ್ರಾದಿ-ರಚನಾದಿಷು, ನವೀನೇಷು ಬ್ರಹ್ಮವೈವರ್ತಾದಿಗ್ರಂಥೇಷು ಚ, ಮಹಾನಾಗ್ರಹೋऽಸ್ತಿ, ತೇಷಾಮೇವ ಪರಾಜಯೋ ಜಾತಃ, ಇತಿ ತಥ್ಯಮೇವೇತಿ!

ಆದುದರಿಂದ, ವೇದಗಳಿಗೆ ವಿರುದ್ಧವಾದ, ಹಾಗೂ ವೇದಗಳಿಂದ ಸಿದ್ಧ ಮಾಡಲೂ ಆಗದ, ಪಾಷಾಣಾದಿ ಮೂರ್ತಿಪೂಜೆ, ಶೈವ-ಶಾಕ್ತ-ವೈಷ್ಣವಾದಿ ಸಂಪ್ರದಾಯಗಳು, ರುದ್ರಾಕ್ಷ-ತುಲಸೀ-ಕಾಷ್ಠ-ಮಾಲಾದಿಗಳನ್ನು ಧರಿಸುವುದು, ತ್ರಿಪುಂಡ್ರ, ಊರ್ಧ್ವಪುಂಡ್ರಾದಿಗಳನ್ನು ಧಾರಣೆ ಮಾಡುವುದು, ಮತ್ತು ನವೀನ ಬ್ರಹ್ಮವೈವರ್ತಾದಿ [ಪುರಾಣ] ಗ್ರಂಥಗಳು, ಇವುಗಳಲ್ಲಿ ಯಾರು ಪೂರ್ಣ ವಿಶ್ವಾಸವಿಟ್ಟಿದ್ದರೋ, ಆ ಪಂಡಿತರುಗಳದೇ ಪರಾಜಯವಾಯಿತು! ಇದೇ ಸತ್ಯ!!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಪುರಾಣ' ಶಬ್ದದ ವಿಚಾರ

"ಪುರಾಭವಂ ಪುರಾಭವಾ ವಾ ಪುರಾಭವಶ್ಚ ಇತಿ ಪುರಾಣಂ ಪುರಾಣೇ ಪುರಾಣಃ"

"ಯಾವುದು ಹಳೆಯ ಪದಾರ್ಥವೋ, ಅದಕ್ಕೆ 'ಪುರಾಣ', ಎಂದು ಹೆಸರು. ಅದು ಯಾವಾಗಲೂ ವಿಶೇಷಣವಾಚ್ಯವೇ ಆಗಿರುತ್ತದೆ. ಉದಾಹರಣೆಗಾಗಿ—

ಪುರಾತನ, ಪ್ರಾಚೀನ, ಪ್ರಾಕ್ತನ ಮೊದಲಾದ ಶಬ್ದಗಳು.

ಇವುಗಳ ವಿರುದ್ಧವಾಗಿ ವಿಶೇಷಣ ವಾಚ್ಯಗಳು—ನೂತನ, ನವೀನ, ಅದ್ಯತನ, ಅರ್ವಾಚೀನ ಮೊದಲಾದ ಶಬ್ದಗಳು.

ವಿಶೇಷಣವಾಚೀ ಶಬ್ದಗಳೆಲ್ಲವೂ ಪರಸ್ಪರ ವ್ಯಾವರ್ತಕವಾಗಿರುತ್ತವೆ. ಎಂದರೆ, ಈ ಪದಾರ್ಥ ಹಳೆಯದು; ಮತ್ತು ಈ ಪದಾರ್ಥ ಹೊಸದು, ಎಂಬಂತೆ.

'ಪುರಾಣ', ಎಂಬ ಶಬ್ದವು 'ನವೀನ', ಎಂಬ ಶಬ್ದದ ವ್ಯಾವೃತ್ತಿ ಮಾಡಿ ಬಿಡುತ್ತದೆ. ಎಂದರೆ, ಈ ಪದಾರ್ಥವು ಹಳೆಯದು, ಎಂದೊಡನೆಯೇ, ಇದು ಹೊಸದಲ್ಲ; ಈ ಪದಾರ್ಥವು ಹೊಸದು, ಎಂದೊಡನೆಯೇ, ಇದು ಹಳೆಯದಲ್ಲ, ಎಂದು ನಿರ್ಧಾರ ಮಾಡುತ್ತದೆ.

ಎಲ್ಲೆಲ್ಲಿ, ವೇದ ಮೊದಲಾದ ಶಾಸ್ತ್ರಗಳಲ್ಲಿ, ಪುರಾಣ ಮೊದಲಾದ ಶಬ್ದಗಳು ಬರುತ್ತವೋ, ಅಲ್ಲಲ್ಲಿ ಈ ಅರ್ಥಗಳ ವಾಚಕಗಳೇ ಬರುತ್ತವೆ; ಬೇರೆಯವಲ್ಲ. ಇದೇ ಅರ್ಥವನ್ನೇ ಗೌತಮಮುನಿಕೃತ ನ್ಯಾಯಸೂತ್ರಗಳ ಮೇಲೆ ವಾತ್ಸ್ಯಾಯನ ಮುನಿಯ ಭಾಷ್ಯದಲ್ಲೂ (4-1-62) ಬರೆಯಲಾಗಿದೆ. ಅಲ್ಲಿ ಶತಪಥ ಮೊದಲಾದ ಬ್ರಾಹ್ಮಣಗ್ರಂಥಗಳಿಗೆ ಪುರಾಣ, ಎಂಬ ಹೆಸರನ್ನು ಕೊಡಲಾಗಿದೆ.

ಶಂಕರಾಚಾರ್ಯರೂ ಕೂಡ, ತಮ್ಮ ಶಾರೀರಕಭಾಷ್ಯದಲ್ಲಿ ಮತ್ತು ಉಪನಿಷದ್‌ಭಾಷ್ಯದಲ್ಲಿ ಬ್ರಾಹ್ಮಣಗ್ರಂಥ ಮತ್ತು ಬ್ರಹ್ಮ ವಿದ್ಯೆಗೇ 'ಪುರಾಣ', ಎಂದು ತಿಳಿಸಿದ್ದಾರೆ. ಎಲ್ಲೆಲ್ಲಿ ಪ್ರಶ್ನೋತ್ತರ ಪೂರ್ವಕವಾಗಿ ಕಥೆ ಇರುವುದೋ, ಅದಕ್ಕೆ 'ಇತಿಹಾಸ', ಎಂದೂ, ಬ್ರಾಹ್ಮಣ ಗ್ರಂಥಗಳಲ್ಲಿನ ವಂಶಕಥೆಗೆ 'ಪುರಾಣ', ಎಂದೂ ಹೇಳಿದ್ದಾರೆ."

[ಹುಗಲೀ ಶಾಸ್ತ್ರಾರ್ಥ; ದಿನಾಂಕ 8-4-1873]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಶೀ ಶಾಸ್ತ್ರಾರ್ಥದಲ್ಲಿ ಉಪಸ್ಥಿತ ವಿದ್ವಾಂಸರು ಮತ್ತು ಗಣ್ಯಮಾನ್ಯ ವ್ಯಕ್ತಿಗಳು

ಮೂರ್ತಿಪೂಜೆಯನ್ನು ವೇದೋಕ್ತವೆಂದು ಸಿದ್ಧಪಡಿಸುವುದಕ್ಕಾಗಿ, ಶಾಸ್ತ್ರಾರ್ಥದಲ್ಲಿ ಭಾಗ ವಹಿಸಿದ್ದ ಪೌರಾಣಿಕ ವಿದ್ವಾಂಸರಲ್ಲಿ ಮುಖ್ಯರಾದವರ ಹೆಸರುಗಳನ್ನು ಕೆಳಗೆ ಕೊಡಲಾಗಿದೆ—

1) ಸ್ವಾಮೀ ವಿಶುದ್ಧಾನಂದ ಸರಸ್ವತೀ
2) ಪಂ. ಬಾಲಶಾಸ್ತ್ರೀ
3) ಪಂ. ಶಿವಸಹಾಯ ಶಾಸ್ತ್ರೀ
4) ಮಾಧವಾಚಾರ್ಯ
5) ವಾಮನಾಚಾರ್ಯ
6) ದೇವದತ್ತ ಶರ್ಮಾ
7) ಜಯನಾರಾಯಣ ತರ್ಕವಾಚಸ್ಪತಿ
8) ಚಂದ್ರದತ್ತ ತ್ರಿಪಾಠೀ
9) ರಾಧಾಮೋಹನ ತರ್ಕವಾಗೀಶ
10) ದುರ್ಗಾದತ್ತ
11) ಬಸ್ತೀರಾಮ ದುಬೇ
12) ಕಾಶೀಪ್ರಸಾದ ಶಿರೋಮಣಿ
13) ಹರಿಕೃಷ್ಣ ವ್ಯಾಸ
14) ಅಂಬಿಕಾದತ್ತ ವ್ಯಾಸ
15) ಘನಶ್ಯಾಮ
16) ಠಾಕುರದತ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

17) ಹರಿದತ್ತ ದುಬೇ
18) ಭೈರವದತ್ತ
19) ಶ್ರೀಧರ ಶುಕ್ಲ
20) ವಿಶ್ವನಾಥ ಮೈಥಿಲ
21) ನವೀನನಾರಾಯಣ ತರ್ಕಾಲಂಕಾರ
22) ಮದನಮೋಹನ ಶಿರೋಮಣೀ
23) ಕೈಲಾಶಚಂದ್ರ ಶಿರೋಮಣೀ
24) ಮಾಯಾಕೃಷ್ಣ ವೇದಾಂತೀ
25) ಧನೀರಾಮ
26) ನಾರಾಯಣಶಾಸ್ತ್ರೀ
27) ದೇವಧರ
28) ನರಸಿಂಹಶಾಸ್ತ್ರೀ
29) ಪರಮಹಂಸ ಜವಾಹರದಾಸ ಉದಾಸೀ
30) ತಾರಾಚರಣ ತರ್ಕರತ್ನ
31) ಗಣೇಶಪ್ರಸಾದ ಶ್ರೋತ್ರಿಯ
32) ಸ್ವಾಮೀ ನಿರಂಜನಾನಂದ
33) ರಾಮಶಾಸ್ತ್ರೀ
34) ಶಾಲಿಗ್ರಾಮ
35) ಢುಂಢಿರಾಜಶಾಸ್ತ್ರೀ
36) ರಾಮಮಿಶ್ರಶಾಸ್ತ್ರೀ
37) ಭಾರದ್ವಾಜಶಾಸ್ತ್ರೀ
38) ರಾಮಕೃಷ್ಣ ಶಾಸ್ತ್ರೀ
39) ದಾಮೋದರಶಾಸ್ತ್ರೀ
40) ಬಾಬೂ ಪ್ರಮದಾದಾಸ ಮಿತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಲಿನ ವಿದ್ವಾಂಸರುಗಳಲ್ಲದೇ, ಸ್ವಯಂ ಕಾಶೀನರೇಶರು, ಅವರ ರಾಜಪರಿವಾರದವರು ಮೊದಲಾದ ಗಣ್ಯಮಾನ್ಯ ವ್ಯಕ್ತಿಗಳು ಉಪಸ್ಥಿತ ರಾಗಿದ್ದರು. ಅವರಲ್ಲಿ ಪ್ರಮುಖರಾದವರ ಹೆಸರುಗಳನ್ನು ಕೆಳಗೆ ತೋರಿಸ ಲಾಗಿದೆ:—

1) ಮಹಾರಾಜಾ ಕಾಶೀನರೇಶ ಈಶ್ವರನಾರಾಯಣಸಿಂಹ
2) ಮಹಾರಾಜರ ಸೋದರ
3) ರಾಜಕುಮಾರ ವೀರಶಿವನಾರಾಯಣಸಿಂಹ ಶರ್ಮಾ
4) ಬಾಬೂ ಫತಹನಾರಾಯಣಸಿಂಹ ಶರ್ಮಾ
5) ಐಶ್ವರ್ಯ ನಾರಾಯಣಸಿಂಹ ಶರ್ಮಾ
6) ತೇಜಸಿಂಹ ವರ್ಮಾ, ಮೈನಪುರಿಯ ಶ್ರೀಮಂತ
7) ರಾವ್ ಕೃಷ್ಣದೇವಶರಣಸಿಂಹ
8) ಚೌಧರೀ ಗುರುದತ್ತಸಿಂಹ ಶರ್ಮಾ
9) ಹಜಾರೀ ಯದುನಂದನ ನಾಗಲ
10) ಬಾಬೂ ಹರಿಶ್ಚಂದ್ರ ಗುಪ್ತ (ಭಾರತೇಂದು ಹರಿಶ್ಚಂದ್ರ)
11) ಬಾಬೂ ಗೋಕುಲಚಂದ ಗುಪ್ತ

ಮೇಲಿನ ಪೌರಾಣಿಕ ವಿದ್ವಾಂಸರಿಗೆ ವಿರುದ್ಧವಾಗಿ ಮೂರ್ತಿಪೂಜೆ ಮೊದಲಾದ ಅವೈದಿಕ ಮಂತವ್ಯಗಳ ನಿರ್ಭೀಕ ಆಲೋಚಕರಾದ **ಸ್ವಾಮೀ ದಯಾನಂದ ಸರಸ್ವತಿ**ಯವರು ಕುಳಿದ್ದರು.

ಪೋಲೀಸ್ ಸೂಪರಿಂಟೆಂಡೆಂಟ್ ರಘುನಾಥ ಪ್ರಸಾದರು ವರಾಂಡಾ ದಲ್ಲಿದ್ದು ವ್ಯವಸ್ಥೆ ಮಾಡುತ್ತಿದ್ದರು.

ವರಾಂಡದ ಹೊರಗೆ ಸುಮಾರು ಮುನ್ನೂರು ಜನರು ಅಂಗಳದಲ್ಲಿ ಕುಳಿತಿದ್ದರು.

ಹೊರಗೆ ಮೈದಾನದಲ್ಲಿ ಸುಮಾರು 60 ಸಾವಿರ ಜನರು ಶಾಸ್ತ್ರಾರ್ಥ ನೋಡಲು ಕಿಕ್ಕಿರಿದು ನೆರೆದಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಾಸ್ತ್ರಾರ್ಥ ನಡೆದ ಆನಂದೋದ್ಯಾನವು (ಆನಂದಬಾಗ್) ಅಮೇಠೀ ನರೇಶರಾದ ಮಾಧವಸಿಂಹರದಾಗಿತ್ತು.

ಎರಡೂ ಪಕ್ಷಗಳ ಕಡೆಯವರಾಗಿ ನೇಮಕರಾಗಿದ್ದ ಪಂಡಿತ ಸತ್ಯಪ್ರತ ಸಾಮಶ್ರಮೀ ಅವರು ಶಾಸ್ತ್ರಾರ್ಥದ ವಿವರಣವನ್ನು ತಯಾರಿಸುವ ಲೇಖಕರಲ್ಲಿ ಒಬ್ಬರಾಗಿದ್ದರು.

'ಪ್ರತಿಮಾ' ಶಬ್ದದ ವಿಚಾರ

"ಪ್ರತಿಮೀಯತೇ ಯಯಾ ಸಾ ಪ್ರತಿಮಾ; ಆರ್ಥಾತ್ ಪ್ರತಿಮಾನಮ್.",

ಯಾವುದರಿಂದ ಪ್ರಮಾಣ, ಎಂದರೆ ಪರಿಮಾಣ ಮಾಡಲಾಗುತ್ತದೋ, ಅದಕ್ಕೆ 'ಪ್ರತಿಮಾ', ಎಂದು ಹೆಸರು. ಉದಾಹರಣೆಗಾಗಿ—ಚಟಾಕು, ಅರ್ಧಪಾವು, ಪಾವು, ಸೇರು, ಪಂಜೇರು ಮೊದಲಾದುವು; ಮತ್ತು ಯಜ್ಞದ ಚಮಚ ಮೊದಲಾದ ಪಾತ್ರೆಗಳು. ಇವುಗಳಿಂದ, ಪದಾರ್ಥಗಳ ಅಳತೆ ಮಾಡಲಾಗುತ್ತದೆ. ಆದುದರಿಂದಲೇ, ಇವಕ್ಕೆ 'ಪ್ರತಿಮಾ', ಎಂದು ಹೆಸರು. ಇದೇ ಅರ್ಥವನ್ನೇ ಮನುಮಹಾರಾಜರು 'ಮನುಸ್ಮೃತಿ'ಯಲ್ಲಿ ಬರೆದಿದ್ದಾರೆ—

ತುಲಾಮಾನಂ ಪ್ರತಿಮಾನಂ ಸರ್ವಂ ಚ ಸ್ಯಾತ್ ಸುಲಕ್ಷಿತಮ್ ।
ಪಟ್ಟು ಪಟ್ಟು ಚ ಮಾಸೇಷು ಪುನರೇವ ಪರೀಕ್ಷಯೇತ್ ॥

ಅಂಗಡಿಗಳಲ್ಲಿ ತಕ್ಕಡಿಯಲ್ಲಿಡುವ ತೂಕದ 'ಬಟ್ಟು'ಗಳೆಲ್ಲವಕ್ಕೂ 'ಪ್ರತಿಮಾ', ಎಂದು ಹೆಸರು.

[ಹುಗಲೀ ಶಾಸ್ತ್ರಾರ್ಥ ; ದಿನಾಂಕ 8-4-1873]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸಿದ್ಧ ಶಾಸ್ತ್ರಾರ್ಥಗಳು

ಸ್ವಾಮೀ ದಯಾನಂದರು ಪೌರಾಣಿಕ, ಜೈನ, ಕ್ರೈಸ್ತ ಮತ್ತು ಮುಸಲ್ಮಾನ ವಿದ್ವಾಂಸರೊಂದಿಗೆ ನಡೆಸಿದ ಪ್ರಸಿದ್ಧ ಶಾಸ್ತ್ರಾರ್ಥಗಳಲ್ಲಿ, ಆ ಕಾಲದಲ್ಲಿ ಪ್ರಕಟಿಸಲ್ಪಟ್ಟ ಹಲವು ಮುಖ್ಯ ಶಾಸ್ತ್ರಾರ್ಥಗಳನ್ನು ಕೆಳಗೆ ತೋರಿಸಲಾಗಿದೆ—

1) **ಕಾಶೀ ಶಾಸ್ತ್ರಾರ್ಥ**

ದಿನಾಂಕ : 16-11-1869; ಸ್ಥಾನ : ಕಾಶೀ (ಉತ್ತರ ಪ್ರದೇಶ)
ವಿಷಯ : ಮೂರ್ತಿಪೂಜೆಗೆ ಪ್ರಮಾಣವು ವೇದದಲ್ಲಿದೆಯೋ, ಇಲ್ಲವೋ?

ಪ್ರತಿಪಕ್ಷೀ ವಿದ್ವಾಂಸರು: ಸ್ವಾಮೀ ವಿಶುದ್ಧಾನಂದ, ಪಂ. ಬಾಲಶಾಸ್ತ್ರೀ, ಪಂ. ತಾರಾಚರಣ ಮೊದಲಾದವರು

2) **ಹುಗಲೀ ಶಾಸ್ತ್ರಾರ್ಥ** (ಪ್ರತಿಮಾಪೂಜನವಿಚಾರ)

ದಿನಾಂಕ : 8-4-1873 ; ಸ್ಥಾನ : ಹುಗಲೀ (ಬಂಗಾಳ)
ವಿಷಯ : ಪ್ರತಿಮಾಪೂಜನ
ಪ್ರತಿಪಕ್ಷೀ ವಿದ್ವಾಂಸರು : ಪಂ. ತಾರಾಚರಣ ತರ್ಕರತ್ನ

3) **ಚಾಂದಾಪುರ್ ಶಾಸ್ತ್ರಾರ್ಥ**(ಸತ್ಯಧರ್ಮವಿಚಾರ)

ದಿನಾಂಕ : 19-20, ಮಾರ್ಚ್ 1877 ; ಸ್ಥಾನ : ಚಾಂದಾಪುರ್ ಮೇಲಾ (ಜಿಲ್ಲೆ ಶಾಹ್‌ಜಹಾಂಪುರ) ಉತ್ತರ ಪ್ರದೇಶ.
ವಿಷಯ: ಸೃಷ್ಟಿಯ ಕಾರಣ, ಸಮಯ, ಈಶ್ವರೀಯ ಪುಸ್ತಕ, ಮೋಕ್ಷ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತಿಪಕ್ಷೀ ವಿದ್ವಾಂಸರು : ಮೌಲವೀ ಮುಹಮ್ಮದ್ ಕಾಸಿಂ ಸಾಹಬ್,
ಪಾದರೀ ನೋಬಲ್, ಪಾದರೀ ಸ್ಕಾಟ್

4) ಜಾಲಂಧರ್ ಶಾಸ್ತ್ರಾರ್ಥ

ದಿನಾಂಕ : 24-9-1877 ; ಸ್ಥಾನ : ಜಾಲಂಧರ್ (ಪಂಜಾಬ್)
ವಿಷಯ : ಚಮತ್ಕಾರ ತೋರಿಸುವುದು; ಪುನರ್ಜನ್ಮ
ಪ್ರತಿಪಕ್ಷೀ ವಿದ್ವಾಂಸರು : ಮೌಲವೀ ಅಹಮದ್ ಹುಸೇನ್

5) ಅಜಮೇರ್ ಶಾಸ್ತ್ರಾರ್ಥ

ದಿನಾಂಕ : 28-11-1877 ; ಸ್ಥಾನ : ಅಜಮೇರ್ (ರಾಜಸ್ಥಾನ)
ವಿಷಯ : ಬೈಬಲಿನಲ್ಲಿ ಹೇಳಿದ ಸೃಷ್ಟಿವಿಷಯ
ಪ್ರತಿಪಕ್ಷೀ ವಿದ್ವಾಂಸರು : ಪಾದರೀ ಗ್ರೇ

6) ಬರೇಲೀ ಶಾಸ್ತ್ರಾರ್ಥ (ಸತ್ಯಾಸತ್ಯವಿವೇಕ)

ದಿನಾಂಕ : 25,26,27, ಆಗಸ್ಟ್ 1879 ; ಸ್ಥಾನ : ಬರೇಲೀ
(ಉತ್ತರ ಪ್ರದೇಶ)

ವಿಷಯ : ಪುನರ್ಜನ್ಮ, ಈಶ್ವರನ ಅವತಾರ, ಅಪರಾಧ-ಕ್ಷಮೆ
ಪ್ರತಿಪಕ್ಷೀ ವಿದ್ವಾಂಸರು : ಪಾದರೀ ಟಿ.ಜಿ. ಸ್ಕಾಟ್

7) ಮಸೂದಾ ಶಾಸ್ತ್ರಾರ್ಥ

ದಿನಾಂಕ : 13-7-1881 ಮತ್ತು 30-7-1881 ;
ಸ್ಥಾನ : ಮಸೂದಾ (ರಾಜಸ್ಥಾನ)
ವಿಷಯ : (1) ಜೈನಮತ ಸಿದ್ಧಾಂತ
ಪ್ರತಿಪಕ್ಷೀ ವಿದ್ವಾಂಸರು : ಸಾಧು ಸಿದ್ಧಕರಣ
ವಿಷಯ : (2) ಕ್ರೈಸ್ತಮತ ಸಿದ್ಧಾಂತ
ಪ್ರತಿಪಕ್ಷೀ ವಿದ್ವಾಂಸರು : ಪಾದರೀ ಬಾಬೂ ಬಿಹಾರೀಲಾಲ್
ವಿಷಯ : ಕಬೀರಪಂಥ ಸಿದ್ಧಾಂತ
ಪ್ರತಿಪಕ್ಷೀ ವಿದ್ವಾಂಸರು : ಒಬ್ಬ ಕಬೀರಪಂಥೀ ಸಾಧು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

8) ಉದಯಪುರ ಶಾಸ್ತ್ರಾರ್ಥ

ದಿನಾಂಕ : 11,13,17 ಸೆಪ್ಟೆಂಬರ್ 1882 : ಸ್ಥಾನ : ಉದಯಪುರ (ರಾಜಸ್ಥಾನ)

ವಿಷಯ : ಈಶ್ವರೀಯ ಪುಸ್ತಕ: ವೇದ, ಪುರಾಣ, ವೇದದ ವಿಶೇಷತೆ.

ಪ್ರತಿಪಕ್ಷೀ ವಿದ್ವಾಂಸರು : ಮೌಲವೀ ಅಬ್ದುಲ್ ರಹಮಾನ್, (ಪೋಲೀಸ್ ಸೂಪರಿಂಟೆಂಡೆಂಟ್ ಮತ್ತು ನ್ಯಾಯಾಧೀಶ)

ಈ ಜಗತ್ತಿನ ಸೃಷ್ಟಿಯಾಗಿ ಎಷ್ಟು ಸಮಯವಾಯಿತು?

ಪಾದರೀ ಸ್ಕಾಟ್—ನಮಗೆ ಗೊತ್ತಿಲ್ಲ.

ಮೌಲವೀ ಮುಹಮ್ಮದ್ ಕಾಸಿಮ್—ಈ ಪ್ರಶ್ನೆ ವ್ಯರ್ಥ. ನಮಗೆ ರೊಟ್ಟಿ ತಿನ್ನುವುದು ಪ್ರಯೋಜನ; ಅದು ಯಾವಾಗ ಆಯಿತು, ಎಂಬುದಲ್ಲ!

ಸ್ವಾಮೀ ದಯಾನಂದ ಸರಸ್ವತೀ—ಆಲಿಸಿರಿ, ಸೋದರರೇ! ಈ ಪ್ರಶ್ನೆಯ ಉತ್ತರವನ್ನು ನಾವು ಕೊಡಬಲ್ಲೆವು; ನೀವಾರೂ ಕೊಡಲಾರಿರಿ! ಏಕೆಂದರೆ, ನಿಮ್ಮ ಮತಗಳಲ್ಲಿ, ಸೃಷ್ಟಿಯ ಉತ್ಪತ್ತಿಯನ್ನು ಯಾವನೋ 1800 ವರ್ಷ, 1300 ವರ್ಷ ಮತ್ತು ಯಾವನೋ 500 ವರ್ಷಗಳಿಗೆ ಮೊದಲೆಂದೂ ಹೇಳುತ್ತಾನೆ. ಆದರೆ, ನಾವು ಆರ್ಯಜನರು ಯಾವಾಗ ಸೃಷ್ಟಿಯ ಆರಂಭವಾಯಿತೋ, ಅಂದಿನಿಂದ ಸರಿಸರಿಯಾಗಿ ವಿದ್ವಾಂಸರಾಗುತ್ತಾ ಬಂದಿದ್ದೇವೆ. ಈ ದೇಶದಿಂದಲೇ ಎಲ್ಲ ದೇಶಗಳಿಗೂ ವಿದ್ಯೆ ಹರಡಿದೆ. ನೋಡಿರಿ! ನಾವುಗಳು ಜಗತ್ತಿನ ಉತ್ಪತ್ತಿ ಮತ್ತು ಪ್ರಳಯದ ವಿಷಯವನ್ನು ವೇದ ಮೊದಲಾದ ಶಾಸ್ತ್ರಗಳ ರೀತಿಯಿಂದ ಯಾವಾಗ ನಿಂದಲೂ ತಿಳಿಯುತ್ತಾ ಬಂದಿದ್ದೇವೆ.

[ಮೇಲಾ ಚಾಂದಾಪುರ್ ಶಾಸ್ತ್ರಾರ್ಥ : ದಿನಾಂಕ 20-3-1877]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಮತ್ಕಾರ-ಸಮಾಚಾರ!

ಸ್ವಾಮೀಜೀ—ಚಮತ್ಕಾರವನ್ನು ಯಾವನಾದರೂ ತೋರಿಸಿದ್ದಾನೋ, ಆಥವಾ ತೋರಿಸುವನೋ? ಇದಕ್ಕೇನು ಪ್ರಮಾಣ?

ಮೌಲವೀ ಅಹಮದ್ ಹುಸೇನ್—ಬಹಳ ಪ್ರತಿಷ್ಠಿತ, ಸಮ್ಮಾನಿತ ಜನರು ಚಮತ್ಕಾರಗಳನ್ನು ಮೊದಲು ತೋರಿಸಿದ್ದಾರೆ; ಮತ್ತು ಮುಂದೆ ತೋರಿಸುವರು. ಉದಾಹರಣೆಗಾಗಿ—ಏಸುಕ್ರಿಸ್ತ ಮತ್ತು ಹಜರತ್ ಮುಹಮ್ಮದ್ ಪೈಗಂಬರ್! ಆ ಕಾಲದಲ್ಲಿದ್ದವರು ಅವುಗಳನ್ನು ಕಣ್ಣಾರೆ ನೋಡಿದ್ದರು. ಮತ್ತು ಈಗ ನಾವು ಸಮಾಚಾರ ಕೊಡುವವರಿಂದ ಕೇಳಿ, ಓದಿ ತಿಳಿದೆವು.

ಸ್ವಾಮೀಜೀ—ಇದು ಯುಕ್ತಿಯಿಂದ ಸರಿಯಾಗಿ ಸಿದ್ಧವಾಗಲಿಲ್ಲ. ಏಕೆಂದರೆ, ಆಲಿಸುವುದು ಮತ್ತು ಹೇಳುವುದು, ಎರಡೂ ಸುಳ್ಳೂ ಆಗಬಹುದು; ನಿಜವೂ ಆಗಬಹುದು! ಸ್ವಾರ್ಥೀ ಮನುಷ್ಯರು ಹೀಗೆ ಮಾಡಿ, ತಮ್ಮ ಪ್ರಯೋಜನವನ್ನು ಸಿದ್ಧಿಸಿಕೊಳ್ಳುತ್ತಾರೆ. ಉದಾಹರಣೆಗಾಗಿ—ಈ ಕಾಲದಲ್ಲೂ ಎರಡು-ಮೂರು 'ಅವತಾರ'ಗಳಾಗಿವೆ! ಆಗ್ರಾದ ಶಿವದಯಾಲ ಮತ್ತು ರಾಮಸಿಂಹ ಕೂಕಾ! ಇವರು ಅಂಡಮಾನ್ ದ್ವೀಪಕ್ಕೆ ಹೋಗಿ ಬಿಟ್ಟಿದ್ದಾರೆ! ದಕ್ಷಿಣದಲ್ಲಿ ಅಕ್ಕಲಕೋಟೆಯ ಸ್ವಾಮಿಗಳೊಬ್ಬರಿದ್ದಾರೆ! ಇವರಲ್ಲದೇ, ದೇವ ಮಾಮಲಾದಾರನೆಂಬುವನು ಏಳು ದಿನ ವೈಕುಂಠದಲ್ಲಿದ್ದು ಬಂದು—"ನಾನು ನಾರಾಯಣನೊಡನೆ ಮಾತನಾಡಿ ಬಂದಿದ್ದೇನೆ. ಮತ್ತು ಏನೇನು ಆಪ್ಪಣೆಯಾಯಿತೋ, ಆದೆಲ್ಲವನ್ನೂ ನಿಮಗೆ ತಿಳಿಸುತ್ತೇನೆ", ಎಂದು ಹೇಳಿದ್ದಾನೆ. ಈಗಂತೂ ಲಕ್ಷಾಂತರ ಜನರು ಅವನ ಕಾಲುಗಳಿಗೆ ಎಷ್ಟು ನಮಸ್ಕಾರ ಮಾಡಿದ್ದಾರೆಂದರೆ, ಅವನ ಕಾಲುಗಳು ಊದಿಕೊಂಡು ಬಿಟ್ಟವೆ!

[ಜಾಲಂಧರ್ ಶಾಸ್ತ್ರಾರ್ಥ; ದಿನಾಂಕ 24-9-1877]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವಾಹ ಮತ್ತು ಭೋಜನ ಬೇರೆ; ಧರ್ಮ ಬೇರೆ!

ಮೌಲವೀ ಅಬ್ದುರ್ ರಹಮಾನ್—ಯಾವನಾದರೂ ಪಕ್ಷಪಾತ ಮೊದಲಾದ ದುರ್ಗುಣಗಳಿಂದ ರಹಿತನಾಗಿದ್ದು, 'ಆರ್ಯ'ನಾಗದಿದ್ದರೂ, ಆರ್ಯಜನರು ಅವನೊಡನೆ ಭೋಜನ ಮತ್ತು ವಿವಾಹ ಮೊದಲಾದ ವ್ಯವಹಾರಗಳನ್ನು ಮಾಡುವರೋ? ಅಥವಾ ಇಲ್ಲವೋ?

ಸ್ವಾಮೀಜೀ—ವಿದ್ವಾಂಸ ಜನರು ಭೋಜನ ಮತ್ತು ವಿವಾಹವನ್ನು ಧರ್ಮ, ಅಥವಾ ಧರ್ಮದೊಡನೆ ಸಂಬಂಧಿತವೆಂದು ಅಂಗೀಕರಿಸುವುದಿಲ್ಲ. ಏಕೆಂದರೆ, ಇವುಗಳ ಸಂಬಂಧವು ವಿಶೇಷ ರೀತಿಗಳ, ದೇಶದ ಮತ್ತು ಸಮೀಪಸ್ಥ ಪಂಗಡಗಳೊಡನೆ ಇದೆ. ಇವುಗಳ ಗ್ರಹಣ ಅಥವಾ ತ್ಯಾಗದಿಂದ ಧರ್ಮದ ಉನ್ನತಿ ಅಥವಾ ಹಾನಿ ಆಗುವುದಿಲ್ಲ. ಆದರೆ, ಯಾವುದಾದರೂ ದೇಶ ಅಥವಾ ಪಂಗಡದಲ್ಲಿದ್ದುಕೊಂಡು, ಯಾವುದಾದರೂ ಅನ್ಯಮತದವನೊಡನೆ ಈ ಎರಡೂ ಕಾರ್ಯಗಳಲ್ಲಿ ಸೇರುವುದು ಹಾನಿಕಾರಕವಾಗಿರುತ್ತದೆ. ಅದುದರಿಂದ, ಇದು ಅನುಚಿತ!

[ಉದಯಪುರ ಶಾಸ್ತ್ರಾರ್ಥ; ದಿನಾಂಕ 13-9-1882]

ooo

ತನ್ನ ಜನರ ಸುಧಾರಣೆ ವಿದ್ವಾಂಸನ ಕರ್ತವ್ಯ

"ಯಾರು ಭೋಜನ ಮತ್ತು ವಿವಾಹ ಮೊದಲಾದುವುಗಳ ಮೇಲೆಯೇ ಧರ್ಮವು ಆಧಾರಿತವಾಗಿರುವುದೆಂದು ತಿಳಿಯುತ್ತಾರೋ, ಅವರ ಸುಧಾರಣೆ ಮಾಡುವುದು ವಿದ್ವಾಂಸರ ಕರ್ತವ್ಯವಾಗಿದೆ. ಯಾವನಾದರೂ ವಿದ್ವಾಂಸನು ಅವರಿಂದ ಬೇರೆಯಾಗಿ ಹೋದರೆ, ಆ ಪಂಗಡದ ಜನರಿಗೆ ಅವನ ಬಗ್ಗೆ ಜುಗುಪ್ಸೆಯುಂಟಾಗುವುದು. ಮತ್ತು ಈ ಜುಗುಪ್ಸೆಯು ಅವರನ್ನು ಅವನಿಂದ ಶಿಕ್ಷಣದ ಲಾಭವನ್ನು ಪೊಂದುವುದರಿಂದ ವಂಚಿಸುತ್ತದೆ.

"ಇತರರಿಗೆ ಲಾಭವನ್ನುಂಟುಮಾಡುವುದೇ ಎಲ್ಲ ವಿದ್ಯೆಗಳ ನಿಷ್ಕರ್ಷವಾಗಿದೆ. ಇತರರಿಗೆ ಹಾನಿಯನ್ನುಂಟುಮಾಡುವುದು ಉಚಿತವಲ್ಲ."

[ಉದಯಪುರ ಶಾಸ್ತ್ರಾರ್ಥ; ದಿನಾಂಕ 13-9-1882]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಪಕ್ಷಪಾತ', ಎಂದರೇನು?

ಮೌಲವೀ ಅಬ್ದುರ್ ರಹಮಾನ್—'ಪಕ್ಷಪಾತ', ಎಂದು ತಾವು ಯಾವುದಕ್ಕೆ ಹೇಳುತ್ತೀರಿ?

ಸ್ವಾಮೀಜೀ—ಅವಿದ್ಯೆ, ಕಾಮ, ಕ್ರೋಧ, ಲೋಭ, ಮೋಹ, ಕುಸಂಗದಿಂದ, ತನ್ನ ಸ್ವಾರ್ಥ [ಸಿದ್ಧಿ]ಗಾಗಿ ನ್ಯಾಯ ಮತ್ತು ಸತ್ಯವನ್ನು ಬಿಟ್ಟು, ಅನ್ಯಾಯ ಮತ್ತು ಅಸತ್ಯದ ಧಾರಣ ಮಾಡುವುದು 'ಪಕ್ಷಪಾತ', ಎನ್ನಿಸಿಕೊಳ್ಳುತ್ತದೆ.

[ಉದಯಪುರ ಶಾಸ್ತ್ರಾರ್ಥ; ದಿನಾಂಕ 13-9-1882]

7773

ಹಿಂಹಿಂಹಿ

ವೇದ ಮತ್ತು ಪುರಾಣ

ಮೌಲವೀ ಅಬ್ದುರ್ ರಹಮಾನ್—ಪುರಾಣಗಳು ಮತದ ಪುಸ್ತಕಗಳೋ? ಅಥವಾ ವಿದ್ಯೆಯ ಪುಸ್ತಕಗಳೋ?

ಸ್ವಾಮೀಜೀ—ವೇದ ಮತ್ತು ಪ್ರಾಚೀನ ಪುಸ್ತಕಗಳಾದ ಬ್ರಾಹ್ಮಣ ಗ್ರಂಥಗಳು ವಿದ್ಯೆಯ ಪುಸ್ತಕಗಳು. ಇತರ ಮತ-ಗ್ರಂಥಗಳಂತೆ, ಅರ್ವಾಚೀನವಾದ ಭಾಗವತ ಮೊದಲಾದ ಪುರಾಣಗಳು ಮತದ ಪುಸ್ತಕಗಳು.

ಮೌಲವೀ—ಆರ್ಯರ ಧರ್ಮ ಯಾವುದು?

ಸ್ವಾಮೀಜೀ—ಯಾವುದರಲ್ಲಿ ನಿಷ್ಪಕ್ಷತ್ವ, ನ್ಯಾಯ ಮತ್ತು ಸತ್ಯದ ಅಂಗೀಕಾರವಿದೆಯೋ, ಮತ್ತು ಅಸತ್ಯದ ಅಸ್ವೀಕಾರವಿದೆಯೋ, ಅದು 'ಧರ್ಮ'! ವೇದಗಳಲ್ಲೂ ಇದೇ ಇರುತ್ತದೆ. ಅದುದರಿಂದ, ಅದೇ ಆರ್ಯರ ಪ್ರಾಚೀನಧರ್ಮ. ಪುರಾಣಗಳಂತೂ, ಅನ್ಯ ಮತಗ್ರಂಥಗಳಂತೆ, ಕೇವಲ ಪಕ್ಷಪಾತಪೂರ್ಣ ಸಂಪ್ರದಾಯಗಳಾದ ಶೈವ, ವೈಷ್ಣವ ಮೊದಲಾದುವುಗಳಿಂದ ಸಂಬಂಧಿತವಾಗಿವೆ.

[ಉದಯಪುರ ಶಾಸ್ತ್ರಾರ್ಥ; ದಿನಾಂಕ 13-9-1882]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಶೀ ಶಾಸ್ತ್ರಾರ್ಥ

'ಪತ್ರಿಕೆ'ಗಳ ಅಭಿಪ್ರಾಯ

'ತತ್ವಬೋಧಿನೀ' (ಜ್ಯೇಷ್ಠ ಮಾಸ, ಶಾ.ಶ. 1794)

"ವೇದದಲ್ಲಿ ಪ್ರತಿಮಾಪೂಜನದ ವ್ಯವಸ್ಥೆಯನ್ನು ತೋರಿಸಲಾರದೇ ಹೋದುದರಿಂದ, ಯಾವ ಪಂಡಿತನೂ ಸ್ವಾಮೀ ದಯಾನಂದರನ್ನು ಸೋಲಿಸ ಲಾಗಲಿಲ್ಲ. ಆದುದರಿಂದ, ಸ್ವಾಮೀಜೀಯವರನ್ನು ದೊಡ್ಡ ವೇದವೇತ್ತ ರೆಂದು ತಿಳಯಬೇಕು!"

'ಶುಹೇಲಖಂಡ ಸಮಾಚಾರ' (ನವೆಂಬರ್, 1869)

"ಸ್ವಾಮೀ ದಯಾನಂದ ಸರಸ್ವತಿಯವರು ಕಾಶಿಯ ಪಂಡಿತರುಗಳನ್ನು ಜಯಿಸಿದರು. ಆದರೆ, ಕಾಶಿಯ ಪಂಡಿತರು ಸುಳ್ಳು ಸುಳ್ಳೇ ತಮ್ಮ ಜಯದ ಕಹಳೆಯನ್ನು ಮೊಳಗಿದರು!"

'ಜ್ಞಾನಪ್ರದಾಯಿನೀ ಪತ್ರಿಕಾ' (ಏಪ್ರಿಲ್, 1870)

"ಶಾಸ್ತ್ರಾರ್ಥದಲ್ಲಿ ಎರಡು ಪಕ್ಷಗಳ ಕಡೆಯಿಂದಲೂ ವ್ಯರ್ಥವಾಗಿ ವಿತಂಡಾವಾದವು ಬಹಳ ನಡೆಯಿತು. ಆದರೆ, ಪಂಡಿತರುಗಳು ಪ್ರತಿಮಾ ಪೂಜನವನ್ನು ವೇದಗಳಲ್ಲಿ ತೋರಿಸಲಾರದೇ ಹೋದರು!"

CC-0. In Public Domain. Gurukul Kangri Collection, Haridwar